ಮಂತ್ರಿಗಳು ಕೂಡಲೇ ಪುತ್ತೂರು ಬಸ್ ನಿಲ್ದಾಣದ ಅವ್ಯವಸ್ಥೆಯನ್ನು ಸರಿಪಡಿಸಬೇಕಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಪುತ್ತೂರು ಬಸ್ ನಿಲ್ದಾಣದಲ್ಲಿ ಆ ರೀತಿಯ ಅವ್ಯವಸ್ಥೆಯಿಲ್ಲ. ಅದು ಹೊಸ ಬಸ್ ನಿಲ್ದಾಣವಾದುದರಿಂದ ಕಾಂಕ್ರೀಟ್ ಹಾಕುವುದಕ್ಕೆ ಆಗಿಲ್ಲ. ಶಿಲ್ಟಿಂಗ್ ಹಾಕಿದ ಮೇಲೆ ಒಂದೆರಡು ವರ್ಷ ಬಿಡಬೇಕು, ಆದ್ದರಿಂದ ಟಾರ್ ಹಾಕುವುದಕ್ಕೆ ಆಗಿಲ್ಲ. ಈ ವರ್ಷ ಸಾರಿಗೆ ಸಂಸ್ಥೆಯ ಬಡ್ಜೆಟ್‌ನಲ್ಲಿ ೫ ಲಕ್ಷ ರೂಪಾಯಿಗಳನ್ನು ಅದಕ್ಕೋಸ್ಕರ ಇಟ್ಟಿದ್ದೇವೆ. ಕಳೆದವಾರ ಸದನದಲ್ಲಿ ಇದೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದರು, ಆಗ ಈ ಕೆಲಸಕ್ಕೆ ೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ ಕೆಲಸ ಮಾಡಿಸುತ್ತೇವೆಂದು ಹೇಳಿದ್ದೇನೆ. ಬಾಕಿ ವಿಷಯಗಳನ್ನು ಎತ್ತಿದ್ದಾರೆ, ಅದಕ್ಕೂ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ.

ವಿತ್ತೀಯ ಕಾರ್ಯಕಲಾಪಗಳು

೧೯೭೭–೭೮ನೇ ಸಾಲಿನಲ್ಲಿ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು) ಬೇಡಿಕೆಗಳ ಕ್ರ.ಸಂ. ೩೨, ೩೩, ೩೪, ೪೫, ೪೬ ಮತ್ತು ೪೭ (ಲೋಕೋಪಯೋಗಿ, ನಗರಾಭಿವೃದ್ಧಿ, ಮತ್ತು ವಸತಿ ಇಲಾಖೆಗಳು)

ಅಧ್ಯಕ್ಷರು.—ಈಗಾಗಲೇ ಈ ಬೇಡಿಕೆಗಳ ಮೇಲೆ ೨೦ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇನ್ನೂ ೨೧ ಜನ ಮಾತನಾಡಬೇಕಾಗಿದೆ, ಒಬ್ಬೊಬ್ಬರಿಗೆ ಹತ್ತು ನಿಮಿಷ ಎಂದು ಇಟ್ಟುಕೊಂಡರೂ ಏಳು ಗಂಟೆಯಾಗುತ್ತದೆ. ಇವತ್ತು ಚರ್ಚೆ ಮುಗಿಯಬೇಕು ನಾಳೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಈಗ ಶ್ರೀ ಎಸ್. ಪುಟ್ಟಸ್ವಾಮಿಯವರು ಗೈರು ಹಾಜರಿದ್ದಾರೆ. ಆದ್ದರಿಂದ ಶ್ರೀ ವಿನಯಕುಮಾರ್ ಸೊರಕೆಯವರು ಮಾತನಾಡಬಹುದು ;

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸದಸ್ಯರು ಮಾತನಾಡಲಿ, ಅವರಿಗೆ ಅವಕಾಶ ಕೊಡಿ, ಆದರೆ ತಾವು ಪ್ರೊಸೀಜರ್ ಬಿಡುತ್ತಿದ್ದೀರಿ.

ಅಧ್ಯಕ್ಷರು.—ಅವರು ಮಾತನಾಡಿದ ಮೇಲೆ ನೀವೆ ಮಾತನಾಡಿ. ಮೂರು ಪಾರ್ಟಿಯವರು ಇದ್ದೀರಿ, ಈಗ ಕಾಂಗ್ರೆಸ್‌ನವರನ್ನು ಕರೆದಿದ್ದೇನೆ. ತಮ್ಮ ಪಾರ್ಟಿಯಲ್ಲಿ ತಮ್ಮ ಹೆಸರು ಮೊದಲೇ ಇದೆ, ಆಮೇಲೆ ಜನತಾದವರು. ಮೊದಲು ವಿರೋಧಪಕ್ಷದವರು ಆಮೇಲೆ ಜನತಾದವರು, ಈಗ ವಿನಯಕುಮಾರ್ ಸೊರಕೆಯವರು ಮಾತನಾಡಬಹುದು.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಹಾಗೂ ನಗರಾಭಿವೃದ್ಧಿ ಸಚಿವರು ಮತ್ತು ವಸತಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯಮಂತ್ರಿಗಳು ತಾಳಿದ ಅಭಿಪ್ರಾಯದ ರೀತಿಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಕಾರ್ಯ ಮಾಡುವ ಮಟ್ಟಿಗೆ ಶಹಭಾಷ್‌ಗಿರಿ ಪಡೆಯತಕ್ಕ ಜನರು ನಾವಿದ್ದೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಜಿಲ್ಲಾಪರಿಷತ್ತಿನಲ್ಲಿ ಕುಳಿತು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಒಳ್ಳೆಯ ಕೆಲಸವನ್ನು ಮಾಡಿದೆ, ರಾಜ್ಯದಲ್ಲೇ ಇದು ಪ್ರಥಮ ಸ್ಥಾನದಲ್ಲಿದೆ ಎಂದು ಶಹಭಾಸ್‌ಗಿರಿಯನ್ನು ಕೊಟ್ಟಿದ್ದಾರೆ. ಇದೇರೀತಿಯಲ್ಲಿ ಇತರ ಮಂತ್ರಿಗಳು ಕೂಡ ದಿವಸಕ್ಕೆ ಒಬ್ಬರೋ ಇಬ್ಬರೋ ಅಂತ ತಿಂಗಳಿಗೆ ೩೦ ಮಂದಿ ಮಂತ್ರಿಗಳೂ ಕೂಡ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಅಲ್ಲಿ ವಾಸ ಇದ್ದು ಹೋಗುವ ಸಂಪ್ರದಾಯ ಇದೆ. ಅಲ್ಲಿ ಸುಂದರವಾದ ಸಮುದ್ರ ತೀರ ಇದೆ. ಆದರೆ ನಮ್ಮಲ್ಲಿ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಮಾತ್ರ ಏಕೆ ಹೆಚ್ಚಿನ ತಾರತಮ್ಯ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬರುವಂಥ ಉದ್ದೇಶ ಹೆಚ್ಚಿನಂಶ ಸಮುದ್ರ ತೀರದಲ್ಲಿ ಪ್ರವಾಸಿಗೃಹದಲ್ಲಿ ತಂಗಲಿಕ್ಕೋ ಅಥವಾ ಯಾವ ಕಾರಣಕ್ಕೋಸ್ಕರ ಬರುತ್ತಿದ್ದಾರೋ ಗೊತ್ತಿಲ್ಲ. ಆದರೆ ಅಲ್ಲಿಯ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ

ಹೆಚ್ಚಿನ ತಾರತಮ್ಯ ಮಾಡುವಂಥ ಪರಿಸ್ಥಿತಿ ಇದೆ. ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದಾರೆ ? ಇಲ್ಲಿ ವಿರೋಧಪಕ್ಷದ ಶಾಸಕರು ಇದ್ದಾರೆ ಎಂದು ಈ ರೀತಿ ಮಾಡುತ್ತಿದ್ದಾರೋ ಏನೋ ನನಗೆ ಅದರ ಉದ್ದೇಶ ಗೊತ್ತಾಗುತ್ತಿಲ್ಲ. ತಮ್ಮ ತಮ್ಮ ಕ್ಷೇತ್ರಗಳಿಂದ ಜನರು ಆ ಒಂದು ಕ್ಷೇತ್ರದ ಅಭಿವೃದ್ಧಿಗೋಸ್ಕರ, ಜನರ ಅನುಕೂಲಕ್ಕೋಸ್ಕರ ಅವರ ಸೌಕರ್ಯಕ್ಕೋಸ್ಕರ ನಮ್ಮನ್ನು ಪ್ರತಿನಿಧಿಗಳನ್ನಾಗಿ ಆರಿಸಿ ವಿಧಾನಸಭೆಗೆ ಕಳಿಸಿಕೊಡುತ್ತಾರೆ.

(ಶ್ರೀ ಎಂ.ಎಸ್. ನಾರಾಯಣರಾವ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾವು ವಿರೋಧ ಪಕ್ಷ ಇರಬಹುದು ಅಥವಾ ಆಡಳಿತ ಪಕ್ಷ ಇರಬಹುದು, ಮುಖ್ಯವಾಗಿ ನಾವು ನಮ್ಮ ನಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಭಿವೃದ್ಧಿ ಕೆಲಸಕಾರ್ಯಗಳ ಮಟ್ಟಿಗೆ, ನಮ್ಮ ಕ್ಷೇತ್ರದ ಅನುಕೂಲದ ಮಟ್ಟಿಗೆ ನಮಗೆ ಸಿಕ್ಕಿದಂಥ ವೇದಿಕೆಯಲ್ಲಿ ಪ್ರಸ್ತಾಪ ಮಾಡಿ ಆದಷ್ಟು ಶೀಘ್ರವಾಗಿ ಪರಿಹಾರ ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾವು ಹೊಸಬರು, ಶಾಸಕರಾಗಿ ಈ ವರ್ಷ ವಿಧಾನಸಭೆಗೆ ಬರುವಂಥ ಅವಕಾಶ ನಮಗೆ ಸಿಕ್ಕಿದೆ. ಆದರೆ......

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗಳ ಬಗ್ಗೆ ಮಾತನಾಡುತ್ತಿದ್ದೇವೆ. ಸಂಬಂಧಪಟ್ಟ ವಸತಿ ರಾಜ್ಯ ಮಂತ್ರಿಗಳೇ ಇಲ್ಲವೆಂದರೆ ಹೇಗೆ ? ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇದ್ದಾರೆ. ಆದರೆ ವಸತಿ ಇಲಾಖೆಯ ಮಂತ್ರಿಗಳು ಇಲ್ಲ. ಯಾರು ಏನು ಹೇಳುತ್ತಾರೆ ಎಂದು ನೋಡುವವರು ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ – ಸಂಬಂಧಪಟ್ಟ ಮಂತ್ರಿಗಳು ಊಟಕ್ಕೆ ಹೋಗಿದ್ದಾರೆ, ಬರುತ್ತಾರೆ. ನಾನು ನೋಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆಯಾಗುವಾಗಲೇ ಅವರು ಹೊರಗೆ ಹೋಗಬೇಕೇ ? ಅವರು ಇಲ್ಲದಿದ್ದರೆ ತಾವು ಇಂಟರ್‌ವಲ್ ಕೊಟ್ಟುಬಿಡಿ. ನಾವೂ ಸ್ವಲ್ಪ ಹೊರಗೆ ಹೋಗಿ ಬರುತ್ತೇವೆ.

ಛೇರ್ಮನ್.—ಶ್ರೀ ಸಿಂಧ್ಯ ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅವರಿಗೆ ಸ್ವಲ್ಪ ಹೇಳಬೇಕು.

(ಶ್ರೀ ಮಹಮದ್ ಮೊಹಿನುದ್ದೀನ್ (ವಸತಿ ರಾಜ್ಯ ಮಂತ್ರಿ) ಅಷ್ಟರಲ್ಲಿ ಸದನದೊಳಗೆ ಆಗಮಿಸಿದರು)

ಛೇರ್ಮನ್.—ಅವರು ಬಂದರು ನೋಡಿ. ಈಗ ನೀವು ಮಾತನಾಡಿ.

ಶ್ರೀ ವಿನಯಕುಮಾರ್ ಸೊರಕೆ —ನಾವು ಹೊಸ ಶಾಸಕರು ಈ ಸಲ ವಿಧಾನ ಸಭೆಗೆ ಬರತಕ್ಕಂಥ ಅವಕಾಶ ಸಿಕ್ಕಿದೆ. ನಮ್ಮ ಸಮಸ್ಯೆಗಳನ್ನು, ನಮ್ಮ ಕ್ಷೇತ್ರದ ಅಭಿವೃದಿ, ಕೆಲಸಕಾರ್ಯಗಳ ಬಗ್ಗೆ ನಮಗೆ ತಿಳಿದ ಮಟ್ಟಿಗೆ ಮಂತ್ರಿಗಳ ಗಮನಕ್ಕೆ ತಂದು ಅದೇರೀತಿ ಸರ್ಕಾರಕ್ಕೆ ಒತ್ತಾಯ ಮಾಡುವುದನ್ನು ಕಳೆದ ಮೂರು ವರ್ಷಗಳಿಂದ ಮಾಡುತ್ತಿದ್ದೇವೆ. ಆದರೆ ಯಾವುದೇ ಒಂದು ಅಭಿವೃದ್ಧಿ ಕೆಲಸ ನಮ್ಮ ಕ್ಷೇತ್ರದಲ್ಲಿ ಆಗಿರುವುದಿಲ್ಲ. ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಕೆಲವು ಕೆಲಸಗಳು ಆಗಿದ್ದರೂ ಕೂಡ ಅದು ಯಾವರೀತಿ ಆಗುತ್ತವೆ ಎನ್ನುವ ಅಭಿಪ್ರಾಯ ನಮಗೆ ಬರುತ್ತಿಲ್ಲ. ಅಧಿಕಾರಿಗಳ ಅಥವಾ ಮಂತ್ರಿಗಳ ಮಟ್ಟದಲ್ಲಿ ಆಗುತ್ತವೋ ಅಥವಾ ಪ್ರಭಾವಿ ವ್ಯಕ್ತಿಗಳ, ಆಯಾಯ ಊರಿನ ವ್ಯಕ್ತಿಗಳ ಮಾರ್ಗದರ್ಶನದ ರೀತಿಯಲ್ಲಿ ಆಗುತ್ತವೆಯೋ ನನಗೆ ತಿಳುವಳಿಕೆ ಬರುತ್ತಿಲ್ಲ. ಏತಕ್ಕೆಂದರೆ ಕಳೆದ ಮೂರು ವರ್ಷಗಳಲ್ಲಿ ಪುತ್ತೂರು ಕ್ಷೇತ್ರಕ್ಕೆ ಸೀಮಿತವಾಗಿ ಮಾತನಾಡುವುದಾದರೆ ನಮ್ಮಲ್ಲಿ ಹಿಂದೆ ಇದ್ದಂಥ ಒಂದು ಮಾರ್ಗವನ್ನು ಮೇಂಟೇನ ಮಾಡುವಂಥ, ಅದರಲ್ಲಿ ವಾಹನಗಳ ಸಂಚಾರ ಸರಾಗವಾಗಿ ನಡೆಯುವಂತೆ ರಿಪೇರಿ ಕೆಲಸಕಾರ್ಯ ಕೂಡ ಆಗ ರೀತಿಯಲ್ಲಿ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ, ಪುತ್ತೂರಿಗೆ ಒಂದು ಬೈಪಾಸ್ ರಸ್ತೆ ಬೇಕೆನ್ನುವ ವಿಚಾರದಲ್ಲಿ ಹಿಂದೆ ಶ್ರೀ ವೀರಣ್ಣನವರು ಮಂತ್ರಿಯಾಗಿದ್ದಾಗ ಮಾಡಿಸಿ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದರೂ ಸಹ ಈ ವಿಷಯದಲ್ಲಿ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳದೆ ಇದನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ನಮಗೆ ಬೈಪಾಸ್ ರಸ್ತೆ ವ್ಯವಸ್ಥೆ ಇಲ್ಲದ ಕಾರಣ ವಾಹನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿ

ಪುತ್ತೂರಿಂದ ಹಾದುಹೋಗುವಂತಹ ವಾಹನಗಳು ಅಪಘಾತಕ್ಕೀಡಾಗುವ ಸಂದರ್ಭಗಳು ಜಾಸ್ತಿಯಾಗಿದೆ. ದಿವಸಕ್ಕೆ ಎರಡು ಅಪಘಾತಗಳಾದರೂ ಈ ಭಾಗದಲ್ಲಿ ಆಗುತ್ತವೆ. ಹತ್ತು ಹದಿನೈದು ವರ್ಷಗಳಿಂದ ಈ ಬೇಡಿಕೆ ಇದ್ದರೂ ಈವತ್ತಿನವರೆಗೆ ಯಾವ ಕ್ರಮವನ್ನೂ ಇದರ ಬಗ್ಗೆ ತೆಗೆದುಕೊಂಡಿಲ್ಲ

೩.೦೦ ಪಿ. ಎಂ.

ಈ ಬಗ್ಗೆ ಇಲ್ಲಿ ಸದನದಲ್ಲಿಯೇ ಒತ್ತಡ ತಂದಿದ್ದೇನೆ. ಭೂಮಿ ಕಳೆದುಕೊಳ್ಳುವಂಥ ಸಾರ್ವಜನಿಕರೇ ಮುಂದೆ ಬಂದು, ಭೂಮಿಯನ್ನು ಕೊಡುತ್ತೇವೆ, ಕೆಲಸ ಪ್ರಾರಂಭಿಸಿ ಎಂದು ಹೇಳಿರುವುದನ್ನು ನಾನು ಈ ಸದನದಲ್ಲಿ ಗಮನಕ್ಕೆ ತಂದರೂ ಕೂಡ ಈ ಬೈಪಾಸ್ ಮಾರ್ಗದ ರಚನೆ ಆಗಿಲ್ಲ. ಕಳೆದ ವರ್ಷ ಲ್ಯಾಂಡ್ ಅಕ್ವಿಸಿಷನ್‌ಗೆ ಎಂದು ೧೦ ಲಕ್ಷ ರೂಪಾಯಿ ಇಟ್ಟಿದ್ದು, ಅದು ಲ್ಯಾಪ್ಸ್ ಆಗಿದೆ. ಈ ರೀತಿ ಲ್ಯಾಪ್ಸ್ ಆದರೂ ಕೂಡ, ಇನ್ನೂ ಕೂಡ ಈ ಬೈಪಾಸ್ ರೋಡಿನ ಬಗ್ಗೆ ಆಸಕ್ತಿ ಕಾಣುತ್ತಿಲ್ಲ. ಈ ರೀತಿಯ ತಾರತಮ್ಯ ಏಕೆ ? ಬೇರೆ ಜಿಲ್ಲೆಗಳಲ್ಲಿ ನೋಡಿದರೆ, ಅಂದರೆ ನನ್ನ ಕ್ಷೇತ್ರದ ಬದಿಯಲ್ಲಿಯೇ ಇರತಕ್ಕ ಹಾಸನ ಜಿಲ್ಲೆ, ಮಲೆನಾಡು ಭಾಗದಲ್ಲಿ ಎಲ್ಲಾ ಹಳ್ಳಿಗಳಿಗೂ ಮಾರ್ಗಗಳು ಇರುವುದನ್ನು ಕಾಣುತ್ತಿದ್ದೇವೆ. ಹಾಗೂ ನೆರೆಯ ರಾಜ್ಯವಾದ ಕೇರಳ ರಾಜ್ಯದಲ್ಲೂ ಕೂಡ ಪ್ರತಿಯೊಂದು ಹಳ್ಳಿಯಲ್ಲೂ ಡಾಂಬರು ರಸ್ತೆಗಳನ್ನು ಕಾಣುತ್ತಿದ್ದೇವೆ. ಆದರೆ ನಮ್ಮ ರಾಜ್ಯಕ್ಕೆ ಸೇರಿದಂಥ ದಕ್ಷಿಣ ಕನ್ನಡ ಜಿಲ್ಲೆಗೆ ಈ ರೀತಿಯ ತಾರತಮ್ಯ ಏಕೆ ಎನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬೈ ಪಾಸ್ ರಸ್ತೆಗೋಸ್ಕರ ಜನರು ಯಾವರೀತಿಯ ತಕರಾರು ಮಾಡದೇ, ತಾವೇ ಭೂಮಿಯನ್ನು ಕೊಡುತ್ತೇವೆ ಆದಷ್ಟು ಬೇಗ ಕೆಲಸ ಪ್ರಾರಂಭಿಸಿ ಎಂದು ಮುಂದೆ ಬಂದಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಆದಷ್ಟು ಶೀಘ್ರವಾಗಿ ತಾವು ಒಮ್ಮೆ ಭೇಟಿ ಕೊಟ್ಟು ಈ ಬಗ್ಗೆ ಶೀಘ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಮತ್ತು ಇದೇ ವರ್ಷದಲ್ಲಿ ಬಜೆಟ್‌ನಲ್ಲಿ ಕಾಮಗಾರಿ ಪಟ್ಟದಲ್ಲಿ ಇದನ್ನು ಸೇರಿಸಬೇಕೆಂದು ಮಾನ್ಯ ಮಂತ್ರಿಗಳ ಹತ್ತಿರ ಹೇಳಿದ್ದೆ. ಆದರೆ ಯಾವುದೇ ರೀತಿಯಲ್ಲಿ ಬಜೆಟ್‌ನಲ್ಲಿ ಸೇರಿಸಿರುವುದು ಕಂಡು ಬರುತ್ತಿಲ್ಲ. ಆದ್ದರಿಂದ ಇದನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಮತ್ತೆ ಕಳೆದ ವರ್ಷದಿಂದ ನಮ್ಮ ರಾಜ್ಯದ ಆಡಳಿತ ವ್ಯವಸ್ಥೆಯು ಬದಲಾವಣೆಯಾಗಿರುತ್ತದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳ ವ್ಯವಸ್ಥೆಯಾಗಿರುತ್ತದೆ. ಆದುದರಿಂದ ಈ ರಾಜ್ಯ ರಸ್ತೆಗಳಲ್ಲಿ ನನ್ನ ಕ್ಷೇತ್ರದ ಕೆಲವು ರಸ್ತೆಗಳನ್ನು ಸರ್ಕಾರ ತೆಗೆದುಕೊಂಡು ಎಂ ಡಿ. ಆರ್. ರಸ್ತೆಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲಾ ಪರಿಷತ್‌ಗಳು ಹಂತ ಹತವಾಗಿಯಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ರಾಜ್ಯ ರಸ್ತೆಗಳ ಕಾರ್ಯ ಸ್ಥಗಿತವಾಗಿರುವ ಸಂದರ್ಭ ಇರುವುದರಿಂದ, ಈ ಬಗ್ಗೆ ಶೀಘ್ರ ಕಾರ್ಯಕ್ರಮ ಹಾಕಿಕೊಳ್ಳಬೇಕು, ಮುಖ್ಯವಾಗಿ ಸುಬ್ರಹ್ಮಣ್ಯ, ಕೊಲ್ಲೂರು ಈ ಗ್ರಾಮಗಳಿಗೆ ಹೋಗುವ ರಸ್ತೆಯನ್ನು ಮಾರ್ಪಾಡು ಮಾಡಬೇಕು. ಮತ್ತೆ ಇಚಲಂಪಾಡಿ ರಸ್ತೆಗೆ ಡಾಂಬರು ಹಾಕುವ ಕೆಲಸ ಬಾಕಿ ಇದೆ. ಈ ಕೆಲಸವನ್ನು ಈ ವರ್ಷವೇ ತೆಗೆದುಕೊಂಡರೆ ಹಿಂದೆ ಮಾಡಿದಂಥ ಕೆಲಸದ ಉಪಯೋಗ ಆಗುತ್ತದೆ. ಇದೇ ರೀತಿಯಾಗಿ ಬೇರೆ ಬೇರೆ ಹಂತಗಳಲ್ಲಿ ಎಂ. ಎನ್. ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಮತ್ತು ಸೇತು ಬಂಧನ ಈ ಯೋಜನೆಗಳಲ್ಲಿ ಬರತಕ್ಕ ಕಾರ್ಯಗಳು ಅಥವಾ ವೆಸ್ಟರ್ನ್ ಘಾಟ್ ಸ್ಕೀಮ್‌ನಲ್ಲಿ ಏನೇನು ಕಾರ್ಯಕ್ರಮಗಳು ಬರುತ್ತವೆ, ಈ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಬೇಕು. ತಾವು ಇವತ್ತು ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಿದ್ದೀರಿ, ಮಂಡಲ್ ಪಂಚಾಯ್ತಿಗಳು, ಜಿಲ್ಲಾ ಪರಿಷತ್‌ಗಳ ವ್ಯವಸ್ಥೆ ಮಾಡಿದ್ದೀರಿ. ಇವತ್ತು ಗ್ರಾಮಸಭೆಗಳ ಮುಖಾಂತರ ಯಾವ ಯಾವ ಕೆಲಸ ಕಾರ್ಯಗಳಿಗೆ ಆದ್ಯತೆಯನ್ನು ಕೊಟ್ಟು ತೆಗೆದುಕೊಳ್ಳಬೇಕೆಂದು, ಮಾಹಿತಿಯನ್ನು ಕೊಡುತ್ತಿದ್ದಾರೆ. ಗ್ರಾಮಸಭೆಯ ತೀರ್ಮಾನಗಳು ಮಂಡಲ್ ಪಂಚಾಯ್ತಿಯಲ್ಲಿ ನಿರ್ಣಯವಾಗುತ್ತವೆ. ಇವು ಜಿಲ್ಲಾ ಪರಿಷತ್ ಮುಖಾಂತರ ಸರ್ಕಾರಕ್ಕೆ ಹೋಗತಕ್ಕಂಥ ಕಾರ್ಯಕ್ರಮ. ಆರ್. ಎಲ್. ಇ. ಜಿ. ಸ್ಕೀಮ್‌ನಲ್ಲಿ ನೇರವಾಗಿ ಸರ್ಕಾರದಿಂದ ಇಂತಹ ರೋಡ್ ತೆಗೆದುಕೊಳ್ಳಬೇಕೆಂದು ಕೆಲವಾರು ನಿದರ್ಶನಗಳು ಬರುತ್ತಾ ಇವೆ, ಈಗಿನ ಹೊಸ ವ್ಯವಸ್ಥೆಗೆ ಹೊಂದಿಕೊಂಡು ಏಕೆ ಇನ್ನೂ ಪರಿವರ್ತನೆ ಆಗಿಲ್ಲ. ಏಕೆ ಇಂತಹ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಂಬ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹರಿಜನ ವಾಡ ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ, ಈ ರಸ್ತೆಗಳು ಹರಿಜನರು ವಾಸ ಮಾಡತಕ್ಕ ಸ್ಥಳಗಳಲ್ಲಿ ಆಗುತ್ತಿಲ್ಲ. ಎಲ್ಲಿ ಹರಿಜನರು ವಾಸವಾಗಿದ್ದಾರೆ

ಅಲ್ಲಿ, ಅವರಿಗೆ ಸಿಗತಕ್ಕ ಅನುಕೂಲಗಳು ಸಿಗಬೇಕು. ಹರಿಜನರ ಹೆಸರನ್ನು ಬಳಸಿಕೊಂಡು, ಪ್ರಭಾವಿ ವ್ಯಕ್ತಿಗಳು, ಅವರ ಮನೆ ಬಾಗಿಲಿಗೆ ಅನುಕೂಲವಾಗುವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹರಿಜನರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿಲ್ಲ. ಆದ್ದರಿಂದ ಈ ಹರಿಜನವಾಡ ರಸ್ತೆಗಳು, ವಾಸ್ತವವಾಗಿ, ಇವರಿಗೇ ಅನುಕೂಲವಾಗುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಗಂಗಾ ಕಲ್ಯಾಣ ಸ್ಕೀಂ ಇದೆ, ಗಂಗಾ ಕಲ್ಯಾಣ ಸ್ಕೀಮ್ ಬಂದ ಹೊಸದರಲ್ಲಿ ಈ ಸದನದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ದೇವೇಗೌಡರು ಉತ್ತರ ಕೊಡುವಾಗ ಹಾಸನದಲ್ಲಿ ಬೇರೆ ಬೇರೆ ರೀತಿಯಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ನಡೆದಿವೆ ಎಂಬುದಾಗಿ ಉತ್ತರ ಕೊಟ್ಟರು. ಆ ಸಂದರ್ಭದಲ್ಲಿ ನಾವು ಪ್ರಶ್ನೆ ಮಾಡಿದ್ದೆವು, ನಮ್ಮಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನರು, ಗಿರಿಜನರು ಇದ್ದಾರೆ. ಅವರಿಗೂ ಈ ಯೋಜನೆಯಿಂದ ಅನುಕೂಲ ಸಿಕ್ಕಿದರೆ ಅವರು ಸ್ವಂತ ಭೂಮಿಯಲ್ಲಿ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಆದುದರಿಂದ ಹೆಚ್ಚಿನ ರೀತಿಯಲ್ಲಿ ಈ ಸ್ಕೀಮನ್ನು ಮಂಜೂರು ಮಾಡಬೇಕೆಂದು ಹೇಳಿದ್ದರೂ ಸಹ ಯಾವುದೇ ರೀತಿಯ ಕಾರ್ಯಕ್ರಮ ನಡೆದಿಲ್ಲ. ಈ ರೀತಿಯ ಗಂಗಾ ಕಲ್ಯಾಣ ಯೋಜನೆ ಇದೆ. ಇದರ ಜೊತೆಗೆ ಬೇರೆ ರೀತಿಯ ಕಾರ್ಯಕ್ರಮಗಳು ನಾನಾ ಇಲಾಖೆಗಳ ಮುಖಾಂತರ ನಡೆಯುತ್ತಿವೆ, ತೋಟಗಾರಿಕೆ ಇಲಾಖೆ ಮುಖಾಂತರ ಈ ಗಂಗಾ-ಕಲ್ಯಾಣ ಯೋಜನೆಗೆ ಅವಕಾಶ ಮಾಡಿಕೊಟ್ಟರೆ ಹೆಚ್ಚಿನ ಪ್ರಯೋಜನವಾಗುತ್ತದೆ. ಅದೇ ರೀತಿ ಸೇತು ಬಂಧನ ಕಾರ್ಯಕ್ರಮ ಕೂಡ ಇವೊತ್ತು ನಮ್ಮ ಕಡೆ ಕಾಣುತ್ತಿಲ್ಲ. ಈ ಕಾರ್ಯಕ್ರಮದ ಮುಖಾಂತರ ಆದಷ್ಟು ಬೇಗ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕಡೆಯದಾಗಿ ಸ್ಕೂಲ್ ಬಿಲ್ಡಿಂಗ್ಸ್ ಬಗ್ಗೆ ಹಲವಾರು ಬೇಡಿಕೆಗಳನ್ನು ವರ್ಷಗಳಿಂದ ಇಟ್ಟುಕೊಂಡು ಬಂದಿದ್ದೇವೆ. ಇದರ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮ ಆಗಿಲ್ಲ. ಜಿಲ್ಲಾ ಪರಿಷತ್ ವ್ಯವಸ್ಥೆಗೆ ಹೊಂದಿಕೊಂಡು ಒಂದು ಪ್ರಸ್ತಾಪವನ್ನು ನಮ್ಮ ಜಿಲ್ಲಾ ಪರಿಷತ್ ಮುಖಾಂತರ ಸರ್ಕಾರಕ್ಕೆ ಕಳಿಸಿ ಕೊಟ್ಟಿದ್ದೇವೆ. ನಾವು ರಾಷ್ಟ್ರೀಕೃತ ಬ್ಯಾಂಕಿನ ಮುಖಾಂತರ ಸಾಲವನ್ನು ತೆಗೆದುಕೊಂಡು ಕರಾವಳಿ ಏರಿಯಾದಲ್ಲಿ ಯಾವ ರೀತಿ ಮಾರ್ಗ ರಚನೆ ಇದೆ ಅದೇ ರೀತಿ, ನಮ್ಮಲ್ಲಿಯೂ ರಸ್ತೆಗಳನ್ನು ಮಾಡಬೇಕು. ಸುಬ್ರಮಣ್ಯದಿಂದ ಕೊಲ್ಲೂರುವರೆಗೆ ಹೈವೇ ಮಾಡಬೇಕು ಅದಕ್ಕಾಗಿ ರಾಷ್ಟ್ರೀಕೃತ ಬ್ಯಾಂಕಿನ ನೆರವನ್ನು ತೆಗೆದುಕೊಂಡು ಮಾಡಬೇಕು. ಇಷ್ಟರೊಳಗಾಗಿ ಸರ್ಕಾರದ ಒಪ್ಪಿಗೆ ಸಿಕ್ಕಬೇಕಾಗಿದೆ. ನಾವು ತಮ್ಮ ಅನುಮತಿಗೋಸ್ಕರ ಕಳುಹಿಸಿಕೊಟ್ಟಿದ್ದೇವೆ. ಆದಷ್ಟು ಬೇಗ ತಾವು ಅನುಮತಿ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಇವೊತ್ತು ಈ ಒಂದು ಇಲಾಖೆಯಲ್ಲಿ ಕೆಲಸ ಮಾಡುವಂತಹ ಅತ್ಯಂತ ಕೆಳದರ್ಜೆ ನೌಕರರ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಗ್ಯಾಂಗ್‌ಮನ್ ವರ್ಕರ್ಸ್ ಕಳೆದ ೨೦–೩೦ ವರ್ಷಗಳಿಂದ ದಿನಗೂಲಿ ಆಧಾರದ ಮೇಲೆ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಗ್ಯಾಂಗ್‌ಮೆನ್ ವರ್ಕರ್ಸ್‌ಗಳಿಗೆ ಒಂದು ದಿವಸಕ್ಕೆ ಕೇವಲ ೧೦ ರೂಪಾಯಿ ಕೊಡುವಂಥ ವ್ಯವಸ್ಥೆ ಇದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫–೨೦ ರೂಪಾಯಿ ಸಂಬಳ ಇದ್ದರೂ ಈ ನೌಕರರುಗಳಿಗೆ ಯಾವುದೇ ರೀತಿಯ ಸೆಕ್ಯೂರಿಟಿ ಇಲ್ಲದೆ ೧೦ ರೂಪಾಯಿಯಲ್ಲೇ ಕೆಲಸ ಮಾಡುವಂತಹ ಸ್ಥಿತಿ ಇದೆ. ಕೆಲವರು ಇಂತಹ ಸ್ಥಿತಿಯಲ್ಲಿ ಕೆಲಸವನ್ನು ಬಿಟ್ಟು ಹೋಗುವಂತಹ ಸಂದರ್ಭ ಸಹ ಇದೆ, ೨೦–೩೦ ವರ್ಷಗಳಿಂದ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿರುವಂತಹ ನೌಕರರಿಗೆ ಹೆಚ್ಚಿನ ಸಂಬಳವನ್ನು ಕೊಟ್ಟು ಈ ವರ್ಷ ಅವರಿಗಾಗಿ ಹೆಚ್ಚಿನ ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಅದೇ ರೀತಿ ನಗರಾಭಿವೃದ್ಧಿ ಮಟ್ಟಿಗೆ ಹೇಳುವುದಾದರೆ ನಗರಾಭಿವೃದ್ಧಿ ವ್ಯಾಪ್ತಿಯಲ್ಲಿ ಇವೊತ್ತು ಪುರಸಭೆಗಳು ಇದೆ. ಪುರಸಭೆಗಳ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಡ್ರೈನೇಜ್ ವ್ಯವಸ್ಥೆ ಇರಬಹುದು, ಅಥವಾ ಲೈಟ್ ವ್ಯವಸ್ಥೆ ಇರಬಹುದು, ಸಂಚಾರ ವ್ಯವಸ್ಥೆ ಇರಬಹುದು. ಅದಕ್ಕೆ ಹೊಂದಿಕೊಂಡಂತೆ ನಿರ್ದಿಷ್ಟವಾದ ಬಜೆಟ್ ಇದೆ, ಸರ್ಕಾರ ನಿರ್ದಿಷ್ಟವಾದ ಯೋಜನೆಗಳ ಮುಖಾಂತರ ನಗರಾಭಿವೃದ್ಧಿ ಇಲಾಖೆ ಮುಖಾಂತರ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕು, ಆಗ ಪುರಸಭೆಗಳು ಮುಂದೆ ಬರುವುದಕ್ಕೆ ಸಾಧ್ಯ. ಇವೊತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಗೆ ರಾಜ್ಯದಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟಿದ್ದಾರೆ. ಆದರೆ ಮೂರನೇ ಸ್ಥಾನವನ್ನು ಪುತ್ತೂರಿಗೆ ಕೊಟ್ಟಿದ್ದಾರೆ. ಮೂರನೇ ಸ್ಥಾನವೆಂದು ಏನು ಬಹುಮಾನ ಕೊಟ್ಟಿದ್ದೀರಿ. ಅಲ್ಲಿ ಜನತೆ

ಸಾಧಾರಣವಾದ ಅನುಕೂಲಗಳು ಇವೆ. ಹಲವಾರು ಅವ್ಯವಸ್ಥೆಗಳಿವೆ. ಬೇರೆ ರಾಜ್ಯಗಳಲ್ಲಿ ಮೂರನೇ ಸ್ಥಾನವನ್ನು ಹೊಂದಿರುವಂತಹ ಊರಿನಲ್ಲಿ ಯಾವ ರೀತಿಯಲ್ಲಿ ವ್ಯವಸ್ಥೆಗಳು ಇರಬಹುದು. ಈ ದೃಷ್ಟಿಯಲ್ಲಿ ಹಲವಾರು ವರ್ಷಗಳಿಂದ ಪುತ್ತೂರಿಗೆ ಕುಮಾರಧಾರಾ ನದಿಯಿಂದ ವಾಟರ್ ಸಪ್ಲೈ ಸ್ಕೀಮು ಏನು ಇದೆ, ಅದೂ ಸಹ ಸಂಪೂರ್ಣವಾಗಿಲ್ಲ. ಇವೊತ್ತು ಸಂಪೂರ್ಣವಾಗಿ ನೀರು ಸಂಚಿಕೆ ಕಾರ್ಯಕ್ರಮ ನಡೆದಿಲ್ಲ. ಇದರ ಬಗ್ಗೆ ವ್ಯವಸ್ಥೆ ಕೂಡ ಆಗಿಲ್ಲ. ಆದುದರಿಂದ ಇರುವಂತಹ ಟೆಕ್ನಿಕಲ್ ಪ್ರಾಬ್ಲಮ್ ಅನ್ನು ಪರಿಹರಿಸುವತ್ತ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಛೇರ್ಮನ್.—ಮಾನ್ಯ ಸೊರಕೆಯವರೇ, ಮುಗಿಸಿ. ೨೫ ನಿಮಿಷ ಆಯಿತು.

ಶ್ರೀ ವಿನಯಕುಮಾರ್ ಸೊರಕೆ.—ಕಳೆದ ಐದಾರು ವರ್ಷಗಳ ಹಿಂದೆ ನನ್ನ ಕ್ಷೇತ್ರಕ್ಕೆ ಒಂದು ಟೌನ್ ಹಾಲ್ ಬಿಲ್ಡಿಂಗ್ ಕೊಟ್ಟಿದ್ದಾರೆ. ಇದಕ್ಕೆ ಸರ್ಕಾರದ ಅನುದಾನ ಕೂಡ ಸಿಕ್ಕಿದೆ. ಆದರೆ ಗೋಡೆ ಮಾತ್ರ ಇನ್ನೂ ನಿರ್ಮಾಣ ಹಂತದಲ್ಲಿದೆ, ಮಾಡಿನ ವ್ಯವಸ್ಥೆ ಕೂಡ ಆಗಿಲ್ಲ. ಇದನ್ನು ಪೂರ್ತಿಗೊಳಿಸುವ ಕಾರ್ಯಕ್ರಮವನ್ನು ಮಾಡಬೇಕೆಂದು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ಪುರಸಭೆಗಳಿಗೆ ಹೆಚ್ಚಿನ ಸಹಕಾರ ಕೊಟ್ಟು ನಿಂತಿರುವ ಕೆಲಸವನ್ನೆಲ್ಲ ಪೂರೈಸಬೇಕು. ಅವರು ಕೈಗೊಂಡಿರುವ ಕೆಲಸಗಳನ್ನು ಪೂರ್ತಿಗೊಳಿಸುವುದಕ್ಕೆ ತಾವು ಸಹಕಾರವನ್ನು ಕೊಡಲಿಲ್ಲವೆಂದರೆ ನಗೆಪಾಟಲಿಗೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಇನ್ನು ಡ್ರೈನೇಜ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ಪುರಸಭೆಯವರು ಮತ್ತು ನಾನು ಸಹ ಅನೇಕ ಸಲ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ, ಮತ್ತು ನಮ್ಮ ಪುರಸಭೆಯ ಮುಖಾಂತರ ಸಹ ಒಂದು ಠರಾವು ಕಳುಹಿಸಿ ಕೊಟ್ಟಿದ್ದೇವೆ, ಆದ್ದರಿಂದ ಸರ್ಕಾರದವರು ಆ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಪುರಸಭೆಯ ವ್ಯಾಪ್ತಿಯನ್ನು ವಿಸ್ತರಿಸಿ ಅದನ್ನು ಅಭಿವೃದ್ಧಿಗೊಳಿಸಬೇಕೆಂದು ಕಳೆದ ೫-೬ ವರ್ಷಗಳಿಂದ ನಾನು ಪ್ರಸ್ತಾಪ ಮಾಡುತ್ತಲೇ ಬಂದಿದ್ದೇನೆ. ಆದರೂ ಸಹ ಸರ್ಕಾರದವರು ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ. ಇನ್ನು ನಮ್ಮ ಪುತ್ತೂರು ಪುರಸಭೆಗೆ ಅಕ್ಕಪಕ್ಕದ ಎರಡು ಮೂರು ಹಳ್ಳಿಗಳನ್ನು ಸೇರಿಸಿಕೊಳ್ಳುವ ಒಂದು ಪತ್ರವನ್ನು ಸಹ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು ಆ ಬಗ್ಗೆ ಕೂಡ ತಾವು ಏನೂ ಕ್ರಮ ಕೈಗೊಂಡಿಲ್ಲ. ಆ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ವಸತಿ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಮಾನ್ಯ ಮಂತ್ರಿಗಳು ನಮ್ಮ ಮಂಗಳೂರು ನಗರಕ್ಕೆ ಬಂದಿದ್ದಾಗ ಅಲ್ಲಿರತಕ್ಕಂಥ ವಸತಿ ಸಮಸ್ಯೆಗಳನ್ನು ಅಲ್ಲಿನ ಶಾಸಕರು ಅವರಿಗೆ ಸವಿವರವಾಗಿ ವಿವರಿಸಿದಾಗ ಆಗ ಮಾನ್ಯ ಮಂತ್ರಿಗಳು ನಮ್ಮಗೊಂದು ಭರವಸೆಯನ್ನು ಕೊಟ್ಟರು. ಅವರು ಕೊಟ್ಟ ಭರವಸೆ ಇನ್ನು ಭರವಸೆಯಾಗಿಯೇ ಉಳಿದಿದೆ. ಅವರು ಕೊಟ್ಟ ಭರವಸೆಯನ್ನು ಇದುವರೆವಿಗೂ ಈಡೇರಿಸಿಲ್ಲ. ಈ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ೧೯೮೪-೮೫ನೇ ಇಸವಿಯಲ್ಲಿ ದುರ್ಬಲವರ್ಗದವರಿಗೆ ಸರ್ಕಾರದಿಂದ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಸರ್ಕಾರದವರು ಪ್ರಕಟಿಸಿದರು, ಇದರ ಪ್ರಕಾರ ಅವರು ಸಾಲಸೋಲ ಮಾಡಿ ಮನೆಗಳನ್ನು ಕಟ್ಟಿಕೊಂಡರು, ಆದರೆ ಸರ್ಕಾರದವರು ಅವರಿಗೆ ಕೊಡಬೇಕಾದ ಹಣವನ್ನು ಇದುವರೆವಿಗೂ ರಿಲೀಜ್ ಮಾಡಿಲ್ಲ. ಈ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ನಗರಾಭಿವೃದ್ಧಿ ಮತ್ತು ವಸತಿ ಖಾತೆ ಇಲಾಖೆಗಳ ಮೇಲೆ ನಾನು ನಾಲ್ಕು ಮಾತುಗಳನ್ನು ಮಾತನಾಡಬೇಕಾಗಿದೆ. ಈ ನಾಲ್ಕೈದು ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದರೂ ಸಹ ಇತರೆ ವಿಷಯಗಳಿಗೆ ಸಮಯ ಸ್ವಲ್ಪ ಕಳೆದು ಹೋಯಿತು. ಆದರೂ ಸಹ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಮೊದಲು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ನಗರಾಭಿವೃದ್ಧಿಯಲ್ಲಿ ನಮ್ಮ ಬೆಂಗಳೂರು ನಗರವನ್ನು ತೆಗೆದುಕೊಂಡರೆ ಬೆಂಗಳೂರು ನಗರ ಇವತ್ತು ಒಂದು ದೊಡ್ಡ ಕಾಂಕ್ರೀಟ್ ಕೊಳಚೆ ಪ್ರದೇಶವಾಗಿದೆ. ಇಲ್ಲಿ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಫ್ಲಾಟ್‌ಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ, ದೊಡ್ಡ ದೊಡ್ಡ ಬಂಗಲೆಗಳನ್ನು ಮಾತ್ರ ಕಟ್ಟುತ್ತಿದ್ದಾರೆ. ಆದರೆ ಬಡವರ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥದ್ದರ ಬಗ್ಗೆ ಯಾರೂ ಯೋಚನೆ ಮಾಡಿಲ್ಲ. ನಮ್ಮ ರಾಜ್ಯದ ಪಕ್ಕದಲ್ಲಿರುವ ಹೊಸೂರಿನಲ್ಲಿ ಸುಮಾರು ೪-೫ ಸಾವಿರ ಮನೆಗಳನ್ನು ಒಂದೇ ಕಡೆ ಈ ಬಡವರಿಗೆ ಕಟ್ಟಿಸಿಕೊಟ್ಟಿದ್ದಾರೆ ಅದೇ ರೀತಿಯಲ್ಲಿ ಹೈದ್ರಾಬಾದ್‌ನಲ್ಲಿ ಸಹ ಸುಮಾರು ೫-೬ ಸಾವಿರ ಮನೆಗಳನ್ನು ಒಂದೇ ಕಡೆ ಕಟ್ಟಿಸಿಕೊಟ್ಟಿದ್ದಾರೆ. ಆದರೆ ನಮ್ಮ ಬೆಂಗಳೂರು ನಗರದಲ್ಲಿ ಇಂತಹ ಆಕ್ಟಿವಿಟೀಸ್ ಬಗ್ಗೆ ಹೆಚ್ಚಿನ ಕಾಳಜಿಯನ್ನು ಸರ್ಕಾರದವರು ವಹಿಸಿಲ್ಲವೆಂದು ನಾನು ಹೇಳುತ್ತೇನೆ. ಆಮೇಲೆ ನಮ್ಮ ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಸಹ ಚೆನ್ನಾಗಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ, ನಮ್ಮ ಬೆಂಗಳೂರು ನಗರದಲ್ಲಿ ಟ್ರಾಫಿಕ್ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇಲ್ಲಿ ಪ್ರತಿದಿನ ಸರಾಸರಿ ಲೆಕ್ಕದಲ್ಲಿ ೧೨ ಜನ ಸಾಯುತ್ತಿದ್ದಾರೆ. ಸುಮಾರು ಒಂದು ನೂರು ಜನರು ಗಾಯಗೊಳ್ಳುತ್ತಿದ್ದಾರೆ. ಈ ಬಗ್ಗೆ ಏನೇನು ಇಂಪ್ರೂವ್ ಇಲ್ಲ. ಮತ್ತು ಬೆಂಗಳೂರು ನಗರದಲ್ಲಿ ರಿಂಗ್ ರೋಡ್ಸ್ ಮಾಡುತ್ತೇವೆಂದು ಹೇಳಿದರೂ ಸಹ ಮಾಡಲಿಲ್ಲ, ಆಮೇಲೆ ಈ ಬಗ್ಗೆ ನಾನು ಮುಂದುವರಿಸಿ ಮಾತನಾಡುವುದಾದರೆ ಕಾರ್ಪೊರೇಷನ್ ಅವರೂ ಮಾಡರ್ನ್ ಸಿವಿಕ್ ಹಾಲ್ ಕಟ್ಟಿಸುವ ಬಗ್ಗೆ ನ್ಯಾಷನಲ್ ಲೆವೆಲ್‌ನಲ್ಲಿ ಟೆಂಡರ್ ಕರೆಯಬೇಕಾಗಿತ್ತು. ಆದರೆ ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವಂತೆ ಟೆಂಡರ್ ಕರೆದಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್‌ನವರು ಮಾಡುತ್ತಿರುವ ಅನ್ಯಾಯ ನಮ್ಮ ಎಲ್ಲಾ ಸ್ನೇಹಿತರುಗಳಿಗೂ ಗೊತ್ತಿದೆ. ಮಾಡರ್ನ್ ಸಿವಿಕ್ ಹಾಲ್ ಕಟ್ಟುವುದಕ್ಕೆಂದು ಒಂದು ಟೆಂಡರ್ ಕರೆದಿದ್ದಾಗ ವಾಸುದೇವ ಮೂರ್ತಿ ಎನ್ನುವವರು ೨ ಕೋಟಿ ೬೭ ಲಕ್ಷ ರೂಪಾಯಿಗೆ, ಬಾಲಾಜಿ ಕನ್‌ಸ್ಟ್ರಕ್ಷನ್‌ನವರು ೨ ಕೋಟಿ ೬೨ ಲಕ್ಷ ರೂಪಾಯಿಗಳಿಗೆ, ಖೋಡೆಯವರು ೨ ಕೋಟಿ ೮೩ ಲಕ್ಷ ರೂಪಾಯಿಗಳಿಗೆ ಚಾಮರಾಜ ಅಂಡ್ ಕಂಪನಿಯವರು ೨ ಕೋಟಿ ೩೭ ಲಕ್ಷ ರೂಪಾಯಿಗಳಿಗೆ ಕ್ವೊಟೇಷನ್ ಕೊಟ್ಟಿದ್ದರು. ಕಾರ್ಪೊರೇಷನ್‌ನವರು ಏನು ಮಾಡಿದರು ಎಂದರೆ ಹೈಯಸ್ಟ್ ಕ್ವೊಟೇಷನ್ ಯಾರು ಕೊಟ್ಟಿದ್ದರೋ ಅವರ ಟೆಂಡರ್‌ನ್ನು ಒಪ್ಪಿಕೊಂಡಿದ್ದಾರೆ. ಇದರಿಂದ ಕಾರ್ಪೊರೇಷನ್‌ಗೆ ೬೦ ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದು ನಾನು ಹೇಳುತ್ತೇನೆ. ಇದರಲ್ಲಿ ಏನಾದರೂ ರಾಜಕೀಯ ಇದೆಯೋ ಏನೆಂದು ಗೊತ್ತಾಗಲಿಲ್ಲ. ಆಮೇಲೆ ಗುಬ್ಬಿ ವೀರಣ್ಣನವರ ಹೆಸರಿನ ಮೇಲೆ ಒಂದು ನಾಟಕ ಮಂದಿರವನ್ನು ಕಟ್ಟುವುದಕ್ಕೆ ಒಂದು ಟೆಂಡರ್‌ನ್ನು ಕರೆದರು. ಅದರಲ್ಲಿ ಕಮಲನಾಥ್ ನಾಯ್ಡು ಎನ್ನುವವರದ್ದು ಲೋಯೆಸ್ಟ್ ಕ್ವೊಟೇಷನ್ ಇದ್ದರೂ ಕೂಡ ಹೈಯಸ್ಟ್ ಕ್ವೊಟೇಷನ್ ಹಾಕಿದ್ದ ಪಿ. ಸತ್ಯಮೂರ್ತಿ ಎನ್ನುವವರಿಗೆ ಈ ಕಂಟ್ರಾಕ್ಟನ್ನು ಕೊಟ್ಟರು. ಕಂಟ್ರಾಕ್ಟ್ ಕೊಟ್ಟಿದ್ದಾರೆ ಅಷ್ಟೇ, ಆದರೆ ಸರ್ಕಾರದಿಂದ ಈ ಕೆಲಸಕ್ಕೆ ಇನ್ನೂ ಅನುಮತಿ ಸಿಕ್ಕಿಲ್ಲ. ಈ ಕೆಲಸ ಮಾಡಿಸುವುದಕ್ಕೆ ಬೆಂಗಳೂರು ನಗರ ಸಭೆಯವರು ಒಂದು ರೆಸಲ್ಯೂಷನ್ ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿ ೬ ತಿಂಗಳಾಯಿತು. ೬ ತಿಂಗಳಿನಿಂದ ಸರ್ಕಾರ ಇನ್ನೂ ಅಪ್ರೂವ್ ಮಾಡಿಲ್ಲ ಈ ಕೆಲಸ ಆಗುತ್ತದೋ ಇಲ್ಲವೋ ಎಂದು ಅನುಮಾನ ಬಂದಿದೆ. ಈ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನ ಕೊಟ್ಟು ಕೆಲಸಗಳನ್ನು ಮಾಡಿಸಬೇಕು. ಬೆಂಗಳೂರು ನಗರ ಸಭೆಯಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಈ ವಿಷಯ ಮಾನ್ಯ ಚಂದ್ರಶೇಖರ್‌ರವರಿಗೂ ಚೆನ್ನಾಗಿ ಗೊತ್ತಿದೆ. ಬೆಂಗಳೂರು ಕಾರ್ಪೊರೇಷನ್‌ನಲ್ಲೇ ಇಷ್ಟೊಂದು ಅವ್ಯವಹಾರಗಳು ನಡೆಯುತ್ತಿದ್ದರೆ ಇನ್ನು ಬೇರೆ ಕಡೆ ಇರುವ ನಗರ ಸಭೆಗಳು ಯಾವ ರೀತಿ ನಡೆಯುತ್ತಿರಬಹುದೆಂದು ಊಹಿಸಬಹುದಾಗಿದೆ ನಗರ ಸಭೆಯವರು ಯಾವುದಾದರೂ ಒಂದು ಕೆಲಸಕ್ಕೆ ಟೆಂಡರ್ ಕರೆದು ಟೆಂಡರನ್ನು ಒಪ್ಪಿಕೊಂಡು ರೆಸಲ್ಯೂಷನ್ ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ, ಸರ್ಕಾರವು ಅದರ ಬಗ್ಗೆ ಆದಷ್ಟು ಬೇಗ ಅಪ್ರೂವ್ ಮಾಡಬೇಕು. ಅಪ್ರೂವ್ ಮಾಡುವುದು ನಿಧಾನವಾದರೆ ಏನಾಗುತ್ತದೆ ಎಂದರೆ, ವರ್ಕಿಂಗ್ ಕಾಸ್ಟ್ ಜಾಸ್ತಿಯಾಗುತ್ತದೆ, ಈಗಾಗಲೇ ನಗರ ಸಭೆಯವರು ಸರ್ಕಾರಕ್ಕೆ ಕಳುಹಿಸಿರುವ ಪ್ರಾಜೆಕ್ಟ್ ಕಾಸ್ಟ್ ೨೦ ಪರ್‌ಸೆಂಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿದರೆ ಒಳ್ಳೆಯದು. ಆಮೇಲೆ, ಬೆಂಗಳೂರು ನಗರ ಸಭೆಯವರಿಗೆ ಸರ್ಕಾರದವರು ೨೨ ಕೋಟಿ ೯ ಲಕ್ಷ ೧ ಸಾವಿರದ ೩೪೪ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ. ಸರ್ಕಾರವು ಗ್ರ್ಯಾಂಟ್ ರೂಪದಲ್ಲಿ ಕೊಡಬೇಕಾದ ಹಣವನ್ನು ಕೊಡದೇ ಇದ್ದರೆ ನಗರ ಸಭೆಗಳ ಕೆಲಸ ಯಾವ ರೀತಿ ನಡೆಯಬೇಕು ? ಇದನ್ನು

ಸರ್ಕಾರ ಯೋಚನೆ ಮಾಡಬೇಕು. ಈ ಹಣ ಆಕ್ಟ್ರಾಯ್ ಗ್ರ್ಯಾಂಟ್. ೧೯೭೧-೭೨ರಲ್ಲಿ ಆಕ್ಟ್ರಾಯ್ ವಸೂಲು ಮಾಡುವುದನ್ನು ಸರ್ಕಾರ ಅಬಾಲಿಷ್ ಮಾಡಿತು. ಆಕ್ಟ್ರಾಯ್ ವಸೂಲು ಮಾಡುವುದನ್ನು ಅಬಾಲಿಷ್ ಮಾಡಿದ್ದಕ್ಕಾಗಿ ಪ್ರತಿ ವರ್ಷ ಸರ್ಕಾರ ನಗರ ಸಭೆಗಳಿಗೆ ಗ್ರ್ಯಾಂಟ್‌ನ್ನು ಕೊಡಬೇಕು. ಸರ್ಕಾರವೇ ಕೊಡಬೇಕಾದ ಗ್ರ್ಯಾಂಟ್‌ನ್ನು ಕೊಡದೇ ಇದ್ದರೆ ಹೇಗೆ? ಈ ಆಕ್ಟ್ರಾಯ್ ಅಬಾಲಿಷ್ ಮಾಡಿದ್ದಕ್ಕೆ ಪ್ರತಿವರ್ಷ ೫ ಪರ್ಸೆಂಟ್ ಗ್ರ್ಯಾಂಟ್ ಜಾಸ್ತಿ ಕೊಡಲಾಗುತ್ತದೆಂದು ಸರ್ಕಾರ ಒಪ್ಪಿಕೊಂಡಿತ್ತು.

ಶ್ರೀ ಎಂ. ಚಂದ್ರಶೇಖರ್.—೧೦ ಪರ್ಸೆಂಟ್‌ನಷ್ಟು ಪ್ರತಿವರ್ಷ ಜಾಸ್ತಿ ಕೊಡುತ್ತಿದ್ದೇವೆ. ಈಗ ಇನ್ನೂ ಜಾಸ್ತಿ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಆಕ್ಟ್ರಾಯ್ ವಸೂಲಾತಿ ಇದ್ದಿದ್ದರೆ ವರ್ಷಕ್ಕೆ ೨೮ ಕೋಟಿ ರೂಪಾಯಿಗಳಲ್ಲ ಅದರ ಡಬಲ್ ಹಣವನ್ನು ಸಂಗ್ರಹಿಸಬಹುದಾಗಿತ್ತು. ನಗರ ಸಭೆಗಳಿಗೆ ಸರ್ಕಾರ ಕೊಡುವ ಹಣವನ್ನು ಸರ್ಕಾರ ತಪ್ಪದೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಾಮಾನ್ಯವಾಗಿ ಮುನಿಸಿಪಾಲಿಟಿಯವರು ಯಾವ ಜಾಗದಲ್ಲಿ ಮುನಿಸಿಪಾಲಿಟಿ ಜಾಗ ಇದೆ, ಅದನ್ನು ಮಾರೋಣ. ಯಾವ ಜಾಗದಲ್ಲಿ ಬಿಲ್ಡಿಂಗ್ ಇದೆ, ಅದನ್ನು ಮಾರಿ ಸಂಬಳ ಕೊಡೋಣ ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ೧೭೭ ಮುನಿಸಿಪಾಲಿಟಿಗಳು ಇವೆ. ಈ ೧೭೭ ಮುನಿಸಿಪಾಲಿಟಿಗಳಲ್ಲಿ ಕೇವಲ ೩೨ ಮುನಿಸಿಪಾಲಿಟಿಗಳವರು ಮಾತ್ರ ತಮ್ಮ ತಮ್ಮ ನಗರಗಳಿಗೆ ನೀರು ಸಪ್ಲೈ ಮಾಡುತ್ತಿದ್ದಾರೆ. ಇನ್ನು ಉಳಿದ ಮುನಿಸಿಪಾಲಿಟಿಯವರು ನೀರು ಸರಬರಾಜು ಮಾಡುತ್ತಿಲ್ಲ. ಇದರ ಬಗ್ಗೆ ಹೆಚ್ಚಿಗೆ ಸರ್ಕಾರದವರು ಗಮನ ಕೊಟ್ಟು ಕೆಲಸ ಮಾಡಿಸಬೇಕು. ನಮ್ಮ ಮುಳಬಾಗಿಲು ತಾಲ್ಲೂಕಿನಲ್ಲಿ ಅರ್ಧ ಗ್ಯಾಲನ್ ನೀರು ಮಾತ್ರ ಒಂದೊಂದು ತಲೆಗೆ ಬರುತ್ತದೆ.

ಸೆಂಟ್ರಲ್ ಗವರ್ನಮೆಂಟ್‌ದು ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಪ್ರೊಜೆಕ್ಟ್ ಎಂದು ಇದೆ. ಈ ಯೋಜನೆಯಡಿಯಲ್ಲಿ ಕೇಂದ್ರದ ಜತೆಗೆ ಡಿಸ್ಕಸ್ ಮಾಡಿ ಅವರ ಕೋಆಪರೇಷನ್ ತೆಗೆದುಕೊಂಡು ಇದನ್ನು ಇಂಪ್ಲಿಮೆಂಟ್ ಮಾಡುತ್ತೀರಿ ಎಂದುಕೊಂಡರೆ ೧೫-೧೬ ಮುನಿಸಿಪಾಲಿಟಿಗಳಿಗೆ ಮಾತ್ರ ಇದನ್ನು ಅನ್ವಯಿಸಿದ್ದೀರಿ. ಅನುಕೂಲ ಪಡೆದುಕೊಂಡಿರದ ಮುನಿಸಿಪಾಲಿಟಿಗಳ ಬಗ್ಗೆ ಗಮನ ಕೊಡಬೇಕು ಬೆಂಗಳೂರನ್ನು ಈ ರೀತಿ ಬಿಟ್ಟರೆ ಇದರಿಂದ ಬೆಂಗಳೂರು ಜನರಿಗೂ ಸಹಾಯ ಮಾಡುವುದಿಲ್ಲ, ಬೆಂಗಳೂರು ಜನತೆ ಕೂಡ ನಿಮ್ಮನ್ನು ಕ್ಷಮಿಸುವುದಿಲ್ಲ.

ಇನ್ನು ಈ ರಸ್ತೆಗಳ ಬಗ್ಗೆ ಹೇಳಬೇಕಾದ್ದೇ ಇಲ್ಲ. ಮೇ ೧೫ರ ಹಿಂದೂ ಪತ್ರಿಕೆಯಲ್ಲಿ ಒಂದು ರೆಫರೆನ್ಸ್ ಬಂದಿದೆ. ಅಲ್ಲಿ ಬರೆದಿರುವುದು ನಮ್ಮ ರೋಡ್ಸ್ ಮತ್ತು ಅವುಗಳ ವ್ಯವಸ್ಥೆಗೆ ಅಪ್ಲೈ ಆಗುತ್ತದೆ ಅಲ್ಲಿ ಏನಿದೆ ಎಂದರೆ-

> "The Indian Road Congress meeting in Gauhati has lumped India along with China and Pakistan in the fourth and perhaps the worst, category-countries with 'absolete roads, technology and organisation' and where the road network and traffic expand faster than budgetary allocations for road maintenance....."

ಜೊತೆಗೆ ೪,೨೫೦ ಕೋಟಿ ರೂಪಾಯಿಗಳು ರೋಡ್ಸ್ ಟ್ಯಾಕ್ಸ್ ಹೆಸರಿನಲ್ಲಿ ವಸೂಲಾಗುತ್ತಿದೆ ಎಂದು ಅವರು ಹೇಳುತ್ತಾರೆ.

> "..... Indeed road users have been paying substantial sums in the form of taxes and duties (an estimated Rs 4,250 crores 1986-87), but have got just a fraction back from the Government as investment on road development and maintenance".

ಈಗಲೂ ಕೂಡ ರೋಡ್ಸ್ ಬಗ್ಗೆ ಟ್ಯಾಕ್ಸ್ ಪೇಯರ್ಸ್ ಬೇಕಾದಷ್ಟು ತೆರಿಗೆ ಕೊಡುತ್ತಿದ್ದಾರೆ. ಆದರೆ ಅದರ ಉಪಯೋಗವನ್ನು ಜನ ಪಡೆಯುತ್ತಿಲ್ಲ. ನಮ್ಮಲ್ಲಿ ನ್ಯಾಷನಲ್ ಹೈವೇಸ್‌ಗೆ ಹೆಚ್ಚು ಖರ್ಚು ಮಾಡುತ್ತಿರುವಂತೆ ಕಾಣುತ್ತಿಲ್ಲ. ಇನ್ನು ಸ್ಟೇಟ್ ಹೈವೇಸ್‌ಗೆ ವರ್ಷಕ್ಕೆ ೨೦ ಸಾವಿರ ಕೊಡುತ್ತೀರಿ. ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ಗೆ ಮೇಂಟೆನೆನ್ಸ್‌ಗೆಂದು ೧೪ ಸಾವಿರ ಕೊಡುತ್ತಿದ್ದೀರಿ. ಈ ವರ್ಷ ಅದನ್ನೂ ಕೊಟ್ಟಿಲ್ಲ. ನಿಮಗೆ ಹಳ್ಳಿ ಕಡೆ ಹೋದರೆ ಗೊತ್ತಾಗುತ್ತದೆ. ನೀವು ಒಂದು ಸಲ ಹಳ್ಳಿಗೆ ಬರುತ್ತೀರಿ ಎಂದರೆ ಹಳ್ಳಿ ಕಡೆ ಇರುವ ರಸ್ತೆಗಳೆಲ್ಲಾ ಅಸಿಸ್ಟೆಂಟ್ ಇಂಜಿನಿಯರ್‌ರವರ ಓಡಾಟದಿಂದ ರಿಪೇರಿ ಆಗುತ್ತವೆ ಹಳ್ಳಿ ಕಡೆ ಹೇಗೆ ರೋಡ್ಸಿವೆ ಎಂದರೆ, ಯಾರಿಗಾದರೂ ಹೆರಿಗೆ ಆಗದಿದ್ದರೆ ಅವರು ಬಸ್‌ನಲ್ಲಿ ಈ ರಸ್ತೆಯಲ್ಲಿ ಟ್ರಾವೆಲ್ ಮಾಡಿದರೆ ಸಾಕು, ಹೆರಿಗೆಯಾಗುವುದಕ್ಕೆ ಆಸ್ಪತ್ರೆಗೆ ಹೋಗಬೇಕಾಗಿಲ್ಲ ರೋಡ್‌ಗಳಲ್ಲಿ ತುಂಬಾ ಗುಣಿಗಳಿದ್ದು ಅದರ ಸ್ಟ್ರಕ್ಚರೇ ಹಾಳಾಗಿದೆ. ಮೊದಲಿನಂತೆ ಈಗ ರೋಡ್ಸ್ ಇಲ್ಲ ಆದ್ದರಿಂದ ರಸ್ತೆಗಳಿಗೆಂದು ಏನು ಗ್ರ್ಯಾಂಟ್ ಕೊಡುತ್ತಿದ್ದೀರೋ ಅದನ್ನು ಕಡಿಮೆ ಮಾಡುವುದು ಬೇಡ, ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಏನೋ ಒಂದು ನೆಪ ಹೇಳುವುದು ಬೇಡ. ನೀವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ತೆಗೆದುಕೊಂಡು ನೋಡಿದರೂ ಕೂಡ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗುತ್ತಾ ಹೋಗಬೇಕು. ಆದರೆ ಅದು ಅಭಿವೃದ್ಧಿ ಆಗುವುದಕ್ಕೆ ಬದಲಾಗಿ ಕಡಿಮೆಯಾಗುತ್ತಾ ಹೋಗಿದೆ. ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿ ವಿಚಾರದಲ್ಲಿ ನೋಡಿದರೆ ೧೯೮೭–೮೮ ರಲ್ಲಿ ಗುರಿ ೨೭೫ ಇದ್ದರೆ ಸಾಧನೆ ಮಾಡಿರತಕ್ಕದ್ದು ೧೧೭ ಮಾತ್ರ ಅದೇರೀತಿ ಅಸ್ಫಾಲ್ಟಿಂಗ್‌ನಲ್ಲಿ ಗುರಿ ೭೭ ಇದ್ದರೆ ಸಾಧನೆ ೨೭ ಮಾತ್ರ. ಸೇತುವೆಗಳಲ್ಲಿ ೭೭ ಗುರಿ ಇದ್ದರೆ ಸಾಧನೆ ೬೦ ಆಗಿದೆ. ಈ ರೀತಿ ಆದರೆ ನಮ್ಮ ರಸ್ತೆಗಳು ಯಾವರೀತಿ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗುತ್ತದೆ ? ಹಳ್ಳಿಗಳಿಂದ ನಾವು ಬಂದು ಇದನ್ನು ಮಾಡುವುದಕ್ಕಾಗುತ್ತದೆಯೆ? ಸರ್ಕಾರದವರು ದಯವಿಟ್ಟು ಈ ರಸ್ತೆಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಮೊದಲು ಹೆದ್ದಾರಿ ಯೋಜನೆಗಳು ಎಂದು ಇದ್ದವು. ಆದರೆ ಇತ್ತೀಚೆಗೆ ಆ ಯೋಜನೆಗಳನ್ನೆಲ್ಲಾ ಬಿಟ್ಟುಬಿಟ್ಟಿದ್ದೀರಿ. ಕೇಳಿದರೆ, ನಮ್ಮಲ್ಲಿ ಈಗ ದುಡ್ಡಿಲ್ಲವೆಂದು ಒಂದೇ ಒಂದು ಮಾತಿನಲ್ಲಿ ಹೇಳಿಬಿಡುತ್ತಿದ್ದಾರೆ. ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ಹೇಳಿದರೆ, ಅವರು ಹೇಳುತ್ತಾರೆ, ಕಂಟ್ರ್ಯಾಕ್ಟರ್‌ಗಳ ಮೇಲೆ ಒತ್ತಾಯ ಮಾಡುವುದಕ್ಕೆ ನನಗೆ ಮಾರಲ್ ರೈಟ್ಸ್ ಇಲ್ಲ, ಏಕೆಂದರೆ ಅವರು ಇದುವರೆಗೆ ಮಾಡಿರತಕ್ಕ ಕೆಲಸಗಳಿಗೇ ಇನ್ನೂ ದುಡ್ಡನ್ನು ಕೊಟ್ಟಿಲ್ಲ, ಕೊಡಲು ನಮ್ಮ ಹತ್ತಿರ ದುಡ್ಡಿಲ್ಲ, ಎಂದು ಹೇಳುತ್ತಾರೆ, ರಸ್ತೆಗಳ ಬಗ್ಗೆ ನಿಮ್ಮಲ್ಲಿರತಕ್ಕ ನಿರ್ಲಕ್ಷ್ಯ ಭಾವನೆ ಹೋಗಬೇಕು. ಬಂದ ಫೈಲುಗಳ ಮೇಲೆ ನಾನೇನು ಮಾಡಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಪ್ಪಿಗೆ ಕೊಡಲಿಲ್ಲ ಎಂದು ಬರೆದು ಕಾಲ ತಳ್ಳುವ ಮಂತ್ರಿಗಳಾಗಬೇಡಿ ನಿಮ್ಮ ಇಲಾಖೆಯಲ್ಲಿ ಇರತಕ್ಕ ಹಣದಲ್ಲಿ ಜನರಿಗೆ ಅತ್ಯವಶ್ಯಕವಾಗಿ ಬೇಕಾದ ರಸ್ತೆಗಳನ್ನು ಮಾಡಿಕೊಡಿ. ರೈತರಿಗೆ ಉಪಯೋಗವಾದ ಕೆಲಸಕಾರ್ಯಗಳನ್ನು ನೀವು ಮಾಡಿಕೊಡದಿದ್ದರೆ ಅವರ ಗತಿ ಏನಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ರಸ್ತೆಗಳನ್ನು ಇಷ್ಟೊಂದು ಅವ್ಯವಸ್ಥಿ ಸ್ಥಿತಿಯಲ್ಲಿ ಬಿಡಬೇಡಿ. ಈ ರಸ್ತೆಗಳು ಇವತ್ತು ಯಾರಿಗೂ ಬೇಕಿಲ್ಲದವಾಗಿವೆ ಏಕೆಂದರೆ ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಇದು ನಮಗೆ ಬರುವುದಿಲ್ಲ, ಸಿ ಅಂಡ್ ಬಿ.ಗೆ ಸೇರಿವೆ, ಇದರ ಉಸ್ತುವಾರಿಯನ್ನು ಅವರು ನೋಡಿಕೊಳ್ಳಬೇಕೆಂದು ಹೇಳುತ್ತಾರೆ ಸಿ. ಅಂಡ್ ಬಿ. ನವರನ್ನು ಕೇಳಿದರೆ ಇದರ ಉಸ್ತುವಾರಿ ನಮಗೆ ಸೇರಿದ್ದಲ್ಲ, ಜಿಲ್ಲಾ ಪರಿಷತ್ತಿಗೆ ಸೇರಿದ್ದು ಎಂದು ಹೇಳುತ್ತಾರೆ. ಯಾವ ಯಾವ ರಸ್ತೆಗಳ ಉಸ್ತುವಾರಿ ಯಾರ್ಯಾರಿಗೆ ಸೇರಿದ್ದು ಇನ್ನೂ ಸರಿಯಾಗಿ ನಿರ್ಧಾರವಾಗಿಲ್ಲ. ತಮ್ಮ ಉಸ್ತುವಾರಿಗೆ ಯಾವ ಯಾವ ರಸ್ತೆಗಳು ಬರುತ್ತವೆಂಬುದು ಜಿಲ್ಲಾ ಪರಿಷತ್ತಿನವರಿಗೇ ಸರಿಯಾಗಿ ಗೊತ್ತಿಲ್ಲ, ಇದು ತಾಲೂಕು ರಸ್ತೆಯೋ ? ಅಥವಾ ಐ ವಿ ಸಿ ರಸ್ತೆಯೋ ಎಂಬುದು ಅವರಿಗೇ ಗೊತ್ತಿಲ್ಲ. ಈ ರಸ್ತೆಗಳ ಬಗ್ಗೆ ತಾವು ಶ್ರದ್ಧೆವಹಿಸಿ ಇವುಗಳ ಅಭಿವೃದಿಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಕಟ್ಟಡಗಳ ಕನ್‌ಸ್ಟ್ರಕ್ಷನ್ ಸ್ಟಾಪ್ ಆಗಿದೆ. ಅದು ಏತಕ್ಕೆ ಈ ರೀತಿ ಸ್ಟಾಪ್ ಆಗಿದೆಯೋ ನನಗೆ ಗೊತ್ತಿಲ್ಲ ಇದರ ಹಿನ್ನೆಲೆ ಏನೆಂದರೆ ನನಗೆ ಅರ್ಥವಾಗುತ್ತಿಲ್ಲ. ಸರ್ಕಾರೀ ಕಛೇರಿಗಳು, ಶಾಲೆಗಳು ಬಹಳಷ್ಟು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ, ಅದರಲ್ಲೂ ಹೈಸ್ಕೂಲುಗಳು ಬಹಳಷ್ಟು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ನಮಗೆ ಹಣ ಇಲ್ಲ ಎಂದು ಹೇಳುತ್ತಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದೊಂದು ರೂಮಿನಲ್ಲಿ ೧೦೦–೧೨೦ ಮಕ್ಕಳನ್ನು ತುಂಬಿಕೊಂಡು ಶಾಲೆಗಳನ್ನು

ನಡೆಸುತ್ತಿದ್ದಾರೆ. ಅಲ್ಲಿಯ ವಾತಾವರಣವನ್ನು ನೋಡಿದರೆ ಈ ಸರ್ಕಾರ ಎಂಬುದು ಇದೆಯೋ, ಇಲ್ಲವೋ ಎನ್ನತಕ್ಕ ಅನುಮಾನ ಬಂದಿದೆ. ಹಿಂದೆ ಪ್ರತಿಯೊಂದು ತಾಲೂಕಿನಲ್ಲೂ ಮಿನಿ ವಿಧಾನ ಸೌಧಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ಆದರೆ ಅದನ್ನು ಎಲ್ಲಿ ಕಟ್ಟಿಸುತ್ತಿದ್ದೀರೋ ನನಗೆ ತಿಳಿಯದು. ನಮ್ಮ ಕೋಲಾರ ಜಿಲ್ಲೆಯಲ್ಲಿ ಇನ್ನೂ ಈ ಕೆಲಸ ಆಗಿಲ್ಲ. ಮುಳಬಾಗಿಲಿನಲ್ಲಿ ನೋಡಿದರೆ ಅಲ್ಲಿಯ ತಾಲ್ಲೂಕು ಕಛೇರಿ ಸುಮಾರು ೧೨೦ ವರ್ಷಗಳ ಹಿಂದಿನದು ಇದೆ. ಮಳೆ ಬಂದರೆ ಅದು ಸೋರುತ್ತದೆ. ಅದು ಯಾವಾಗ ಬೀಳುತ್ತದೆಯೋ ಎಂದು ಭಯವಾಗುತ್ತದೆ. ಮಿನಿ ವಿಧಾನ ಸೌಧವನ್ನು ಕಟ್ಟಿಸುತ್ತೇವೆಂದು ನೀವು ಹೇಳುತ್ತಿದ್ದೀರಿ ಆದರೆ ಎಲ್ಲಾ ಆ್ಯಕ್ಟಿವಿಟೀಸ್ ಅದನ್ನು ಕೂಡ ಕೇವಲ ಬೆಂಗಳೂರಿನಲ್ಲಿ ಮಾತ್ರ ಕಾಣುತ್ತಿದ್ದೇವೆ. ಏಕೆಂದರೆ ಇಲ್ಲಿ ಬಹಳ ಪ್ರತಿಷ್ಠಿತ ವ್ಯಕ್ತಿಗಳಿದ್ದಾರೆ. ಕರ್ನಾಟಕದ ಪ್ರತಿಯೊಂದು ತಾಲ್ಲೂಕಿಗೂ ಒಂದೇ ಸಮನಾದ ಆದ್ಯತೆಯನ್ನು ಕೊಟ್ಟು ಕೆಲಸಮಾಡಿಸಬೇಕು. ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲೆಲ್ಲಿ ಹಳೆಯ ಸರ್ಕಾರೀ ಕಟ್ಟಡಗಳಿವೆ ಅವುಗಳು ಸೋರಿ ಯಾವ ಸಂದರ್ಭದಲ್ಲಿ ಅವು ಬಿದ್ದು ಹೋಗುತ್ತವೋ ಎಂಬ ಭಯ ಏನಿದೆ ಅದನ್ನು ದೂರ ಮಾಡಬೇಕಾದರೆ ಆ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ಕಟ್ಟಿಸಬೇಕು.

ಇನ್ನು ಸ್ಲಂ ಕ್ಲಿಯರೆನ್ಸ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದರೆ, ಈ ಕಾರ್ಯಕ್ಕಾಗಿ ಸರ್ಕಾರ ಒದಗಿಸಿರತಕ್ಕ ಹಣ ಬಹಳ ಕಡಿಮೆ. ರಾಯಚೂರಿನಲ್ಲಿ ಕಟ್ಟಡಗಳ ಕೆಲಸವಾಗಲಿ, ರಸ್ತೆಗಳ ಕೆಲಸವಾಗಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಆದರೆ ಅದೇ ನಮ್ಮ ಕೋಲಾರದಲ್ಲಿ ಅಷ್ಟು ಚೆನ್ನಾಗಿ ಕೆಲಸವನ್ನು ಮಾಡಿಲ್ಲ. ಬಂಡೆಗಳ ಮೇಲೆ ಕಲ್ಲುಗಳನ್ನು ಏನು ಒಡೆಯುತ್ತಾರೆ ಅದನ್ನು ಹಾಗೆಯೇ ತಂದು ಇಲ್ಲಿ ಜೋಡಿಸಿದ್ದಾರೆ. ಇವರು ಸುಮಾರು ೧೩ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿರಬಹುದು. ಇದು ಸಾಲದು, ಇನ್ನೂ ಹೆಚ್ಚಿಗೆ ಕೊಡಬೇಕು. ಸ್ಲಂನಲ್ಲಿ ಬಹಳ ಜನ ಬಡವರೇ ವಾಸಮಾಡುತ್ತಿರುತ್ತಾರೆ.

೩-೩೦ ಪಿ. ಎಂ.

ಅವರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನವನ್ನು ಕೊಡಬೇಕು. ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನವರಿಗೆ ನೀವು ರೋಡ್‌ಗಳನ್ನು ಮಾಡಿಸುವ ಕೆಲಸ ಬಿಟ್ಟಿದ್ದೀರಿ. ಆ ಜನರ ಕುಡಿಯುವ ನೀರಿಗೆ ನೀವು ಅನುಕೂಲ ಮಾಡಿಕೊಡುತ್ತಿಲ್ಲ. ದಯವಿಟ್ಟು ಎಲ್ಲಾ ಕಡೆ ಇರುವ ಸ್ಲಮ್‌ನವರಿಗೆ ಕುಡಿಯುವ ನೀರನ್ನೂ ಸಹಾ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ. ತಾವು ಇನ್ನು ಸ್ಲಮ್‌ಗಳಲ್ಲಿ ಹೋಗಿ ದಯವಿಟ್ಟು ಚೈನಾ ಷಾಪ್‌ನಲ್ಲಿ ಗೂಳಿಗಳನ್ನು ನೂಕುವ ಹಾಗೆ ಇವರನ್ನು ಓಡಿಸಿ ಕಳುಹಿಸುವುದು ಬೇಡ ಅವರು ಬಹಳ ದಿವಸದಿಂದ ಅಲ್ಲಿ ಇದ್ದುಬಿಟ್ಟಿದ್ದಾರೆ. ದುರಾದೃಷ್ಟವಂತರು. ಅವರಿಗೆ ಅಲ್ಲಿಯೇ ಖಾಯಂ ಅನುಕೂಲ ಮಾಡಿಕೊಡಿ. ಅವರಿಗೆ ಏನಾದರೂ ಸ್ವಲ್ಪ ಸಬ್ಸಿಡಿ ಎಂದು ಎರಡು ಮೂರು ಸಾವಿರ ರೂಪಾಯಿಯನ್ನು ಕೊಟ್ಟರೆ ಸಾಕು, ಅವರೇ ಒಳ್ಳೆಯ ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಬೆಂಗಳೂರಿನಲ್ಲಿ ಈಗಾಗಲೇ ಅನೇಕ ಲೇಔಟ್‌ಗಳನ್ನು ಒಡೆದು ಹಾಗೆ ಆ ಪಾಪದ ಕೆಲಸಕ್ಕೆ ಹೋಗಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೌಸಿಂಗ್ ಇಲಾಖೆಗೆ ನಮ್ಮ ಸ್ನೇಹಿತರಾದ ಮೊಹಮ್ಮದ್ ಮೊಹಿನುದ್ದೀನ್ ಬಹಳ ಉತ್ಸಾಹಿಗಳಾಗಿ ಬಂದಿದ್ದಾರೆ. ಆದರೆ ದುರಾದೃಷ್ಟವಶಾತ್ ಅವರು ಕೊಟ್ಟಿರುವ ಲೆಕ್ಕದ ಪ್ರಕಾರ ನೋಡಿದರೆ ಜನತಾ ಮನೆಗಳ ಬಗ್ಗೆ ವಿವರಗಳನ್ನು ಹೋದಸಾರಿ ಕೊಟ್ಟಿದ್ದಕ್ಕೂ ಈ ಸಾರಿ ಕೊಟ್ಟಿರುವುದಕ್ಕೂ ಬಹಳ ಹೆಚ್ಚು ಕಡಿಮೆ ಇದೆ. ಅವರು ಹೋದ ಸಾರಿ ೧೯೭೭ ರಿಂದ ಹುಡ್ಕೋ ನೆರವಿನ ಜನತಾ ಗೃಹ ನಿರ್ಮಾಣ ಯೋಜನೆ ಎಂದು ಹೇಳಿದ್ದಾರೆ. ಗ್ರಾಮೀಣ ವಸತಿ ಯೋಜನೆಗೆ ಬೇಕಾಗುವ ಸಾಲ, ಅದನ್ನು ನಾವು ನೋಡಿದರೆ ೧೯೭೮-೭೯ರಲ್ಲಿ ೫೦ ಸಾವಿರ ಮನೆಗಳಿಗೆ ಕೊಟ್ಟಿದ್ದಾರೆ. ೧೯೭೯-೮೦ರಲ್ಲಿ ೪೧ ೩೧೫ ಕೊಟ್ಟಿದ್ದೀರಿ, ಇಲ್ಲಿ ಜಾಸ್ತಿಯಾಗಬೇಕಿತ್ತು ಆದರೆ ಕಡಿಮೆಯಾಗಿದೆ. ಫಿಸಿಕಲ್ target ಬಗ್ಗೆ ಮನೆಗಳ ಸಂಖ್ಯೆ ನೋಡಿದರೆ ಮಾನ್ಯ ಮೊಹಿನುದ್ದೀನ್ ಅವರು ತಲೆಯನ್ನು ತಗ್ಗಿಸಬೇಕು, ೮೬-೮೭ರಲ್ಲಿ ಕೊಟ್ಟಿರುವ ಮನೆಗಳು ೫೦ ಸಾವಿರ ಪೂರ್ಣಗೊಂಡಿರುವ ಮನೆಗಳು ೮ ಸಾವಿರ ಇದು ಏನು ಅನ್ಯಾಯ ೭೮-೭೯ರಲ್ಲಿ ೫೦ ಸಾವಿರ ಮನೆಗಳನ್ನು ಕೊಟ್ಟರು. ಪೂರ್ಣಗೊಂಡ ಮನೆಗಳ ಸಂಖ್ಯೆ ೪೯,೩೬೮ ಇದಕ್ಕೆ ನಿಜವಾಗಿ ಆಗಿನ ಅಧಿಕಾರಿಗಳಿಗೆ ಒಳ್ಳೆಯ ಶಹಭಾಷ್‌ಗಿರಿಯನ್ನು ಕೊಡಬೇಕಾಗುತ್ತದೆ. ಆಮೇಲೆ ೮೩-೮೪ ರಿಂದ ನಮ್ಮ ಸ್ನೇಹಿತರು ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ತೆಗೆದುಕೊಂಡರೆ ೮೩-೮೪ ರಲ್ಲಿ ೪೫.

ಸಾವಿರ ಮನೆಗಳನ್ನು ಕೊಟ್ಟರು ಇದರಲ್ಲಿ ೪೩,೬೬೧ ಮನೆಗಳು ಕಂಪ್ಲೀಟ್ ಆಯಿತು. ಅಲ್ಲಿ ನಿಜವಾಗಿ ನೋಡಿದರೆ ಒಳ್ಳೆಯ ಪ್ರೋಗ್ರೆಸ್. ಆದರೆ ೮೪-೮೫ಕ್ಕೆ ೭೮ ಸಾವಿರಕ್ಕೆ ಇಳಿಯಿತು ೮೪-೮೫ರಲ್ಲಿ ಕೊಟ್ಟಿದ್ದೇ ೧೪ ಸಾವಿರ, ೧೪ ಸಾವಿರ ಕೂಡಾ ಕಂಪ್ಲೀಟ್ ಆಯಿತು. ಹೋಗುತ್ತಾ ಹೋಗುತ್ತಾ ಕಡಿಮೆಯಾಗುತ್ತಿದೆ. ಈ ಬಿಲ್ಡಿಂಗ್ ಆಕ್ಟಿವಿಟೀಸ್ ಕಡಿಮೆಯಾಗುತ್ತಿದೆ ಕಡೆಗೆ ೫೦ ಸಾವಿರ ಮನೆಗಳಿಗೆ ಕೊಟ್ಟಿದ್ದಾರೆ. ಅದರಲ್ಲಿ ಪೂರ್ಣಗೊಂಡ ಮನೆಗಳು ೮೭೬೪. ಇದು ತುಂಬಾ ಅನ್ಯಾಯ. ಮಾನ್ಯ ಮೊಹಿನುದ್ದೀನ್ ಸಾಹೇಬರು ಆದಕ್ಕಾಗಿ you should pull up. ಫಂಡ್ಸ್ ಇದೆಯೋ ಇಲ್ಲವೋ ನಮಗೆ ಗೊತ್ತಿಲ್ಲ ಫಂಡ್ಸ್ ಏನೋ ಕೊಟ್ಟಿದ್ದಾರೆ, ೧೫ ಕೋಟಿ ೬೯ ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. ಎಂಟು ಸಾವಿರ ಮನೆಗಳು ಪೂರ್ಣಗೊಂಡಿವೆ ಎಂದರೆ ಇದು ಅನ್ಯಾಯ ಸ್ವಾಮಿ? ನಿಜವಾಗಿ ನೋಡಿದರೆ ನಿಮ್ಮ ಡಿಪಾರ್ಟ್‌ಮೆಂಟ್ ಇದೆಯೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ದಯವಿಟ್ಟು ದಬಾಯಿಸಿ ನೀವು ಕೆಲಸ ಮಾಡದಿದ್ದರೆ ಕಷ್ಟವಾಗುತ್ತದೆ. ನಿಮಗೆ ಇಂಡಿಪೆಂಡೆಂಟ್ ಛಾರ್ಜ್ ಕೊಟ್ಟಿದ್ದಾರೆ, ನೀವೇ ಅದೃಷ್ಟವಂತರು. ಇಂಡಿಪೆಂಡೆಂಟ್ ಛಾರ್ಜ್ ಕೊಟ್ಟಿರುವುದರಿಂದ ನೀವು ಬೆಂಗಳೂರಿನಲ್ಲಿ ಕುಳಿತುಕೊಂಡಿರುವುದಕ್ಕೆ ಅಲ್ಲ, ಕೆಲಸ ಯಾವ ರೀತಿ ನಡೆಯುತ್ತಿದೆ ಅದೆಲ್ಲಾ ನೋಡಿ ಅಧಿಕಾರಿಗಳನ್ನು ಪುಲ್ ಅಪ್ ಮಾಡಿ. ಆ ಬಡವರ ಮನೆಗಳು ಇನ್ನೂ ಪೂರ್ಣ ಆಗದೇ ಇರುವುದನ್ನು ನೋಡಿದರೆ ಬಹಳ ಕನಿಕರವಾಗುತ್ತದೆ. ಇಲ್ಲದೇ ಇದ್ದರೆ ನೀವು ಮಹಾನುಭಾವರು ಮಂತ್ರಿಗಿರಿಯಲ್ಲಿ ಮಜಾ ಮಾಡಿಕೊಂಡು ಇಲ್ಲೇ ಇರುತ್ತೀರಿ ಎಂದು ಹೇಳಬೇಕಾಗುತ್ತದೆ ಇದರಲ್ಲಿ ನಿಮ್ಮ ಫರ್‌ಫಾರ್‌ಮೆನ್ಸ್ ಏನೂ ಇಲ್ಲವೆಂದು ಹೇಳಬೇಕಾಗುತ್ತದೆ. ನಮ್ಮ ಸೆಂಟ್ರಲ್ ಗೌರ್ನ್‌ಮೆಂಟ್‌ದು ಒಂದು ಸ್ಕೀಮ್ ಇದೆ. ಈ ಬೀಡಿ ವರ್ಕ್‌ರ್ಸ್ ಕಾಲೋನಿಗಳು ಏನು ಇದೆ ಅಲ್ಲಿ ಮನೆ ಕಟ್ಟಿಕೊಳ್ಳಲು ಸೆಂಟ್ರಲ್‌ನವರು ೧೧ ಸಾವಿರ ಎಂದು ಕೊಡುತ್ತಾರೆ, ಅದನ್ನು ಉಪಯೋಗಿಸಿ ಈ ಬೀಡಿ ವರ್ಕರ್ಸ್‌ಗಳು ಎಲ್ಲೆಲ್ಲಿ ಇದ್ದಾರೆ, ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್.—೨೦ ನಿಮಿಷ ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ೫-೧೦ ನಿಮಿಷದಲ್ಲಿ ಮುಗಿಸುತ್ತೇನೆ. ಜನತಾ ಮನೆಗಳ ಬಗ್ಗೆ ಏನು ಐಡಿಯಾ ಇಟ್ಟುಕೊಂಡಿದ್ದಾರೆ. ಅದು ಬಹಳ ಅನ್ಯಾಯ. ಆರು ಸಾವಿರ ರೂಪಾಯಿಗಳಲ್ಲಿ ಮನೆಯನ್ನು ಕಟ್ಟಬೇಕು ಎಂದು ಹೇಳಿರುವುದರಲ್ಲಿ ನೀವು ಅಂದುಕೊಂಡಿರುವ ಹಾಗೆ ಅದು ಸಾಧ್ಯವೇ ಇಲ್ಲ. ಮತ್ತೆ ಆ ಬಡವರನ್ನು ಸಾಹುಕಾರರ ಬಳಿ ಕಳುಹಿಸುತ್ತೀರಿ ಆ ಬಡವ ಹೋಗಿ ಸಾಹುಕಾರರ ಬಳಿ ಹೋಗಿ ಬೇಡಬೇಕಾಗುತ್ತದೆ. ನೀವು ಆಂಧ್ರದಲ್ಲಿ ಹೋಗಿ ಸ್ವಲ್ಪ ಓಡಾಡಿ ಕೊಂಡು ಬನ್ನಿ ಆಂಧ್ರದಲ್ಲಿ ಗ್ರೂಪ್ ಹೌಸ್ ಸ್ಕೀಮ್ ಎಂದು ಮಾಡಿದ್ದಾರೆ. ಮುಳಬಾಗಿಲಿಗೆ ೫ ಮೈಲಿ ದೂರದಲ್ಲಿ ಹೋಗಿ ನೋಡಿದರೆ ಕಾಣುತ್ತದೆ, ಅಲ್ಲಿ ಕಾಲೋನಿಗಳನ್ನು ಕಟ್ಟಿದ್ದಾರೆ. ಕಾಂಕ್ರೀಟ್ ಮನೆಗಳನ್ನು ಕಟ್ಟಿದ್ದಾರೆ. ಪರ್ಮನೆಂಟ್ ಆಗಿ ಫಸ್ಟ್‌ಕ್ಲಾಸ್ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ಆದರೆ ನಮ್ಮಲ್ಲಿ ಹಳೆಯ ಕಾಲದ ಟೈಪ್ ಡಿಸೈನ್ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ನಿಮಗೆ ಅದನ್ನು ಬಿಡುವುದಕ್ಕೆ ಮನಸ್ಸು ಇಲ್ಲ ಅದೇ ಟೈಪ್ ಡಿಸೈನ್ ನಡೆಸಿಕೊಂಡು ಹೋಗುತ್ತೀರಿ. ಇಂದಿರಾ ವಾಸದ ಮನೆಗಳು ಎಂದು ಕೊಡುತ್ತೀರಿ, ಅದನ್ನು ಯಾರಿಗೆ ಕೊಡುತ್ತೀರಿ ಎಂದರೆ ಲ್ಯಾಂಡ್ ಆರ್ಮಿಗೆ ಕೊಡುತ್ತಿದ್ದೀರಿ. ನಾನು ಇದನ್ನು ಮಲ್ಲಪ್ಪನವರಿಗೂ ಹೇಳಿದ್ದೇನೆ. ಲ್ಯಾಂಡ್ ಆರ್ಮಿಯವರು ಕಟ್ಟಿರುವ ಮನೆಗಳ ಡಿಸೈನ್ ಚೆನ್ನಾಗಿ ಇಲ್ಲ.

ತಾವು ಬೇಕಾದರೆ ಅಲ್ಲಿ ಪರೀಕ್ಷೆ ಮಾಡಿ. ವಾಸ ಮಾಡುವ ದೃಷ್ಟಿಯಿಂದ ಅಲ್ಲಿ ಭದ್ರತೆ ಸರಿಯಾಗಿಲ್ಲ. ಅದನ್ನು ಪರೀಕ್ಷೆ ಮಾಡಿ ಸ್ವಲ್ಪ ಸರಿಯಾಗಿ ಮಾಡಿಸಿ. ಅದನ್ನು ಮಾಡಬೇಕು ಎಂದು ಮಾನ್ಯ ಮೊಯಿನುದ್ದೀನ್ ಅವರನ್ನು ಕೇಳಿಕೊಳ್ಳುತ್ತೇನೆ. ತಾವು ಈ ಕೆಲಸದ ಬಗ್ಗೆ ಸ್ವಲ್ಪ ಶ್ರದ್ಧೆ ವಹಿಸಬೇಕು. ಹೆಚ್ಚಿನ ಇಂಟರಸ್ಟ್ ಇದರಲ್ಲಿ ಇರಬೇಕು ಈ ಗವರ್ನ್‌ಮೆಂಟ್ ಇರುತ್ತದೋ ಇಲ್ಲವೋ ನಾನು ಓಡಾಡಿಕೊಂಡು ಏನೋ ನಾನು ಇರುವಷ್ಟು ದಿನ ಮಂತ್ರಿಯಾಗಿರುತ್ತೇನೆ ಎನ್ನುವುದನ್ನು ಬಿಟ್ಟು, ನಿಜವಾಗಿ ಕೆಲಸಮಾಡಿ, ಇದರಿಂದ ಬಡವರಿಗೆ ಹೆಚ್ಚು ಅನುಕೂಲವಾಗುವ ಸಹಾಯ ಮಾಡಬೇಕು. ಇದರಲ್ಲಿ ಏನು ಒಂದು ವ್ಯವಸ್ಥೆ ಇದೆ ಅದನ್ನು ಉಪಯೋಗಿಸಿಕೊಂಡು ಕೆಲಸವನ್ನು ಮಾಡಬೇಕು. ಈ ಮನೆಗಳಿಗೆ ತಾವು ಜಾಸ್ತಿ ಹಣ, ಕನಿಷ್ಟ ಪಕ್ಷ ೧೨ ಸಾವಿರ ಆದರೂ ಕೊಡಬೇಕು. ತಾವು ಇದರ

ಬಗ್ಗೆ ಒಂದು ಎಸ್ಟಿಮೇಟ್ ಮಾಡಿ ಎಷ್ಟು ಕೊಟ್ಟರೆ ಸರಿಹೋಗುತ್ತದೆ, ೫ ಸ್ಕ್ವೇರ್‌ಗೆ ಎಷ್ಟು ಕೊಟ್ಟರೆ ಅಥವಾ ಎಷ್ಟು ದುಡ್ಡು ಕೊಟ್ಟರೆ ಸರಿಯಾಗುತ್ತದೆ ಎಂದು ಕ್ಲಿಯರ್ ಆಗಿ ಒಂದು ಎಸ್ಟಿಮೇಟ್ ಮಾಡಿ ಅಷ್ಟನ್ನು ಕೊಡುವ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಬಡವರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ.

ಭಾಗ್ಯ ಮಂದಿರಗಳನ್ನು ಒಂದು ಮುನಿಸಿಪಾಲಿಟಿಗೆ ೫ ಕೊಡುತ್ತಿದ್ದೀರಿ. ದಯವಿಟ್ಟು ಈ ಭಾಗ್ಯ ಮಂದಿರಗಳ ಸ್ಕೀಮ್ ಅನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ೪-೫ ಸಾವಿರ ಕೊಡುತ್ತಿದ್ದೀರಿ. ಅದನ್ನು ಜಾಸ್ತಿ ಮಾಡಿ. ಸಾಧ್ಯವಾದಷ್ಟು ಹೆಚ್ಚಿಗೆ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಎಲ್ಲ ಮುನಿಸಿಪಾಲಿಟಿಗಳ ಬಡವರಿಗೂ ಅನ್ವಯಿಸುವಂತೆ ಹೌಸಿಂಗ್ ಸ್ಕೀಮ್ ಅನ್ನು ಶ್ರದ್ಧೆ ವಹಿಸಿ, ಚೆನ್ನಾಗಿ ಕೆಲಸ ಮಾಡಿ ಎಂದು ಕೇಳಿಕೊಳುತ್ತೇನೆ. ಈ ವರ್ಷ ವಸತಿ ನೀತಿ ಬಗ್ಗೆ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ೧೪ನೇ ಶನಿವಾರ ೮೪ ರಂದು ಎಡಿಟೋರಿಯಲ್‌ನಲ್ಲಿ ಒಂದು ಸುದ್ದಿ ಪ್ರಕಟವಾಗಿದೆ ಏನೆಂದರೆ. "ತಲೆಯ ಮೇಲೆ ಒಂದು ಸೂರು ಮನುಷ್ಯ ಜೀವನದ ಮೂಲಭೂತ ಅಗತ್ಯಗಳಲ್ಲಿ ಒಂದು, ಆದರೆ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಜೀವಮಾನವಿಡೀ ಹೆಣಗಿದರೂ ಸ್ವಂತದ್ದಿರಲಿ, ಎಲ್ಲಾ ಸೌಕರ್ಯಗಳುಳ್ಳ ಬಾಡಿಗೆ ಗೂಡನ್ನು ಹಿಡಿಯುವುದೂ ಅಸಾಧ್ಯ. ಬಡತನದ ರೇಖೆಗಿಂತ ಕೆಳಗಿನವರಿಗೆ ತೆಂಗಿನಗರಿ ಮಾಡಿನ ಕೊಳೆಗೇರಿ ಗುಡಿಸಲುಗಳೇ ಗತಿಯಾದರೆ ಮಧ್ಯಮ ವರ್ಗದವರಿಗೆ ಒಂದೇ ನಲ್ಲಿ, ಒಂದೇ ಶೌಚ ಗೃಹದ ವಠಾರದ ಮನಗಳೇ 'ದಿವ್ಯ' ನೆಲೆಗಳು. ಒಂದೇ ಕೊಠಡಿಯ ಮನೆ ಜೋಪಡಿಗಳು. ನಗರ-ಹಳ್ಳಿಗಳಲ್ಲಿ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ. ನಮ್ಮ ಮುಕ್ಕಾಲು ಪಾಲು ಜನರ ಜೀವನದ ಮಹತ್ವಾಕಾಂಕ್ಷೆ ಎಂದರೆ ದಿನದ ದುಡಿಮೆಯ ಅನಂತರ ಹಾಯಾಗಿ ಕಾಲು ಚಾಚಲು ಒಂದು ಮನೆ ಮಾಡಿಕೊಳ್ಳುವುದು." ಈ ರೀತಿಯಾಗಿ ನಮ್ಮ ಸ್ಥಿತಿ ಇದೆ. ದಯವಿಟ್ಟು ಬಿಲ್ಡಿಂಗ್ ಆಕ್ಟಿವಿಟೀಸ್ ಬಗ್ಗೆ ಜಾಸ್ತಿ ಗಮನ ಕೊಡಿ. ನಮ್ಮ ಹಳ್ಳಿಯಲ್ಲಿ ಜನತಾ ಮನೆಗಳಿಗೆ ೬ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಅದು ಬಹಳ ಕಡಿಮೆ. ದಯವಿಟ್ಟು ಇದನ್ನು ೧೦ ಸಾವಿರ ರೂಪಾಯಿಗಳಿಗಾದರೂ ಏರಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಸ್ಪಿಲ್ಲೋವರ್‌ನಲ್ಲಿ ೮ ಸಾವಿರ ಮನೆಗಳು ಇವೆ, ಇದು ಅವರಿಗೂ ಗೊತ್ತು. ಇದಕ್ಕೆ ಸುಮಾರು ೩ ಸಾವಿರ ಕೊಡುತ್ತಿದ್ದೀರಿ. ಗವರ್ನಮೆಂಟ್ ಆರ್ಡರ್ ಕೊಡಿ ಮಾಡಿದ್ದೀರಿ, ಎರಡು ಅಥವಾ ಮೂರು ಸಾವಿರ ಒಂದು ಮನೆಗಳಿಗೆ ಏನು ಇತ್ತು, ಅದನ್ನು ಜಾಸ್ತಿ ಮಾಡಿ ದುಡ್ಡು ಕೊಡದೇ ಇದ್ದರೆ ಮನೆಗಳನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ಅಮೌಂಟ್ ಅನ್ನು ಇನ್‌ಕ್ರೀಸ್ ಮಾಡಿದ್ದೀರಿ. ಆದರೆ ಆ ಫಂಡ್ಸ್ ಸರ್ಕಾರದಿಂದ ಬಿ.ಡಿ.ಓ. ಆಫೀಸ್‌ಗೆ ಇನ್ನೂ ತಲುಪಿಲ್ಲ. ಇದರಿಂದ ಬಿಲ್ಡಿಂಗ್ ಕಟ್ಟುವುದಕ್ಕಾಗುವುದಿಲ್ಲ. ಜೊತೆಗೆ ಇನ್ನೊಂದು ಕಾಯಿಲೆ. ಇವರು ಕೂಡ ಎಲ್ಲರೂ ಮನೆಗಳಿಗೆ ದುಡ್ಡನ್ನು ವಸೂಲು ಮಾಡುತ್ತಿದ್ದಾರೆ ಎಂದು ಇಷ್ಟು ದಿವಸ ಬಿಟ್ಟು ಕಂತುಗಳನ್ನು ಕೊಡಬೇಕೆಂದು ಕೇಳುತ್ತಿದ್ದೀರಿ. ಕಂತುಗಳನ್ನು ಕೊಡಬೇಕೆಂದು ಬಲಾತ್ಕಾರದಿಂದ ವಸೂಲು ಮಾಡಲು ಶುರು ಮಾಡಿದ್ದೀರಿ. ಬಲಾತ್ಕಾರದಿಂದ ವಸೂಲು ಮಾಡಬೇಡಿ. ಕಂತುಗಳಲ್ಲಿ ವಸೂಲು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಏಕೆಂದರೆ ಜನತಾ ಮನೆಗಳಲ್ಲಿ ಹೆಚ್ಚಾಗಿ ವಾಸ ಮಾಡುವವರೆಂದರೆ ಬಡವರು.

ಇನ್ನು ಭಾಗ್ಯ ಜ್ಯೋತಿ ಸ್ಕೀಮ್ ಬಗ್ಗೆ ಹೇಳುವುದಾದರೆ ತಾವು ಎಷ್ಟು ಮನೆಗಳಿಗೆ ಇದರ ಅನುಕೂಲ ಕೊಟ್ಟಿದ್ದೀರಿ ? ಒಂದು ವರ್ಷಕ್ಕೆ ನೂರು ಮನೆಗಳಿಗೆ ಕೊಡುತ್ತೀರಿ. ಭಾಗ್ಯ ಜ್ಯೋತಿ ಸ್ಕೀಮ್‌ನಲ್ಲಿ ಕೇವಲ ನೂರು ಮನೆಗಳಿಗೆ ಕೊಡುವುದು ಬೇಡ. ಅದನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ನಾನು ಕೇಳುವುದು ೫೦ ಸಾವಿರ ಮನೆಗಳಿಗೆ ಕೊಟ್ಟರೂ ಕೂಡ ಒಂದು ತಾಲ್ಲೂಕಿಗೆ ಎಷ್ಟು ಕೊಡುತ್ತೀರಿ. ಒಂದು ಮಂಡಲ್ ಪಂಚಾಯ್ತಿಗೆ ಎಷ್ಟು ಕೊಡುತ್ತೀರಿ ಎಂದು ಲೆಕ್ಕ ಹಾಕಿಕೊಂಡರೂ ಕೂಡ ೧೫-೧೭, ದೊಡ್ಡ ಪಂಚಾಯ್ತಿಗೆ ಮಾಕ್ಸಿಮಮ್ ೨೫ ಕೊಟ್ಟಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ೩೨ ಹಳ್ಳಿಗಳಿಗೆ ಕೊಡಬೇಕೆಂದು ಇದ್ದರೂ ನೀವು ಕೊಟ್ಟಿರುವುದು ೧೫ ಮನೆಗಳಿಗೆ. ಒಬ್ಬೊಬ್ಬ ಮಂಡಲ್ ಪಂಚಾಯ್ತಿ ಮೆಂಬರ್ ಮನೆಯನ್ನು ಹಂಚಿಕೊಂಡಿದ್ದಾರೆ ಎಲ್ಲ ಮನೆಗೂ ಹಂಚಿಕೊಳ್ಳುವುದಕ್ಕಾಗುವುದಿಲ್ಲ. ಪ್ರಬಲರು ಒಂದು ಮನೆಗೆ ಪಡೆದುಕೊಳ್ಳುತ್ತಾರೆ ರಿಸರ್ವ್ಡ್ ಪಂಚಾಯಿತ್ ಮೆಂಬರ್‌ಗೆ ಅದೂ ಬರುವುದಿಲ್ಲ. ಆದ್ದರಿಂದ ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕೆಂದು

ಕೇಳಿಕೊಳ್ಳುತ್ತೇನೆ. ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ, ಲೋಕೋಪಯೋಗಿ ಇಲಾಖೆಯ ಸಚಿವರು ಮಂಡಿಸಿದಂತಹ ಬೇಡಿಕೆಯನ್ನು ನಾನು ಸ್ವಾಗತಿಸಿ, ನಗರಾಭಿವೃದ್ಧಿ, ಮತ್ತು ವಸತಿ ಹಾಗೂ ಲೋಕೋಪಯೋಗಿ ಇಲಾಖೆಗಳ ವಿಚಾರವಾಗಿ ನಾನು ಮಾತನಾಡಲು ಬಯಸುತ್ತಾ ಇದ್ದೇನೆ. ಈಗ ನಾನು ಬರುವುದು ನಗರ ಪ್ರದೇಶದಿಂದ, ನನಗೆ ಜಿಲ್ಲಾ ಪರಿಷತ್ತಿನಲ್ಲಿ ಅವಕಾಶವೇ ಇಲ್ಲ, ಅದೇ ಪ್ರಕಾರವಾಗಿ ಮಹಾ ನಗರಸಭೆಯಲ್ಲೂ, ಸಹಿತ ಮಾತನಾಡಲು ನನಗೆ ಯಾವ ತರಹದ ಅವಕಾಶವಿಲ್ಲ. ಆದುದರಿಂದ ಇಲ್ಲಿ ವಿಧಾನ ಸೌಧದಲ್ಲಿ ನನಗೆ ಹೆಚ್ಚಿನ ಒಂದು ಅವಕಾಶವನ್ನು ಕೊಟ್ಟು ನನ್ನ ಸಲಹಾ ಸೂಚನೆಗಳಿಗೆ ಮಾನ್ಯತೆ ಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ನಾನು ವಿಜ್ಞಾಪನೆ ಮಾಡುತ್ತಾ ಇದ್ದೇನೆ. ೧೯೪೭ರಲ್ಲಿ ನಮ್ಮ ರಾಷ್ಟ್ರ ಸ್ವಾತಂತ್ರ್ಯ ವಾಯಿತು. ಆಮೇಲೆ ನಗರ ಪ್ರದೇಶಗಳು ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಾ ಬಂದಿವೆ. ಈ ನಗರ ಪ್ರದೇಶಗಳು ಮುಖ್ಯವಾಗಿ ಬೆಳೆಯುತ್ತಾ ಇರುವುದಕ್ಕೆ ಕಾರಣ, ಜನತೆ ಉದ್ಯೋಗವನ್ನು ಬಯಸಿ ನಗರ ಪ್ರದೇಶಗಳಿಗೆ ಬರುತ್ತಾ ಇರುವುದರಿಂದ ಈ ನಗರ ಪ್ರದೇಶಗಳಲ್ಲಿ ಶಿಕ್ಷಣದ ಎಲ್ಲ ಸವಲತ್ತುಗಳು ಇರುವುದರಿಂದ ಶಿಕ್ಷಣವನ್ನು ಪಡೆಯಲು ಜನತೆ ಗ್ರಾಮಾಂತರ ಪ್ರದೇಶದಿಂದ ವಲಸೆ ಬರುತ್ತಾ ಇದೆ. ಇದರ ಜೊತೆಗೆ ನಗರ ಪ್ರದೇಶಗಳು ಬೆಳೆಯುತ್ತಾ ಇರುವುದಕ್ಕೆ ಮುಖ್ಯ ಕಾರಣ, ಅಲ್ಲಿರುವಂಥ ಎಲ್ಲ ಆಡಳಿತದ ಕೇಂದ್ರಗಳು, ಸರ್ಕಾರದ ಕಚೇರಿಗಳು, ನ್ಯಾಯಾಲಯಗಳು ಮತ್ತು ಆರೋಗ್ಯದ ಒಂದು ಸೌಲತ್ತು ಏನಿದೆ ಈ ಎಲ್ಲ ಸೌಲತ್ತುಗಳನ್ನು ಪಡೆಯಲು ಗ್ರಾಮಪ್ರದೇಶದಿಂದ ನಗರ ಪ್ರದೇಶಕ್ಕೆ ಹೆಚ್ಚು ಜನ ಬರುತ್ತಾ ಇದ್ದಾರೆ. ಹೀಗಾಗಿ ಇವತ್ತು ನಗರ ಪ್ರದೇಶಗಳ ಜನಸಂಖ್ಯೆ ಅತಿ ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಾ ಇದೆ. ನಗರಗಳನ್ನು ಹೀಗೆ ಹೆಚ್ಚು ಬೆಳೆಯುವುದಕ್ಕೆ ಅವಕಾಶ ಕೊಟ್ಟು ಇವತ್ತು ಜನತೆ ಏನು ಟ್ಯಾಕ್ಸನ್ನು ಕಟ್ಟುತ್ತಾ ಇದ್ದಾರೆ, ಆ ಟ್ಯಾಕ್ಸ್‌ನಿಂದ ಸರ್ಕಾರದವರು ನಗರಸಭೆಗಳಿಗೆ ಏನು ಅನುದಾನವನ್ನು ಕೊಡುತ್ತಾ ಇದ್ದಾರೆ ಆ ಅನುದಾನದಿಂದ ಇವತ್ತು ನಗರಗಳ ಬೇಡಿಕೆಗಳಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಏಕೆಂದರೆ ಇವತ್ತಿನದಿವಸ ಜನ ಸಂಖ್ಯೆ ಬೆಳೆಯುತ್ತಿರುವ ಪ್ರಮಾಣದಲ್ಲಿ, ನಗರಗಳು ಬೆಳೆಯುತ್ತಿರುವ ಪ್ರಮಾಣದಲ್ಲಿ ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಣವನ್ನು ಪೂರೈಕೆ ಮಾಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ, ಬೇಡಿಕೆಗಳು ಹೆಚ್ಚಾಗುತ್ತಾ ಇರುವ ಪ್ರಮಾಣ ದಲ್ಲಿ ಹಣದ ಪೂರೈಕೆಯಾಗುತ್ತಾ ಇಲ್ಲ, ಈ ಸೌಲಭ್ಯಗಳನ್ನು ಸರ್ಕಾರ ಮತ್ತು ಮಹಾನಗರ ಸಭೆಗಳು ಪೂರೈಸಲಿಕ್ಕೆ ಆಗುತ್ತಾ ಇಲ್ಲ ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಮೊದಲು ನಗರಗಳ ಬೆಳವಣಿಗೆಯನ್ನು ತಡೆಗಟ್ಟಬೇಕು ಇವತ್ತಿನದಿವಸ ನಗರಗಳು ಏನು ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಾ ಇವೆ ಅದನ್ನು ತೀವ್ರವಾಗಿ ಸರ್ಕಾರ ತಡೆಗಟ್ಟಲೇಬೇಕು. ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಉದ್ಯೋಗಗಳನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡಬೇಕು, ಶಿಕ್ಷಣ ಸೌಲಭ್ಯಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಮುಖ್ಯವಾಗಿ ಗ್ರಾಮಗಳ ಜನತೆ ಶಹರ್‌ಗೆ ಬರುವುದನ್ನು ನಿಯಂತ್ರಣ ಮಾಡಬೇಕು. ಇದು ಸರ್ಕಾರದ ಆದ್ಯಕರ್ತವ್ಯ. ಈ ಒಂದು ದೃಷ್ಟಿಯಿಂದ ಸರ್ಕಾರ ಇದಕ್ಕೆ ಮೊಟ್ಟಮೊದಲನೇ ಆದ್ಯತೆ ಕೊಡಬೇಕು ಎಂದು ಹೇಳುತ್ತಾ ಇದ್ದೇನೆ. ಇವತ್ತಿನದಿವಸ ನಾನು ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ಕ್ಷೇತ್ರದಿಂದ ಬರುತ್ತಾ ಇದ್ದೇನೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಕ್ಷೇತ್ರದಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳು ಬರುತ್ತಾ ಇವೆ ಆ ಗ್ರಾಮಗಳ ಸ್ಥಿತಿ ಹೇಳಲಿಕ್ಕೆ ಅಸಾಧ್ಯ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ ಮೊದಲನೆ ಯದು, ಹುಬ್ಬಳ್ಳಿ-ಧಾರವಾಡ ಮಹಾನಗರ ಎರಡನೆಯದು. ಈ ಎರಡನೇ ಮಹಾನಗರದಲ್ಲಿ ರುವಂಥ ಗ್ರಾಮಗಳ ಸ್ಥಿತಿಯನ್ನು ನೋಡಿದರೆ ಏನೇನೂ ಬದಲಾವಣೆಯಾಗಿಲ್ಲ, ಯಾವ ಸೌಲಭ್ಯ ವನ್ನೂ ಮಹಾನಗರಸಭೆಯವರು ಕೊಟ್ಟಿಲ್ಲ. ಈ ಎರಡನೇ ಮಹಾನಗರದಲ್ಲಿರುವಂಥ ಗ್ರಾಮ ಪ್ರದೇಶಗಳ ವ್ಯವಸ್ಥೆ ಹೀಗಿರಬೇಕಾದರೆ ಇನ್ನೂ ಒಳಗೆ ಇರುವಂಥ ಗ್ರಾಮಗಳ ಪರಿಸ್ಥಿತಿ ಹೇಗಿರಬೇಕು. ಎಂದು ವಿಚಾರ ಮಾಡಬೇಕು. ಈ ದಿಶೆಯಲ್ಲಿ ಮಹಾನಗರಸಭೆಯವರು ರಸ್ತೆ, ಒಳಚರಂಡಿ ಯೋಜನೆ ಗಳನ್ನು ಮಾಡಬೇಕಾಗಿದೆ. ಮೂಲಭೂತವಾಗಿ ಮಲಪ್ರಭ ಯೋಜನೆಯಿಂದ ಹೆಚ್ಚು ನೀರು ಬಂದರೂ ಸಹ ಎಲ್ಲ ಜನರಿಗೂ ಪೂರೈಸಲಿಕ್ಕೆ ಆಗುತ್ತಾ ಇಲ್ಲ. ಮಲಪ್ರಭ ಯೋಜನೆಯನ್ನು ಮಾಡಿ ಧಾರವಾಡಕ್ಕೆ

ಏನು ನೀರನ್ನು ಒದಗಿಸುವ ಪೈಪ್‌ಲೈನ್ ಏನಿದೆ, ಸವದತ್ತಿಯಿಂದ ಧಾರವಾಡಕ್ಕೆ ಬರುವಂಥ ಪೈಪ್‌ಲೈನ್ ಎಲ್ಲಾ ಕಡೆ ಸೋರುತ್ತಾ ಇದೆ.

ನಾನು ಚುನಾಯಿತನಾಗಿ ಬಂದಕೂಡಲೇ ಮೊಟ್ಟಮೊದಲನೆಯದಾಗಿ ಈ ಬಗ್ಗೆ ಆ ಮಹಾ ನಗರ ಸಭೆಯವರಿಗೆ ತಿಳಿಸಿದೆ. ನಂತರ ವಿದ್ಯುಚ್ಛಕ್ತಿ ಮಂಡಲಿಯವರು, ಜಲಮಂಡಲಿಯವರೂ ಹೋಗಿ ನೋಡಿಕೊಂಡುಬಂದಿದ್ದಾರೆ. ಆದರೆ ಅವತ್ತಿನಿಂದ ಇವತ್ತಿನವರೆಗೂ ಆ ಸೋರುವಿಕೆಯನ್ನು ಯಾರೂ ಕೂಡ ತಡೆಗಟ್ಟಲು ಗಮನ ಕೊಟ್ಟಿಲ್ಲ. ಅಲ್ಲಿ ಬಹಳ ಸೋರುವಿಕೆ ಇದೆ. ನೀರಿನ ಛೇಂಬರ್‌ಗಳಿಂದ ಹೊರಗೆ ಹೋಗುತ್ತಿರುವ ನೀರನ್ನು ಉಪಯೋಗಿಸಿಕೊಂಡು ಅದರ ಸುತ್ತ ಮುತ್ತ ಇರತಕ್ಕ ಜನರು ನೀರಾವರಿ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. ಕುಡಿಯುವ ನೀರಿನ ಪುರವಟೆಯನ್ನು ಇನ್ನೂ ಹೆಚ್ಚು ಮಾಡಬೇಕಾಗಿದೆ. ಇದರ ಬಗ್ಗೆ ಮಹಾ ನಗರಸಭೆಯವರು ಸರಿಯಾಗಿ ಗಮನವನ್ನು ಹರಿಸಬೇಕು. ಕಳೆದ ೩ ವರ್ಷಗಳಿಂದ ಕುಡಿಯುವ ನೀರಿನ ಪುರವಟೆಯಾಗುತ್ತಿದೆ. ಆದರೆ ಎಲ್ಲ ಕಡೆಗೂ ಒಂದೇ ಸಮನಾದ ರೀತಿಯಲ್ಲಿ ಆಗಿಲ್ಲ. ಕೆಲವು ಕಡೆ ಬಹಳ ಚೆನ್ನಾಗಿ ನೀರು ಬರುತ್ತದೆ. ಆದರೆ ಇನ್ನು ಕೆಲವು ಕಡೆ ಒಂದು ಕಿರುಬೆರಳು ಗಾತ್ರದಲ್ಲಿ ನೀರು ಬರುತ್ತಿದೆ. ಅಲ್ಲಿಯ ಜನರು ಈ ಅವ್ಯವಸ್ಥೆಯಿಂದಾಗಿ ಬಹಳ ತೊಂದರೆ ಪಟ್ಟುಕೊಂಡು ನೋಡುಕೊಂಡಿದ್ದಾರೆ.

ಇನ್ನು ಒಳಚರಂಡಿ ವ್ಯವಸ್ಥೆಯ ಬಗ್ಗೆ ಹೇಳುವುದಕ್ಕೇ ಸಾಧ್ಯವಿಲ್ಲ. ಏಕೆಂದರೆ ಒಳಚರಂಡಿ ವ್ಯವಸ್ಥೆ ಬಹಳ ಹೊಲಸಾಗಿದೆ ಮ್ಯಾನ್ ಹೋಲ್ಸ್ ಏನಿವೆ ಅವುಗಳಿಗೆ ಮುಚ್ಚಳಗಳೇ ಇಲ್ಲ. ಮುಚ್ಚಳಗಳಿಗೆ ಬದಲಾಗಿ ಕಲ್ಲುಗಳನ್ನು ಹೇರಿದ್ದಾರೆ. ಇದರಿಂದಾಗಿ ಜನರಾಗಲಿ, ವಾಹನಗಳಾಗಲಿ ಸುಲಲಿತವಾಗಿ ಓಡಾಡುವಂತಿಲ್ಲ. ಇಂಥ ಒಂದು ಪರಿಸ್ಥಿತಿ ದುಸ್ಥಿತಿ ಅಲ್ಲಿ ಬಂದಿದೆ. ಇನ್ನು ಧಾರವಾಡದಲ್ಲಿರತಕ್ಕ ಮಾರ್ಕೆಟ್ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಹಗಲು ಹೊತ್ತಿನಲ್ಲಿ ಅಲ್ಲಿ ಅಡ್ಡಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ರೋಡ್ ಮೇಲೆಯೇ ಅಂಗಡಿಗಳಿವೆ. ಫುಟ್‌ಪಾತ್‌ನ ಮೇಲೆಯೇ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ, ನಮ್ಮಲ್ಲಿ ಬಹಳ ವಿಶಾಲವಾದ ಜಾಗ ಇದೆ. ಆ ಜಾಗದಲ್ಲಿ ಸುವ್ಯವಸ್ಥಿತವಾದ ಒಂದು ಮಾರುಕಟ್ಟೆಯನ್ನು ಕಟ್ಟಿಸುವುದಕ್ಕೆ ಇದುವರೆಗೂ ಆ ಮಹಾ ನಗರಸಭೆಯವರಿಂದ ಆಗಿಲ್ಲ. ಅಲ್ಲಿ ಒಂದು ಆಧುನಿಕ ಮಾರ್ಕೆಟ್‌ನ್ನು ಕಟ್ಟಿಕೊಟ್ಟರೆ ರೈತರು ಬೆಳೆದ ಮಾಲನ್ನು ತಂದು ಮಾರಾಟ ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಚಿಕ್ಕಪುಟ್ಟ ವ್ಯಾಪಾರಿಗಳೂ ಕೂಡ ಅಲ್ಲಿ ವ್ಯಾಪಾರ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಜನರೂ ಕೂಡ ಒಳ್ಳೆಯ ತರಕಾರಿಗೋಸ್ಕರ ಅಲ್ಲಿಗೆ ಹೋಗಿಬರುವುದಕ್ಕೆ ಅನುಕೂಲವಾಗುತ್ತದೆ. ಆದರೆ ಈಗ ಅಲ್ಲಿ ಇಡೀ ರೋಡಿನ ಮೇಲೆ ಮಾರ್ಕೆಟ್ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಆ ಮಹಾ ನಗರ ಸಭೆಯವರು ಹೆಚ್ಚಿನ ಗಮನ ಕೊಟ್ಟಿಲ್ಲ. ಧಾರವಾಡ ನಗರದ ಜನಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಎಲ್ಲ ಬಡಾವಣೆಗಳಿಂದಲೂ ನಾಗರೀಕರು ಒಂದೇ ಮಾರ್ಕೆಟಿಗೆ ಬಂದು ವ್ಯಾಪಾರ ಮಾಡಿಕೊಂಡು ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಪ್ರಮುಖ ಬಡಾವಣೆಗಳಲ್ಲಿ ಚಿಕ್ಕಪುಟ್ಟ ಮಾರುಕಟ್ಟೆಗಳನ್ನು ಕಟ್ಟಿಸಬೇಕು. ಕೆಲವು ಬಡಾವಣೆಗಳು ನಾಲ್ಕೈದು ಕಿಲೋಮೀಟರ್‌ಗಳಷ್ಟು ದೊಡ್ಡದಾಗಿ ಬೆಳೆದಿರುತ್ತವೆ. ಆ ಬಡಾವಣೆಯ ಎಲ್ಲ ಜನರಿಗೂ ಅನುಕೂಲವಾಗುವಂತೆ ಮುಖ್ಯವಾದ ಸ್ಥಳದಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಆದರೆ ಆ ಪ್ರದೇಶದಲ್ಲಿ ವಾಸಮಾಡತಕ್ಕ ನಾಗರೀಕರಿಗೆ ಅವಶ್ಯಕವಾಗಿ ಬೇಕಾದ ಸೌಲಭ್ಯಗಳನ್ನು ಮಹಾ ನಗರ ಸಭೆಯವರು ಒದಗಿಸಿಕೊಡುವ ಬಗ್ಗೆ ಗಮನವನ್ನೇ ಹರಿಸುತ್ತಿಲ್ಲ.

ಇದರ ಜೊತೆಗೆ ವಿದ್ಯುಚ್ಛಕ್ತಿ ಬಗ್ಗೆಯೂ ಕೂಡ ನಾನು ಒಂದೆರಡು ಮಾತನ್ನು ಹೇಳಬೇಕಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ವಿದ್ಯುಚ್ಛಕ್ತಿ ಯಾವ ಸಂದರ್ಭದಲ್ಲಿ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ರಾತ್ರಿ ಹೊತ್ತು ವಿದ್ಯುಚ್ಛಕ್ತಿ ಇರುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಹಗಲು ಹೊತ್ತಿನಲ್ಲೇ ಬೀದಿ ಲೈಟುಗಳು ಉರಿಯುತ್ತಿರುತ್ತವೆ. ಇದರ ಬಗ್ಗೆ ಕೂಡ ಮಹಾ ನಗರ ಸಭೆಯವರು ಗಮನಹರಿಸಬೇಕು. ನಗರ ಸಭೆಯವರಿಗೆ ಬರತಕ್ಕ ವರಮಾನದಲ್ಲಿ ಸುಮಾರು ೬೦ ಪರ್ಸೆಂಟ್‌ನಷ್ಟು ಕೇವಲ ಅಲ್ಲಿಯ ಸಿಬ್ಬಂದಿವರ್ಗದವರ ಸಂಬಳ ಸಾರಿಗೋಸ್ಕರವೇ ಖರ್ಚಾಗುತ್ತಿದೆ. ಇನ್ನುಳಿದ ಹಣದಲ್ಲಿ ಅವರು ಅಭಿವೃದ್ಧಿ ಕಾರ್ಯಗಳನ್ನು ಏನು ಮಾಡುತ್ತಾರೋ ಜನರಿಗೆ ಏನು ಸೌಲಭ್ಯಗಳನ್ನು ಒದಗಿಸುತ್ತಾರೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳೇ ಇಲ್ಲ. ಅಲ್ಲಿಯ ಮಕ್ಕಳು ಆಟವಾಡುವುದಕ್ಕೆ ಆಟದ ಬಯಲುಗಳಿಲ್ಲ. ಅಂದ ಮೇಲೆ ಆ ಮಕ್ಕಳ ಭವಿಷ್ಯ ಏನಾಗ

ಬಹುದು ? ಇಂಥಾ ವಾತಾವರಣದಲ್ಲಿ ಮಕ್ಕಳು ಬೆಳೆಯಬಾರದು ಮಕ್ಕಳಿಗೆ ಆಟವಾಡುವುದಕ್ಕೆ ಆಟದ ಬಯಲುಗಳು, ಕಮ್ಯುನಿಟಿ ಹಾಲ್‌ಗಳು, ಗ್ರಂಥಾಲಯಗಳು ಇನ್ನೂ ಏನೇನು ಅವಶ್ಯಕವಿದೆ ಅವುಗಳನ್ನು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಇದಕ್ಕೆ ಮಹಾ ನಗರ ಸಭೆಯವರು ಹೆಚ್ಚಿನ ಗಮನ ಕೊಡಬೇಕು. ಆದರೆ ಅವರು ಹೆಚ್ಚಿನ ಗಮನವನ್ನು ಈ ಕಡೆಗೆ ಕೊಟ್ಟು ಕೆಲಸ ಮಾಡುತ್ತಿಲ್ಲ.

ಈಗ ಬೆಂಗಳೂರಿನಲ್ಲಿ ಕೊಳಚೇ ಪ್ರದೇಶಗಳು ಯಾವ ರೀತಿ ಬೆಳೆಯುತ್ತಿದೆ ಅದೇ ರೀತಿ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿಯೂ ಬೆಳೆಯುತ್ತಿದೆ. ಅಲ್ಲಿನ ಮಹಾ ನಗರ ಸಭೆಯು ಕೆಲವೊಂದು ಕೊಳಚೇ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾಗಿದೆ. ಇದಕ್ಕಾಗಿಯೇ ಇವರು ಕೊಳಚೇ ಮಂಡಲಿಯು ಇವತ್ತಿನವರೆಗೂ ಯಾವ ಕೆಲಸವನ್ನು ತೆಗೆದುಕೊಳ್ಳದ ಕಾರಣ ಕೊಳಚೇ ಪ್ರದೇಶಗಳು ಅಭಿವೃದ್ಧಿ ಯಾಗುತ್ತಿಲ್ಲ. ಇದು ಬಹಳ ವಿಷಾದದ ಸಂಗತಿಯಾಗಿದೆ. ಏತಕ್ಕೆಂದರೆ ಕೊಳಚೇ ಪ್ರದೇಶಗಳಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಲಾಗದೆ ಹೋದರೆ ಇಡೀ ನಗರದ ವಾತವರಣವೇ ಕೆಟ್ಟು ಹೋಗುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ಕೊಳಚೇ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ೧೮ ಪರ್ಸೆಂಟ್ ಹಣ ಸರ್ಕಾರದವರು ಹರಿಜನ ಗಿರಿಜನರು ಇರುವ ಪ್ರದೇಶಗಳಲ್ಲಿ ಏನು ಖರ್ಚು ಮಾಡಬೇಕಾಗಿದೆ, ಅದನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ. ರಸ್ತೆಗಳಾಗಲಿ ಒಳಚರಂಡಿ ವ್ಯವಸ್ಥೆ ಯಾಗಲಿ, ವಿದ್ಯುಚ್ಛಕ್ತಿ ವ್ಯವಸ್ಥೆಯಾಗಲಿ ಅವರಿಗೆ ಈ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಲು ಖರ್ಚು ಮಾಡಬೇಕಾದ ಹಣವನ್ನು ಸಹ ಖರ್ಚು ಮಾಡುತ್ತಿಲ್ಲ ನನ್ನ ದೃಷ್ಟಿಯಲ್ಲಿ ಹುಬ್ಬಳ್ಳಿ. ಧಾರವಾಡ ನಗರ ಪ್ರದೇಶ ಬಹಳವಾಗಿ ಬೆಳೆಯುತ್ತಿದೆ. ಅಲ್ಲಿ ಹಿರೆಕೆರೆ ಎಂದು ಒಂದು ದೊಡ್ಡ ಕೆರೆ ಇದೆ. ಇಡೀ ನಗರಕ್ಕೆ ಇರುವುದು ಇದು ಒಂದೇ ಕೆರೆಯಾಗಿದೆ ನಗರದಲ್ಲಿದ್ದ ಎಷ್ಟೋ ಕೆರೆಗಳನ್ನು ಮುಚ್ಚಿ ಮನೆಗಳನ್ನು ಮತ್ತು ಇಂಡಸ್ಟ್ರೀಸ್‌ಗಳನ್ನು ಮಾಡಿರುತ್ತಾರೆ. ಈ ಒಂದು ಕರೆಗೆ ಒಳ ಚರಂಡಿ ಪೈಪ್‌ಗಳಿಂದ ಬರುವ ಹೊಲಸು ನೀರನ್ನೆಲ್ಲ ಬಿಟ್ಟಿರುವುದರಿಂದ ಅದು ಹೊಲಸು ನೀರಿನಿಂದ ತುಂಬಿ ಹೋಗಿದೆ. ಇದರಿಂದ ದೊಡ್ಡ ಪ್ರಮಾಣ ದಲ್ಲಿ ಉಂಟಾಗುವ ಗುಂಗಾಡಿನಿಂದ ಅದರ ಸುತ್ತ ಮುತ್ತಲಿನ ಪ್ರದೇಶದ ಜನರು ಊಟ ಮಾಡಲಿಕ್ಕೂ ಸಾಧ್ಯವಾಗುತ್ತಿಲ್ಲ. ಆದಷ್ಟು ದೊಡ್ಡ ಪ್ರಮಾಣದಲ್ಲಿ ಗುಂಗಾಡು ಬಂದು ಜನರಿಗೆ ಬಹಳ ಹಿಂಸೆಯಾಗಿದೆ ಆದ್ದರಿಂದ ಒಳಚರಂಡಿ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಮಾಡಿ ಸ್ವಚ್ಛವಾದ ನೀರು ಈ ಹಿರೆಕೆರೆಯಲ್ಲಿ ತಂಗಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ನಗರ ಪ್ರದೇಶದಲ್ಲಿ ಪೈಪ್‌ಲೈನ್‌ಗಳಿಂದ ಕುಡಿಯುವ ನೀರನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಕುಡಿಯುವ ನೀರಿನ ಸಲುವಾಗಿ ಅನೇಕ ಕಡೆ ಬಾವಿಗಳು ಇರುತ್ತವೆ. ಈ ಬಾವಿಗಳಿಗೆ ನೀರು ಬರಬೇಕಾದರೆ ಕೆರೆಯಲ್ಲಿ ನೀರನ್ನು ಶೇಕರಣೆ ಮಾಡಲೇಬೇಕು. ಆದ್ದರಿಂದ ಈ ಹಿರೆಕೆರೆಯನ್ನು ಅಭಿವೃದ್ಧಿ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ,

ಇನ್ನು ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಿಗೆ ಬೈಪಾಸ್ ರಸ್ತೆಗಳು ಇರುತ್ತವೆ. ಇವುಗಳನ್ನು ಅಭಿವೃದ್ಧಿ ಪಡಿಸಬೇಕು. ಹುಬ್ಬಳ್ಳಿ ಧಾರವಾಡ ರಾಷ್ಟ್ರೀಯ ಹೆದ್ದಾರಿಯ ಬೈಪಾಸ್ ರಸ್ತೆಗಳಲ್ಲಿ ಬಹಳವಾಗಿ ಆಕ್ಸಿಡೆಂಟ್‌ಗಳು ನಡೆಯುತ್ತಿರುತ್ತವೆ, ಇದನ್ನು ಬಹಳ ತೀವ್ರವಾಗಿ ಗಮನಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಹಾನಗರ ಸಭೆಯಲ್ಲಿರುವ ಸದಸ್ಯರು, ಯಾವ ಜನತೆಯಿಂದ ಆರಿಸಿ ಬಂದ ಸದಸ್ಯರು ಇರುತ್ತಾರೋ ಅವರು ನಗರದ ಆಸ್ತಿಗಳನ್ನು ತಮ್ಮದಾಗಿ ಮಾಡಿಕೊಳ್ಳುತ್ತಿದ್ದಾರೆ. ಅದು ಯಾವುದೇ ನಗರ ಅಭಿವೃದ್ಧಿಗೆ ಆದಾಯ ತರುವ ಮಹತ್ವದ ಸ್ಥಳವಾಗಿದ್ದರೂ ಜನತಾ ಪ್ರತಿನಿಧಿಗಳಾದ ಇವರು ಆ ಆದಾಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್ — ದಯವಿಟ್ಟು ಅವರು ಯಾರು, ಅವರ ಹೆಸರುಗಳನ್ನು ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್.— ಹುಬ್ಬಳ್ಳಿ ಮಹಾ ನಗರದ ಮಧ್ಯದಲ್ಲಿ ಬಹಳ ಉತ್ತಮವಾದ ಮತ್ತು ಫಲವತ್ತಾದ ಜಮೀನು ಇದೆ. ಅಂಥ ಜಮೀನನ್ನು ಸರ್ಕಾರದವರು ಮೀಸಲು ಇಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಇಂಥ ಜಮೀನನ್ನು ಎಕರೆಗೆ ಒಂದು ಕೋಟಿ

ರೂಪಾಯಿಗಳನ್ನು ಖರ್ಚು ಮಾಡಿದರೂ ತಯಾರು ಮಾಡಲಿಕ್ಕೆ ಸಾಧ್ಯವಿಲ್ಲ. ಹಸಿರು ಪಟ್ಟಿ ಜಮೀನನ್ನು ಕಾಯ್ದಿರಿಸಬೇಕು. ಬೇರೆ ಬಂಜರು ಭೂಮಿಯಲ್ಲಿ ನಗರ ಬಡಾವಣೆಯನ್ನು ಮಾಡಬೇಕು. ಬಂಜರು ಭೂಮಿಯಲ್ಲಿ ಇಂಡಸ್ಟ್ರೀಸ್‌ಗಳನ್ನು ತೆಗೆದು ಉತ್ತಮವಾದ ನಗರವನ್ನಾಗಿ ಮಾಡಬೇಕು. ಈ ಈ ಫಲವತ್ತಾದ ಭೂಮಿಯಲ್ಲಿ ಮನೆ ನಿವೇಶನಗಳನ್ನು ಮಾಡಬಾರದೆಂದು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ನಮ್ಮ ಸೂಪರ್ ಮಾರ್ಕೆಟ್ ಕೂಡ ತೀವ್ರವಾಗಿ ಆಗಬೇಕು. ಮತ್ತು ಬೇರೆ ಬೇರೆ ಬಡಾವಣೆಗಳಲ್ಲಿ ಚಿಕ್ಕ ಪುಟ್ಟ ಬಜಾರ್‌ಗಳನ್ನು ಮಾಡಬೇಕು. ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವವರನ್ನೆಲ್ಲಾ ಯಾವಾಗ ಬೇಕಾದರೂ ಓಡಿಸುತ್ತಾರೆ ಪೋಲೀಸರು ದಬ್ಬಾಳಿಕೆ ಮಾಡುತ್ತಾರೆ. ಇದರಿಂದ ಚಿಕ್ಕ ಪುಟ್ಟ ವ್ಯಾಪಾರ ಮಾಡುವವರ ಹೊಟ್ಟೆಯ ಮೇಲೆ ಹೊಡೆದ ಹಾಗೆ ಆಗುತ್ತದೆ. ಆದ್ದರಿಂದ ಇವರಿಗೆ ಬೇರೆ ಕಡೆ ವ್ಯಾಪಾರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಎಲ್ಲ ಕಡೆ ತೋಟಗಳ ನಿರ್ಮಾಣ ಮಾಡಬೇಕು. ಶಾಲಾ ಕಟ್ಟಡಗಳಿಗೆ ಹೆಚ್ಚು ಆದ್ಯತೆ ಕೊಡಬೇಕು, ಮಕ್ಕಳ ಆಟದ ಬಯಲಿಗೆ ಆದ್ಯತೆ ಕೊಡಬೇಕು. ನಗರದಲ್ಲಿರುವ ಕೊಳಚೆ ಪ್ರದೇಶಗಳನ್ನು ಹೆಚ್ಚು ಸುಂದರವಾಗಿ ಮಾಡಲಿಕ್ಕೆ ಮಹಾ ನಗರ ಸಭೆ ಮತ್ತು ಅಭಿವೃದ್ಧಿ ಬೋರ್ಡ್‌ಗಳು ಹೆಚ್ಚಿನ ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ.

ಛೇರ್ಮನ್.— ನಾನು ಈಗಾಗಲೇ ಹೇಳಿದ್ದೇನೆ. ತಾವು ಸಹಕರಿಸಬೇಕು. ತಾವು ಭಾಷಣ ಮುಗಿಸಿ ಸಾಕು.

ಶ್ರೀ ಚಂದ್ರಕಾಂತ್ ಜಿ ಬೆಲ್ಲದ್.— ನಮ್ಮಲ್ಲಿ ಒಂದು ಕಲಾಭವನ ಇದೆ. ಅಲ್ಲಿ ಸೌಂಡ್ ಸಿಸ್ಟಂ ಇಲ್ಲ. ಎಷ್ಟೋ ದಿವಸಗಳಿಂದ ಈ ಬೇಡಿಕೆ ಇದೆ. ಅದನ್ನೂ ಸಹ ಪೂರೈಸಬೇಕು ಎಂದು ಹೇಳುತ್ತೇನೆ. ನಮ್ಮ ಮಹಾ ನಗರಸಭೆಯಲ್ಲಿರುವಂಥ ಅನೇಕ ಜನರಿಗೆ ವಸತಿ ಸಮಸ್ಯೆ ಇದೆ ಮನೆ ಕಟ್ಟಿಸಿಕೊಡುವ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದರು. ಆ ನಗರದಲ್ಲಿ ನಿವೇಶನ ಪಡೆದಿದ್ದಾರೆ. ಅಲ್ಲಿ ತೀವ್ರದಲ್ಲೇ ಬಡ ಜನರಿಗೆ ಮನೆ ಕಟ್ಟಿಸಿಕೊಡಬೇಕು. ಹುಡ್ಕೊ ನೆರವಿನಿಂದಲೂ ಮನೆಗಳನ್ನು ಕಟ್ಟಿಸಿಕೊಡಬೇಕು. ಈ ಎಲ್ಲ ಸೌಲಭ್ಯಗಳನ್ನೂ ಒದಗಿಸಿ ಅದನ್ನು ಸುಂದರ ನಗರವನ್ನಾಗಿ ಮಾಡಬೇಕು. ನಗರಗಳನ್ನು ಹೆಚ್ಚು ಬೆಳೆಸಲಿಕ್ಕೆ ಅವಕಾಶ ಕೊಡಬಾರದು. ಬೇರೆ ಬೇರೆ ಪ್ರದೇಶಗಳಲ್ಲಿ. ಗ್ರಾಮೀಣ ಪ್ರದೇಶಗಳಲ್ಲಿ ಉದ್ದಿಮೆಗಳನ್ನು ಒಯ್ಯಬೇಕೆಂದು ಹೇಳುತ್ತಾ ತೀವ್ರವಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ (ಜೇವರ್ಗಿ).— ಮಾನ್ಯ ಅಧ್ಯಕ್ಷರೆ, ಈ ದಿನ ವಸತಿ ಖಾತೆ ಮಂತ್ರಿಗಳು, ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸಿ ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಈ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಂಚಿರುವ ಮನೆ ನಿವೇಶನಗಳ ಬಗ್ಗೆ ಕೊಟ್ಟಿದ್ದಾರೆ. ಜನತಾ ಆಡಳಿತ ೩ ವರ್ಷ ಮುಗಿದನಂತರ ಕರ್ನಾಟಕದಲ್ಲಿ ನಾವು ೧೨--೧೩ ಲಕ್ಷ ಸೈಟುಗಳನ್ನು ಕೊಟ್ಟಿದ್ದೇವೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ನಾನು ಅದನ್ನು ಬಿಡಿಸಿ ಹೇಳಬೇಕಾದರೆ ಸೆಂಟ್ರಲ್ ಸೆಕ್ಟರ್‌ನಲ್ಲಿ ಇದು ಪ್ರಾರಂಭವಾಗಿದ್ದು ೧೯೭೨–೭೩ರಲ್ಲಿ ೧೯೭೪ರಲ್ಲಿ ರಾಜ್ಯ ಸರ್ಕಾರ ಕೂಡ ರೂರಲ್ ಏರಿಯಾದಲ್ಲಿ ಯಾರು ಬಡತನದ ರೇಖೆಯ ಒಳಗಡೆ ಇದ್ದಾರೆ ಅವರಿಗೆ ಸೈಟುಗಳನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ ಎಂಬ ರೀತಿಯಲ್ಲಿ ಶ್ರೀಮಾನ್ ದೇವರಾಜಅರಸ್ ಅವರು ಮುಖ್ಯಮಂತ್ರಿಯಾಗಿದ್ದಾಗ ೨೦ ಅಂಶಗಳ ಕಾರ್ಯಕ್ರಮದ ಅಂಗವಾಗಿ ಬಡ ಜನರಿಗೆ ಸೈಟ್ ಕೊಡತಕ್ಕ ಸ್ಕೀಂ ಪ್ರಾರಂಭವಾಯಿತು. ೧೯೭೪ರಿಂದ ೧೯೮೩ರವರೆಗೆ ೧೨,೬೯,೦೦೦ ಸೈಟುಗಳನ್ನು ಈ ಮೊದಲಿನ ಸರ್ಕಾರ ಕೊಟ್ಟಿದೆ. ಈಗಿನ ಸರ್ಕಾರದವರು ಸಹ ಹಳ್ಳಿ ಪ್ರದೇಶದಲ್ಲಿರತಕ್ಕ ಜನರಿಗೆ ಸೈಟುಗಳನ್ನು ಕೊಡತಕ್ಕ ಕೆಲಸವನ್ನು ಮಾಡಿದ್ದಾರೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ನಾನು ಈ ಪುಸ್ತಕದಲ್ಲಿರುವುದನ್ನು ಹೇಳುತ್ತಿದ್ದೇನೆ. ಪೊಲಿಟಿಕಲ್ಲಾಗಿ ಮಾಡಿಯಾಗಲೀ ಅಥವಾ ಬೇರೆ ರೀತಿಯಿಂದಾಗಲೀ ನಾನು ಆಪಾದನೆ ಮಾಡುತ್ತಿಲ್ಲ. ಬಡವರಿಗೆ, ಹಳ್ಳಿ ಪ್ರದೇಶದ ಜನರಿಗೆ ಸೈಟ್ ಕೊಡುವ ಬಗ್ಗೆ ಸರ್ಕಾರದ ಮನಸ್ಸಿನಲ್ಲಿ ಎಷ್ಟು ಆಸಕ್ತಿ ಇದೆ ಎಂಬುದನ್ನು ಈ ಸದನದಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಈ ಸರ್ಕಾರ ೩ ವರ್ಷಗಳ ಅವಧಿಯಲ್ಲಿ ೧೯೮೩ರಿಂದ ೮೬ರವರೆಗೆ ಕೇವಲ ೬೨ ಸಾವಿರ ಸೈಟುಗಳನ್ನು ಹಂಚಿದೆ. ಸೆಕೆಂಡ್ ಸರ್ವೇ ಕೆಲಸವನ್ನು ಕೂಡ ಮೊನ್ನೆ ಮಾಡಿದ್ದಾರೆ. ಸೆಕೆಂಡ್ ಸರ್ವೇಯಲ್ಲಿ ಅವರು ಗುರುತಿಸಿರುವುದು ೨.೧೩ ಲಕ್ಷ ಒಟ್ಟು

೧೯೭೬ರಿಂದ ೧೯೮೮ರವರೆಗೆ ಸೈಟ್‌ಲೆಸ್ ಜನರಿಗೆ ಸೈಟ್ ಕೊಡಬೇಕೆಂದು ಐಡೆಂಟಿಫೈ ಮಾಡಿದ್ದು ೧೪.೮೩ ಲಕ್ಷ. ಇದರಲ್ಲಿ ಹಿಂದಿನ ಸರ್ಕಾರ ೧೯೭೪ರಿಂದ ೮೩ರವರೆಗೆ ೧೨.೬೯,೫೩೪ ಸೈಟುಗಳನ್ನು ಕೊಟ್ಟಿದೆ. ೧೯೮೩ರಿಂದ ೧೯೮೮ರವರೆಗೆ ಈ ಸರ್ಕಾರ ಕೇವಲ ೯೨ ಸಾವಿರ ಸೈಟುಗಳನ್ನು ಕೊಟ್ಟಿದೆ. ಹೋದ ವರ್ಷ ೧೯೮೭-೮೮ರಲ್ಲಿ ಟಾರ್ಜೆಟ್ ಮಾಡಿದ್ದು ಕೇವಲ ೪೦ ಸಾವಿರ ಸೈಟ್ ಕೊಡಬೇಕೆಂದು. ಅದರಲ್ಲಿ ೧೫,೭೧೩ ಸೈಟುಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ. ಸೆಕೆಂಡ್ ಸರ್ವೇಯನ್ನು ೧೩ ಡಿಸ್ಟ್ರಿಕ್ಟ್‌ನಲ್ಲಿ ಕಂಡಕ್ಟ್ ಮಾಡಿದ್ದಾರೆ. ಈ ೧೩ ಡಿಸ್ಟ್ರಿಕ್ಟ್‌ನಲ್ಲಿ ಡಿಮ್ಯಾಂಡ್ ಇದೆ ಎಂದು ಐಡೆಂಟಿಫೈ ಮಾಡಿರುವುದು ೨.೧೩ ಲಕ್ಷ ಈಗಲೂ ಕೂಡ ೭ ಡಿಸ್ಟ್ರಿಕ್ಟ್‌ನಲ್ಲಿ ಇನ್ನೂ ಸೈಟ್ಸ್

೪-೦೦ ಪಿ. ಎಂ.

(ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು.)

ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ ಮತ್ತು ಬಜೆಟ್ ಸ್ಪೀಚ್‌ನಲ್ಲೂ ಹೇಳಿದ್ದಾರೆ. ಏನೆಂದರೆ, ಕರ್ನಾಟಕದಲ್ಲಿ ೧೪.೮೩ ಲಕ್ಷ ಐಡೆಂಟಿಫೈ ಮಾಡಿದ್ದು ಮತ್ತು ಇಲ್ಲಿಯವರೆಗೆ ಡಿಸ್ಟ್ರಿಬ್ಯೂಟ್ ಮಾಡಿರುವುದು ೧೩ ಲಕ್ಷ ಸೈಟ್ಸ್ ಎಂದು ಆದರೆ ನಾವು ಹೇಳತಕ್ಕದ್ದು ಕೇವಲ ೯೨ ಸಾವಿರ ಸೈಟುಗಳನ್ನು ೫ ವರ್ಷದ ಅವಧಿಯಲ್ಲಿ ಕೊಟ್ಟಿದ್ದೀರಿ ಎಂದು, ಇದಕ್ಕೆ ನೀವು ಹಣ ಕೂಡ ಪ್ರೊವೈಡ್ ಮಾಡಿಲ್ಲ. ರಿವ್ಯೂ ಕೂಡ ಆಗಿಲ್ಲ. ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಕೂಡ ಗಮನ ಹರಿಸಿಲ್ಲ. ೫ ವರ್ಷಗಳ ಕಾಲದಲ್ಲಿ ಬಡವರಿಗೆ, ೨೪೦೦ ರೂಪಾಯಿಯೊಳಗಿರತಕ್ಕ, ಬಡತನ ರೇಖೆಯ ಒಳಗಡೆ ಇರುವ ಜನರಿಗೆ, ಅದರಲ್ಲೂ ಹಳ್ಳಿ ಪ್ರದೇಶದಲ್ಲಿರತಕ್ಕ ಜನರಿಗೆ ಸೈಟುಗಳನ್ನು ಕೊಡತಕ್ಕ ಕಾರ್ಯ ಈ ಜನತಾ ಸರ್ಕಾರದಲ್ಲಿ ಆಗಿಲ್ಲ ಎಂಬ ಆಪಾದನೆಯನ್ನು ೧೯೮೮-೮೯ರ ಪರ್ಫಾರ್ಮೆನ್ಸ್ ಬಜೆಟ್ ಆಧಾರದಿಂದ ಮಾಡುತ್ತಿದ್ದೇನೆ. ೧೫ ಲಕ್ಷ ಐಡೆಂಟಿಫೈ ಮಾಡಿದ್ದೇವೆ, ಅದರಲ್ಲಿ ೧೩ ಲಕ್ಷ ಕೊಟ್ಟಿದ್ದೇವೆ ಎಂದು ಅವರು ಏನು ಹೇಳುತ್ತಾರೆ ಅದು ತಪ್ಪು. ಈ ಸರ್ಕಾರ ಅಷ್ಟು ಕೊಟ್ಟಿಲ್ಲ. ಆದರೆ ಇದರ ಹಿಂದಿನ ಸರ್ಕಾರ ಕೊಟ್ಟಿದೆ. ಯಾರು ಕಡು ಬಡವರಿದ್ದಾರೆ, ಬಡತನದ ರೇಖೆಯ ಕೆಳಗಡೆ ಇದ್ದಾರೆ ಅವರಿಗೆ ಈ ಸರ್ಕಾರದಲ್ಲಿ ಸೈಟು ಕೊಡತಕ ಕಾರ್ಯಕ್ರಮ ಸ್ಥಗಿತವಾಗಿದೆ, ದುಡ್ಡು ಕೂಡ ಕೊಟ್ಟಿಲ್ಲ ಎಂದು ಆಪಾದನೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಾವು ಎಷ್ಟು ಟೈಂ ಕೊಡುತ್ತೀರಿ ಎಂಬುದರ ಮೇಲೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ಅಧ್ಯಕ್ಷರು ನನಗೆ ಟೈಂ ಹೆಚ್ಚು ಪ್ರೊವೈಡ್ ಮಾಡಿದರೆ ಚೆನ್ನಾಗಿರುತ್ತದೆ. ಮೊಯಿನುದ್ದೀನ್ ಸಾಹೇಬರು ಈಗ ವಸತಿ ಖಾತೆಯ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರು ದೇವರಾಜ ಅರಸರ ಜೊತೆಯಲ್ಲಿ ಆಪ್ತ ಕಾರ್ಯದರ್ಶಿ ಆಗಿ ಕೂಡ ಕೆಲಸ ಮಾಡಿದ್ದಾರೆ. ಅವರ ಜೊತೆ ಕೂಡ ಪ್ರವಾಸ ಮಾಡಿದ್ದಾರೆ. ಹುಡ್ಕೊ ಆಗಲಿ, ನಾನ್ ಹುಡ್ಕೊ ಆಗಲಿ, ಬ್ಯಾಂಕ್ ಅಸಿಸ್ಟೆನ್ಸ್ ಸ್ಕೀಂ ಆಗಲಿ, ಎಕ್ಸ್‌ಪರಿಮೆಂಟಲ್ ಲೋ ಕಾಸ್ಟ್ ಹೌಸಸ್ ಆಗಲಿ, ಟ್ರೈಬಲ್ ಹೌಸಸ್ ಆಗಲೀ ಇದೆಲ್ಲಾ ೧೯೭೩-೭೪ರಲ್ಲಿ ಪ್ರಾರಂಭ ಆದಂಥ ಸ್ಕೀಂಗಳು. ಮೊದಲು ನಾನ್-ಹುಡ್ಕೊ ಆಯಿತು. ೧೯೭೮-೭೯ರಲ್ಲಿ ಹುಡ್ಕೊ ಆಗಿ ಪರಿವರ್ತನೆ ಆಯಿತು. ಇದಕ್ಕೆ ೭ ಸಾವಿರ ರೂಪಾಯಿ ಕೊಡತಕ್ಕದ್ದು, ಸಬ್ಸಿಡಿ ಆಗಲಿ ಲೋನ್ ಆಗಲಿ ಕೊಡುವುದು ಎಂದು ಆಯಿತು. ೧೯೭೩-೭೪ ರಿಂದ ೧೯೮೩ರವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದೇವೆ ಎಂಬ ಮಾತನ್ನು ಪದೇ ಪದೇ ಹೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳೂ ಈ ಸಭೆಯಲ್ಲಿದ್ದಾರೆ ಅವರಿಗೆ ಕೂಡ ಹೇಳಬೇಕಾಗುತ್ತದೆ, ವಸತಿ ಖಾತೆ ಮಂತ್ರಿಗಳಿಗೂ ಕೂಡ ಹೇಳಬೇಕಾಗುತ್ತದೆ ಬಡವರಿಗೆ, ಹರಿಜನಗಿರಿಜನರಿಗೆ ಲಾಭ ಆಗತಕ್ಕ ಈ ಯೋಜನೆ ಬಗ್ಗೆ ಎಷ್ಟು ಕಾಳಜಿ, ಆಸಕ್ತಿ ವಹಿಸಿದ್ದೀರಿ ಎಂಬ ಮಾತನ್ನು ಕೂಡ ಹೇಳಬೇಕಾಗುತ್ತದೆ. ೧೯೭೩-೭೪ರಿಂದ ೧೯೮೩ರವರೆಗೆ ಕರ್ನಾಟಕ ರಾಜ್ಯದಲ್ಲಿ ಆಗಿನ ಸರ್ಕಾರ ಮಾಡಿದ್ದು ೪,೩೨,೧೫೪ ಮನೆಗಳು. ಅದರಲ್ಲಿ ಮುಗಿಸಿದ್ದು ೪,೨೭,೨೦೪ ಮನೆಗಳು,

೧೯೮೩-೮೪ರಿಂದ ೧೯೮೮-೮೯ರ ವರೆಗೆ ತಾವು ಹುಡ್ಕೊದಿಂದ ಕೊಟ್ಟಿರುವುದು ೨ ಲಕ್ಷ ೪೦ ಸಾವಿರದ ೭೫೫ ಅದರಲ್ಲಿ ನೀವು ಪೂರ್ತಿ ಮಾಡಿರುವುದು ೧ ಲಕ್ಷ ೪೩ ಸಾವಿರದ ೮೮ ಬ್ಯಾಂಕ್ ಆಸಿಸ್ಟೆನ್ಸ್ ಸ್ಕೀಮ್‌ನಿಂದ ಯಾರು ಹರಿಜನರು ಗಿರಿಜನರುಗಳಿಗೆ ನೀವೇ ನೇರವಾಗಿ ಬ್ಯಾಂಕಿಗೆ ಗ್ಯಾರೆಂಟಿ ಕೊಡಬೇಕಾಗಿತ್ತು ಆ ಒಂದು ಸ್ಕೀಮ್‌ನಲ್ಲಿ ಅವರಿಗೆ ಕೊಟ್ಟು ಬಿಟ್ಟಿರಿ. ಆದರೆ ಮುಂದೆ ಎಕ್ಸ್‌ಪಿರಿಮೆಂಟಲ್ ಸ್ಕೀಮ್ ಎಂದು ಏನು ಇದೆ ಅದರಲ್ಲಿ ೧ ಲಕ್ಷ ೫ ಸಾವಿರ ೭೮೩ ಸ್ಯಾಂಕ್ಷನ್ ಮಾಡಿದರೆ

ಇದರಲ್ಲಿ ಕೇವಲ ೬೫ ಸಾವಿರದ ೨ ಮನೆಗಳನ್ನು ಮಾತ್ರ ಮುಗಿಸಿದ್ದೀರಿ. ಟ್ರೈಬಲ್‌ನಲ್ಲಿ ೪,೬೦೫ ಮನೆಗಳನ್ನು ಸ್ಯಾಂಕ್ಷನ್ ಮಾಡಿದರೆ ಅದರಲ್ಲಿ ೨,೨೮೭ ಮನೆಗಳನ್ನು ತಾವು ಮುಗಿಸಿದ್ದೀರಿ. ಒಟ್ಟು ೩ ಲಕ್ಷ ೫೧ ಸಾವಿರ ೫೩ ಮನೆಗಳನ್ನು ೧೯೭೩ರಿಂದ ೧೯೮೮ರವರೆಗೆ ಸ್ಯಾಂಕ್ಷನ್ ಮಾಡಿದ್ದರೆ ಇದರಲ್ಲಿ ೨ ಲಕ್ಷ ೧೧,೧೭೭ ಮನೆಗಳನ್ನು ತಾವು ಮುಗಿಸಿದ್ದೀರಿ. ಈಗ ಏನೆಂದರೆ ೧೯೮೭-೮೮ ಮತ್ತು ೧೯೮೮-೮೯ಕ್ಕೆ ತಾವು ಮನೆಗಳನ್ನು ಕೊಟ್ಟೇ ಇಲ್ಲ. ಈ ರೀತಿಯಾಗಿ ಜನತಾ ಹೌಸಿಂಗ್‌ನಲ್ಲಿ ಎಕ್ಸ್‌ಪೆರಿಮೆಂಟಲ್‌ನಿಂದಾಗಲಿ ಮತ್ತು ಬೇರೆ ಬೇರೆ ಭಾಗ್ಯ ಮಂದಿರದಲ್ಲಿಯಾಗಲಿ ಬಡವರಿಗೆ ಮುನಿಸಿಪಾಲಿಟಿಗಳಲ್ಲಿ ಆಗಲೀ ಕಾರ್ಪೊರೇಷನ್‌ಗಳಲ್ಲಿಯಾಗಲೀ ಸಹಾಯ ಮಾಡತಕ್ಕಂಥ ಸ್ಕೀಮ್ ಏನು ಇದೆ ಅವರಲ್ಲಿ ಸರ್ಕಾರ ವಿಫಲಗೊಂಡಿದೆ. ಆದರ ಬಗ್ಗೆ ಆಸಕ್ತಿಯನ್ನು ವಹಿಸಲಿಲ್ಲ, ಹಣವನ್ನು ಕೊಡಲಿಲ್ಲ. ಈಗಲೂ ಕೂಡ ಬ್ಯಾಕ್‌ಲಾಗ್ ಏನು ಇದೆ ಅದಕ್ಕೆ ಹೆಚ್ಚಿನ ದುಡ್ಡನ್ನು ಒದಗಿಸಿ ಕೆಲಸ ಮಾಡತಕ್ಕಂಥ ಕ್ರಮ ಜರುಗಿಸಬೇಕಾಗಿದೆ. ಇವತ್ತಿನ ದಿವಸ ತಮ್ಮ ಮೂಲಕ ಮಾನ್ಯ ಗೃಹ ಖಾತೆಯ ಮಂತ್ರಿಯವರಿಗೆ ಹೇಳುತ್ತೇನೆ, ತಾವು ಅಟ್ಟರ್ಲಿ ಫೆಲ್ಯೂರ್ ಆಗಿದ್ದೀರೆಂದು. ಇವತ್ತು ಮಂಡಲ್ ಪಂಚಾಯತ್‌ಗಳು ಬಂದಿವೆ. ಕೇವಲ ಒಂದೊಂದು ಮಂಡಲ್ ಪಂಚಾಯತ್‌ಗೆ ೨೦ ಮನೆಗಳನ್ನು ಕೊಡುತ್ತಿದ್ದಾರೆಂದು ಈಗಾಗಲೇ ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದಾರೆ. ಇವರಿಂದ ಒಂದು ಮಂಡಲ್ ಪಂಚಾಯತಿಗೆ ಒಂದೊಂದು ಮನೆ ಬಂದಿದೆ. ಇವತ್ತಿನ ದಿವಸ ಡ್ರೈವ್ ಸೈಟ್ಸ್ ಏನು ಇದೆ ಅದರ ಮೂಲಕ ಜನತಾ ವಸತಿ ಮನೆಗಳನ್ನು ಕೊಡಬೇಕಾಗಿತ್ತು. ಕರ್ನಾಟಕದಲ್ಲಿ ಎಲ್ಲ ಬಡವರಿಗೂ ಮನೆಗಳನ್ನು ಕೊಡುತ್ತಾರೆಂಬ ಒಂದು ಆಶಯ ಜನರ ಮನಸ್ಸಿನಲ್ಲಿತ್ತು, ಆದರೆ ನೀವು ಸ್ಯಾರಿದೊತ್ರಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಅದಕ್ಕಿಂತಲೂ ಏಗಿಲಾಗಿ ಸೈಟ್ಸ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮವಾಗಲಿ ಮನೆಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವಾಗಲಿ ಹೆಚ್ಚಿನ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ತಂದಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈ ಅನುಕೂಲವಾದ ಕಾರ್ಯಕ್ರಮಗಳಿಗೆ ತಾವು ಹೆಚ್ಚಿನ ಆಸಕ್ತಿಯನ್ನು ವಹಿಸಲಿಲ್ಲವೆಂದು ನಾನು ನೇರವಾಗಿ ಹೇಳಬಯಸುತ್ತೇನೆ. ಈವತ್ತಿನ ದಿವಸ ತಾವು ಎಕ್ಸ್‌ಪೆರಿಮೆಂಟಲ್ ಲೋಕಾಸ್ಟ್ ಹೌಸಿಂಗ್ ಸ್ಕೀಮ್‌ನಲ್ಲಿ ಈಗಾಗಲೇ ಫಿಗರ್ಸ್‌ನ್ನು ಕೊಟ್ಟಿದ್ದೀರಿ. ಇನ್ನು ಭಾಗ್ಯಮಂದಿರ ಯೋಜನೆಯಲ್ಲಿ Distribution of house sites in urban poor ಎಂದು ಹೇಳಿ ಈ ಜನರಿಗೆ ಸೈಟ್ಸ್‌ಗಳನ್ನು ಕೊಡುವ ಕಾರ್ಯಕ್ರಮದ ಬಗ್ಗೆ ಹೇಳಿದ್ದೀರಿ. ಜನತಾ ಹೌಸಿಂಗ್ ಕಾರ್ಯಕ್ರಮದ ಬಗ್ಗೆ ಹೇಳಿದ್ದೀರಿ. ಇವತ್ತು ಮುನಸೀಪಲ್ ಏರಿಯಾದಲ್ಲಿ ೨೦ ಸಾವಿರಕ್ಕಿಂತಲೂ ಹೆಚ್ಚಿಗೆ ಜನಸಂಖ್ಯೆ ಇರತಕ್ಕಂಥ ನಗರ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ ತಾವು ಏನು ಕೆಲಸ ಮಾಡುತ್ತಿದ್ದೀರಿ ಎಂದು ಕೇಳಿದರೆ ಅರ್ಬನ್‌ದಲ್ಲಿ ಈ ಬಗ್ಗೆ ಇವತ್ತಿನವರೆಗೂ ಒಂದು ಸ್ಕೀಮ್‌ನ್ನು ಹಾಕಿಕೊಂಡಿಲ್ಲ. ೧ ಲಕ್ಷ ೪೬ ಸಾವಿರದ ೬೫೪ ಕರ್ನಾಟಕದ ಎಲ್ಲ ಕಡೆ ಐಡೆಂಟಿಫೈ ಆಗಬೇಕು. ಲಾಂಗ್‌ಬ್ಯಾಕ್ ಐಡೆಂಟಿಫೈಡ್ ಆದ ಮೇಲೆ ಯಾವ ಮುನಿಸಿಪಾಲಿಟಿಯಲ್ಲೂ ಕೂಡ ಅರ್ಬನ್ ಪೂರ್, ಸಣ್ಣ ಪಟ್ಟಣ ಪ್ರದೇಶಗಳಲ್ಲಿ ಇರುವವರಿಗೆ ಹಂಚತಕ್ಕ ವ್ಯವಸ್ಥೆಯಾಗಬೇಕು. ತಾವು ಅರ್ಥಮಂತ್ರಿಗಳಾಗಿ ಬಂದಾಗ ಗುಲ್ಬರ್ಗಾದಲ್ಲಿ ೪೧೩ ಹರಿಜನ ಗಿರಿಜನರಿಗೆ ಸೈಟ್ಸ್ ಕೊಡತಕ್ಕ ಸಂದರ್ಭದಲ್ಲಿ ಗೌವರ್ನ್‌ಮೆಂಟ್ ಸಬ್‌ಸಿಡಿ ಕೊಡುವುದಾಗಿ ಹೇಳಿದ್ದಿರಿ. ಆದರೆ ಇವತ್ತು ಎಲ್ಲಿ ಕೊಟ್ಟಿದ್ದೀರಿ ? ಆ ಸ್ಕೀಮ್ ಬಗ್ಗೆ ಏನೂ ವಿಚಾರ ಮಾಡಲಿಲ್ಲ. ಆ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸಬೇಕು ಎನ್ನುವ ಬಗ್ಗೆ ಪ್ಲಾನ್ ಮಾಡಿರುವುದನ್ನು ಕೂಡ ಇಲ್ಲಿ ತೋರಿಸಿಲ್ಲ. ಈಗ ಭಾಗ್ಯಮಂದಿರ ಎಂದು ೬ ಸಾವಿರ ಮನೆಗಳನ್ನು ಕಟ್ಟಿ ಅರ್ಬನ್ ಪೂರ್ ಮುನಿಸಿಪಲ್ ಏರಿಯಾದಲ್ಲಿ ಇರತಕ್ಕಂಥ ಜನರಿಗೆ ೧೯೭೯-೮೦ ಕೊಡಬೇಕೆಂದು ನಾವು ಆ ಒಂದು ಸ್ಕೀಮ್‌ನ್ನು ಸ್ಟಾರ್ಟ್ ಮಾಡಿದೆವು. ೧೯೮೩-೮೪ರ ಮೇರೆಗೆ ೨೬ ಸಾವಿರ ೬೫ ಮನೆಗಳು ಆವಾಗ ಸ್ಯಾಂಕ್ಷನ್ ಆಗಿತ್ತು, ಅದರಲ್ಲಿ ಆವಾಗ ೧೯೮೦ರಿಂದ ೮೩ರವರೆಗೆ ೨೪ ಸಾವಿರ ಮನೆಗಳನ್ನು ಮುಗಿಸಲಾಯಿತು. ಈಗ ತಾವು ೧೯೮೩ರಿಂದ ೮೮ರವರೆಗೆ. You have sanctioned only 9,264 house. Out of that you have completed 6 170 houses. This is your achievement.

ಇದು ನಿಮ್ಮ ಅಚೀವ್‌ಮೆಂಟ್ ಆಗಿದೆ. ಒಟ್ಟಾಗಿ ಹೇಳುವುದಾದರೆ, ಭಾಗ್ಯಮಂದಿರವಾಗಲೀ, ಎಕ್ಸ್‌ಪೆರಿಮೆಂಟಲ್ ಮನೆಗಳಾಗಲೀ, ಇನ್ನಿತರೇ ಸ್ಕೀಮುಗಳಾಗಲೀ, ಇಂತಹ ಸ್ಕೀಮುಗಳನ್ನು ದೇಶದಲ್ಲಿಯೇ ಪ್ರಥಮವಾಗಿ ಪ್ರಾರಂಭಿಸಿದ ರಾಜ್ಯ ನಮ್ಮದು. ೧೯೭೩ರಿಂದ ಪ್ರಾರಂಭವಾದ ಇದರಲ್ಲಿ ಎಲ್ಲಾ ಅಂಕಿಅಂಶಗಳನ್ನು ತೆಗೆದು ನೋಡಿದರೆ ನಮ್ಮಲ್ಲಿ ೬ ಸಾವಿರ ಮನೆಗಳನ್ನು ಕಟ್ಟಿಸಿದ್ದೀರಿ. ಮಂತ್ರಿ

ಗಳಿಗೆ ಲಕ್ಷ ಸೈಟ್‌ಗಳನ್ನು ಏನು ಕೊಟ್ಟಿದ್ದೇವೆಂದು ಹೇಳುತ್ತೀರೋ ಅದರ ಬಗ್ಗೆ ಹೇಳಬೇಕೆಂದರೆ ಇವತ್ತು ಏನೂ ಕೆಲಸ ಆಗುತ್ತಾ ಇಲ್ಲ. ಮನೆಗಳ ರಿಪೇರಿ ಕೆಲಸವೂ ಅಷ್ಟೇ ಒಂದು ಕಡೆ ಮುನಿಸಿಪಾಲಿಟಿಗಳಿಗೆ ಗ್ರಾಂಟ್ ಇಲ್ಲ. ಆಕ್ಟ್ರಾಯ್ ಹೋಗಿದೆ. ಇವತ್ತು ರಾಜ್ಯದ ಸಹಾಯದಿಂದ ಹಾಗೂ ಕೇಂದ್ರದ ಸಹಾಯದಿಂದ ಏನು ನಿರ್ಮಾಣ ಮಾಡಬೇಕಾಗಿದೆ ಅದರ ಬಗ್ಗೆ ಏನೂ ಕಾರ್ಯಕ್ರಮಗಳು ಆಗಿಲ್ಲ. From 78-80 to 1983 we have sanctioned 11,077 houses, out of which we have completed 10,954 houses. ೧೯೮೩ ರಿಂದ ೮೮ರವರೆಗೆ ೪೬೯೦ ಮನೆಗಳನ್ನು ಸ್ಯಾಂಕ್ಷನ್ ಮಾಡಿ ಕೇವಲ ೨೬೯೨ ಮನೆಗಳನ್ನು ಮುಗಿಸಿದ್ದೀರಿ. ಇವತ್ತು ಇದರ ಬಗ್ಗೆ ಎಷ್ಟು ತೀವ್ರ ಗಮನ ಕೊಡಬೇಕೋ ಅನ್ನು ಕೊಡುತ್ತಾ ಇಲ್ಲ. ಮನುಷ್ಯನಿಗೆ ಊಟ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ವಸತಿ ಕೂಡಾ ಎಂದು ಶ್ರೀ ವೆಂಕಟರಾಮಯ್ಯನವರು ಹೇಳಿದರು. ಇವತ್ತು ತಾವು ಚಾಮರಾಜ ಪೇಟೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೀರಿ. ಇವತ್ತು ಬೆಂಗಳೂರು ನಗರ ಒಂದರಲ್ಲೇ ೫.೫ ಲಕ್ಷ ಹೌಸ್‌ಲೆಸ್ ಜನರು ಇದ್ದಾರೆ. ನಗರಗಳ ಅಭಿವೃದ್ಧಿಗಾಗಿ ೨೦ ಬೋರ್ಡ್‌ಗಳು ಇವೆ. ಈ ಬಗ್ಗೆ ೧೯೮೭–೮೮ರಲ್ಲಿ ೧೦ ಲಕ್ಷ ರೂ. ನೀವು ಕೊಟ್ಟಿದ್ದರೆ ೧೯೮೮–೮೯ರಲ್ಲಿಯೂ ೧೦ ಲಕ್ಷ ರೂ. ಕೊಟ್ಟಿದ್ದೀರಿ ಇವತ್ತು ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಜಾಗಗಳಲ್ಲಿ ಎಸ್ಟಿಮೇಟ್, ಲೇಔಟ್ ಎಲ್ಲಾ ಮಾಡಬೇಕಾಗಿದೆ. ನಗರಗಳಲ್ಲೂ ಬಡಾವಣೆಗಳು ಬರಬೇಕೆನ್ನುವ ದೃಷ್ಟಿಯಿಂದ ಮಾನ್ಯ ದೇವರಾಜ ಅರಸ್ ಕಾಲದಲ್ಲಿ ನಾವು ಏನು ಯೋಜನೆ ಮಾಡಿದ್ದೆವೋ ಅದನ್ನು ಅನುಸರಿಸಿಕೊಂಡು ಹೋಗುತ್ತಿದ್ದೀರಿ ನೀವು ಈ ರೀತಿ ಹಣ ಹಂಚಿದರೆ ಒಂದು ಬೋರ್ಡ್‌ಗೆ ೫೦ ಸಾವಿರ ರೂಪಾಯಿ ಬರುತ್ತದೆ. ಇವತ್ತು ಎಷ್ಟು ಸೈಟ್‌ಗಳನ್ನು ಹಂಚುತ್ತೇವೆಂದು ಹೇಳುತ್ತಿರೋ ಅದರ ಬಗ್ಗೆ ಮತ್ತೆ ರೆವ್ಯೂ ಆಗಬೇಕಾಗಿದೆ.

ಅಧ್ಯಕ್ಷರು.—ತಾವು ೧೫ ನಿಮಿಷ ಮಾತನಾಡಿದ್ದೀರಿ. ದಯವಿಟ್ಟು ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಧರ್ಮಸಿಂಗ್.—ಹೀಗೆಂದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಎಲ್ಲರಿಗೂ ೫ ನಿಮಿಷದ ಅವಕಾಶ ಕೊಟ್ಟಿದ್ದೇನೆ. ಸ್ಪೆಷಲ್ ಕೇಸ್ ಎಂದು ಹೇಳಿ ನಿಮಗೆ ೧೫ ನಿಮಿಷ ಕೊಟ್ಟಿದ್ದೇವೆ.

ಶ್ರೀ ಧರ್ಮಸಿಂಗ್.—ಇನ್ನು ೨–೩ ಪಾಯಿಂಟ್ಸ್ ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು.—ಈಗಾಗಲೇ ೨೧೦ ನಿಮಿಷ ಚರ್ಚೆ ಆಗಿದೆ ದಯವಿಟ್ಟು ಬೇಗ ಮುಗಿಸಿ.

ಶ್ರೀ ಧರ್ಮಸಿಂಗ್.—ಇನ್ನು ನಾನು ಬೆಂಗಳೂರು ವಾಟರ್ ಸಪ್ಲೈ ಬಗ್ಗೆ ಬರುತ್ತೇನೆ. ೧೯೮೫ರಲ್ಲಿ ಲಕ್ಷ್ಮೀಸಾಗರ್ ಅವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಮಾನ್ಯ ಮುಖ್ಯ ಮಂತ್ರಿಯವರು ಕಾವೇರಿ ೩ನೇ ಹಂತದ ಯೋಜನೆಯ ಶಂಕುಸ್ಥಾಪನೆ ಮಾಡಿದರು. ಏನೆಂದರೆ ಅವರು ಬಸವನಗುಡಿ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಬೇಕಾಗಿತ್ತು ೨೪೦ ಕೋಟಿ ರೂಪಾಯಿಯ ಈ ಯೋಜನೆ ೧೯೯೧ಕ್ಕೆ ಮುಕ್ತಾಯವಾಗಬೇಕೆಂದು ಹೇಳಿದ್ದಾರೆ. ಈಗ ನಾನು ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಈಗಾಗಲೇ ನಾವು ೧೯೮೮ರಲ್ಲಿದ್ದೇವೆ. ಇನ್ನು ಕೇವಲ ೨ ವರ್ಷದಲ್ಲಿ ಈ ಯೋಜನೆ ಮುಕ್ತಾಯವಾಗಬೇಕು. ೨೪೦ ಕೋಟಿ ರೂಪಾಯಿಯ ಯೋಜನೆಗೆ ಇದುವರೆವಿಗೂ ಒದಗಿಸಿರತಕ್ಕದ್ದು ೭ ಕೋಟಿ ೬ ಲಕ್ಷ ರೂಪಾಯಿಗಳು ಮಾತ್ರ ಈ ಹಂತದಲ್ಲಿ ಕೆಲಸವಾದರೆ ಇನ್ನೂ ೫೦ ವರ್ಷಗಳಾದರೂ ಬೆಂಗಳೂರಿಗೆ ನೀರು ಸರಬರಾಜು ಆಗುವುದಿಲ್ಲ. ಬೆಂಗಳೂರಿನ ಜನಸಂಖ್ಯೆ ೨೦೦೦ನೇ ಇಸವಿ ಹೊತ್ತಿಗೆ ೭೦ ಲಕ್ಷಕ್ಕಿಂತಲೂ ಹೆಚ್ಚು ಆಗತಕ್ಕ ಅಂದಾಜು ಇದೆ. ೫೦ ಲಕ್ಷಕ್ಕೂ ಹೆಚ್ಚು ಫ್ಲೋಟಿಂಗ್ ಪಾಪ್ಯುಲೇಷನ್ ಇರತಕ್ಕ ಬೆಂಗಳೂರು ನಗರದ ನೀರು ಸರಬರಾಜು ಯೋಜನೆಯನ್ನು ಇನ್ನು ೫–೬ ವರ್ಷಗಳಲ್ಲಿ ಮುಕ್ತಾಯ ಮಾಡುವ ಸಲುವಾಗಿ ನೀವು ಯಾವ ರೀತಿಯ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ ?

ಇದಕ್ಕೆ ಬರುತ್ತಿದ್ದ ವರ್ಲ್ಡ್ ಬ್ಯಾಂಕ್‌ನ ಸಹಾಯವನ್ನು ಏತಕ್ಕೆ ಕೈಬಿಟ್ಟಿದ್ದೀರಿ ? ಕಾರ್ಪೊರೇಷನ್‌ಗೆ ಎಷ್ಟು ಹಣ ಬೇಕು ? ಇಲ್ಲಿ ಎಷ್ಟು ಹಣವಿದೆ ? ಯಾವ್ಯಾವ ಸಹಾಯ ತೆಗೆದುಕೊಂಡು ಈ ಕೆಲಸ ಪ್ರಾರಂಭ ಮಾಡಿದ್ದೀರಿ ? ಮಾನ್ಯ ಚಂದ್ರಶೇಖರ್‌ರವರು ಈಗ ನಗರಾಭಿವೃದ್ಧಿ ಖಾತೆಯನ್ನು ವಹಿಸಿಕೊಂಡಿದ್ದಾರೆ. ನಾನು ಸಹ ಈ ಖಾತೆಯ ಮಂತ್ರಿಯಾಗಿದ್ದೆ, ನಮ್ಮ ಮಾಜಿ ಅರ್ಥಸಚಿವರು ಕೂಡ

ಇಲ್ಲೇ ಇದ್ದಾರೆ. ಮೂರು ವರ್ಷಗಳಲ್ಲಿ ಕಾವೇರಿ ಸೆಕೆಂಡ್ ಸ್ಟೇಜ್ ಮುಗಿಸಬೇಕಾದರೆ already we have send mora than Rs. 34 crores. ಹುಬ್ಬಳ್ಳಿ-ಧಾರವಾಡದಲ್ಲಿ ೧೯೭೫ರಲ್ಲಿ ಶಂಕುಸ್ಥಾಪನೆಯನ್ನು ಮಾಡಿದರು ಮಾನ್ಯ ಬೊಮ್ಮಾಯಿಯವರು ಇಲ್ಲಿದ್ದಾರೆ. ಕೇವಲ ಐದಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ತರಹ ಹಣವನ್ನು ಖರ್ಚುಮಾಡಿದರೆ ಯಾವಾಗ ಯೋಜನೆಗಳನ್ನು ಕಂಪ್ಲೀಟ್ ಮಾಡುತ್ತಾರೆ ? ಶಂಕುಸ್ಥಾಪನೆ ಮಾಡಿಸಿರುತ್ತಾರೆ. ಆದರೆ ಕೆಲಸ ಆಗುವುದಿಲ್ಲ ಮಾನ್ಯ ಬೊಮ್ಮಾಯಿಯವರು ಹುಬ್ಬಳ್ಳಿಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಮತ್ತೆ ಕರೆದುಕೊಂಡು ಹೋಗಿ ಶಂಕುಸ್ಥಾಪನೆ ಮಾಡಿಸಲಿ. ಇವತ್ತು ಬೆಂಗಳೂರು ರಾಜಧಾನಿ ಇದೆ. Grohwt rate of Bangalore is 75% ಬೆಂಗಳೂರಿಗೆ ಕಾವೇರಿ ಮೂರನೇ ಹಂತ ಆದರೂ ಕೂಡ ನಾಲ್ಕನೆಯ ಹಂತದ ಯೋಜನೆಯನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ನಾವು ಇರಬೇಕಾಗುತ್ತದೆ. ಆದರೆ ೨೪೦ ಕೋಟಿ ರೂಪಾಯಿಗಳಲ್ಲಿ ೭ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದರೆ ಇವನ್ನು ಯಾವಾಗ ಮುಗಿಸುತ್ತೀರಿ ಎಂದು ಪ್ರಶ್ನೆ ಕೇಳಿದರೆ, ನಾವು ಮುಗಿಸಿಬಿಡುತ್ತೇವೆ, ನಮಗೆ ಆ ಬಗ್ಗೆ ಕಾಳಜಿ ಇದೆಯೆಂದು ಏತಕ್ಕೆ ಹೇಳಬೇಕು ? ಇದರ ಬಗ್ಗೆ ನಿಮಗೆ ಕಳಕಳಿಯಿಲ್ಲ. ನಗರಾಭಿವೃದ್ಧಿ ಮಂತ್ರಿಗಳು ಬೆಂಗಳೂರಿನಿಂದ ಆರಿಸಿ ಬಂದಿದ್ದಾರೆ. ಇದುವರೆಗೆ ನಗರಾಭಿವೃದ್ಧಿ ಮಂತ್ರಿಗಳಾಗಿದ್ದವರೂ ಕೂಡ ಇದೇ ಮಾತನ್ನು ಹೇಳುತ್ತಿದ್ದರು ನಾವು ಮೆಂಥಾಡಿಕಲಿ ಟೈಮ್‌ನಲ್ಲಿ ಮಾಡಿದ್ದೇವೆ. ಇದರ ಅರಿವು ಅವರಿಗೆ ಇದೆ. ಜನರಿಗೆ ಪದೇ ಪದೇ ಇದೇ ಸ್ಲೋಗನ್ ಅನ್ನು ಬೇರೆ ಬೇರೆ ಮ್ಯಾನುಪ್ಲೇಟ್ ಮಾಡಿ ಹೇಳತಕ್ಕದ್ದು ಸರಿಯಲ್ಲ, ಏನು ಮಾಡಬೇಕೊ ಅದನ್ನು ಮಾಡಬೇಕು. ಮ್ಯಾನುಪ್ಲೇಟ್ ಮಾಡಿ ಹೇಳತಕ್ಕದ್ದು ಸರಿಯಲ್ಲ.

ಕರ್ನಾಟಕ ನೀರು ಸರಬರಾಜು ಜಲಮಂಡಳಿಯಲ್ಲಿ ಒಂದು ಸ್ಕೀಮ್‌ನ್ನು ತೆಗೆದುಕೊಂಡಿಲ್ಲ. They have taken up spill over works. ಈ ವರ್ಷ ೬೭ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ೧೯೮೭-೮೮ರಲ್ಲಿ ಕೂಡ ೬೭ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಈ ವರ್ಷ ಕೂಡ ೧೯೮೮-೮೯ರಲ್ಲಿ ೬೭ ಕೆಲಸಗಳನ್ನು ಮುಂದುವರಿಸಿದ್ದಾರೆ. ಇದಕ್ಕಾಗಿ They require 62.70 crores. ೬೨ ಕೋಟಿ ೭೦ ಲಕ್ಷ ಬೇಕಾಗುತ್ತದೆ But they have provided Rs. 850 lakhs in the present budget. ಇದರಲ್ಲಿ ಎಸ್ಟಾಬ್ಲೀಶ್‌ಮೆಂಟ್‌ಗೆ ೧೩೭ ಲಕ್ಷ ಬೇಕು. ಈ ಬಗ್ಗೆ ಮಂಡಳಿಯ ಅಧ್ಯಕ್ಷರಾದ ಕುಸುಮಾಕರ ದೇಸಾಯಿಯವರು "To complete all these schemes we require Rs. 135 crores." ಎಂದು ಹೇಳಿದ್ದಾರೆ ೬೭ ಸ್ಪಿಲ್‌ಓವರ್ ವರ್ಕ್ಸ್ ಮುಗಿಸಬೇಕಾದರೆ ೬೦ ಕೋಟಿ ರೂಪಾಯಿ ಬೇಕಾಗುತ್ತದೆ. ೮-೧೦ ತಿಂಗಳುಗಳ ಹಿಂದೆ ನಮ್ಮಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದರು. ನಾವು ಮಾನ್ಯ ಖರ್ಗೆಯವರು ಶಾಸಕರ ಮೀಟಿಂಗ್‌ನಲ್ಲಿದ್ದೆವು. ಮಾನ್ಯ ಪ್ರಕಾಶ್‌ರವರು ಇದ್ದರು ಏನ್ರಿ ಭೀಮಾ ಯೋಜನೆಗೆ ಶಂಕುಸ್ಥಾಪನೆ ಹಾಕಿದ್ದೀರಿ, ಎಂದು ಮುಗಿಯುತ್ತದೆ. ಎಂದು ಕೇಳಿದ್ದಕ್ಕೆ ಮುಖ್ಯಮಂತ್ರಿಗಳು ಇದರಲ್ಲಿ ಏನು ಸಂಶಯವಿದೆ ಎಂದು ಕೇಳಿದರು. ನಾನು ಒಂದು ಇನ್‌ಸ್ಟೆನ್ಸ್ ಕೋಟ್ ಮಾಡುತ್ತೇನೆ, ಗದಗ್-ಬೇಟಗೇರಿಗೆ ೯೪೦ ಲಕ್ಷ, ಗುಲ್ಬರ್ಗಕ್ಕೆ ಥರ್ಡ್ ಸ್ಟೇಜ್‌ಗಾಗಿ ೧೨೮೭ ಲಕ್ಷ. ಬಳ್ಳಾರಿಗೆ ೬೪೦ ಲಕ್ಷ ಪ್ರವೈಡ್ ಮಾಡಿದ್ದಾರೆ. ಇಲ್ಲಿ ಏನಾಗಿದೆ ಅಂದರೆ ಲಾಸ್ಟ್ ಟೈಮ್‌ನಲ್ಲಿ ಗದಗ-ಬೇಟಗೇರಿಗೆ ೨೦ ಲಕ್ಷ ಪ್ರವೈಡ್ ಮಾಡಿದ್ದಾರೆ. ಗುಲ್ಬರ್ಗಕ್ಕೆ ೧೪ ಲಕ್ಷ ಖರ್ಚು ಮಾಡಿದ್ದಾರೆ. ಬಳ್ಳಾರಿಗೆ ೪೯.೪೦ ಲಕ್ಷ ಖರ್ಚು ಮಾಡಿದ್ದಾರೆ. ಏಕೆಂದರೆ ಪ್ರಕಾಶ್‌ರವರು ಇದ್ದಾರೆ, ಅವರು ಹೇಳಿದ್ದಾರೆ ಎಂದು ಅಲ್ಲಿ ಜಾಸ್ತಿ ಖರ್ಚು ಮಾಡಿದ್ದಾರೆ. ನೀವು ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ ಕುಸುಮಾಕರ ದೇಸಾಯಿಯವರು ಏನು ಹೇಳಿದ್ದಾರೆ ? ಇವರು ಭೀಮಾನದಿಯಿಂದ ನೀರು ತಂದೇ ತರುತ್ತೇವೆಂದು ಹೇಳಿದ್ದಾರೆ. ನೀರು ತರುವ ಬಗ್ಗೆ ನಾವು ಏನಾದರೂ ಹೇಳಿದರೆ, ವಿರೋಧಪಕ್ಷದವರು ವಿರೋಧ ಮಾಡುತ್ತಾರೆಂದು ಹೇಳಬಹುದು ಅದಕ್ಕೋಸ್ಕರ ನಾವು ಸುಮ್ಮನಿದ್ದೆವು. ಗದಗ-ಬೇಟಗೇರಿ ಗುಲ್ಬರ್ಗ, ಬಳ್ಳಾರಿ ನಗರಗಳಿಗೆ ನೀರು ಕೊಡಬೇಕಾದರೆ they have only made provision for three crores but actuals they have not released. ಈ ರೀತಿ ಮಾಡಿದರೆ ಬಳ್ಳಾರಿಗಾಗಲಿ, ಗದಗ-ಬೇಟಗೇರಿಗಾಗಲಿ, ಗುಲ್ಬರ್ಗಕ್ಕಾಗಲಿ ೨೦ ವರ್ಷಗಳಾದರೂ ನೀರು ತರುವುದಕ್ಕೆ ಆಗುವುದಿಲ್ಲ.

ಇವತ್ತು ೧೩ ಕೋಟಿ ರೂಪಾಯಿಗಳನ್ನು ಭೀಮಾ ಯೋಜನೆಗೆ ಇಟ್ಟಿದ್ದರೂ ಕೂಡ ನಾವು ಮಹಾರಾಷ್ಟ್ರ ಸರ್ಕಾರದ ಜೊತೆ ನೆಗೋಷಿಯೇಟ್ ಮಾಡಿಕೊಂಡಿಲ್ಲ. ಅದೇ ರೀತಿ ಕುಸುಮಾಕರ್

ದೇಸಾಯಿಯವರಿಗೂ ಹೇಳಿದೆ. ಇವತ್ತು ನಾವು ಕಾವೇರಿ ಮೊದಲನೇ ಹಂತದಿಂದ ೭೫ ಕ್ಯೂಸೆಕ್ಸ್ ನೀರನ್ನು ಡ್ರಾ ಮಾಡುತ್ತಿದ್ದೇವೆ, ೨ನೇ ಹಂತದಿಂದ ೧೦೦ ಕ್ಯೂಸೆಕ್ಸ್ ನೀರನ್ನು ಡ್ರಾ ಮಾಡುತ್ತಿದ್ದೇವೆ ೩ನೇ ಹಂತದಿಂದ ೨೦೦ ಕ್ಯೂಸೆಕ್ಸ ನೀರನ್ನು ಬೆಂಗಳೂರು ನಗರ ಡ್ರಾ ಮಾಡುತ್ತದೆ ಭೀಮಾ ನದಿಗೆ ಇಟ್ಟಿರತಕ್ಕ ೧೩ ಕೋಟಿ ರೂಪಾಯಿ ಯೋಜನೆ ಕೆಲಸ ಮುಗಿಯಬೇಕಾದರೆ ೨೦ ಕೋಟಿ ರೂಪಾಯಿ ಆಗಿರುತ್ತವೆ. ಈಗ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆಯನ್ನು ಪೂರ್ಣ ಮಾಡಿದರೆ ಇನ್ನು ೫೦ ವರ್ಷಕ್ಕೆ ಎಷ್ಟು ನೀರು ಬೇಕಾಗುತ್ತದೆಂದು ಯೋಚಿಸಬೇಕು. ಇವತ್ತು ಇದೇ ರೀತಿ ಹುಕ್ಕೇರಿ ಮತ್ತು ಸಂಕೇಶ್ವರದ್ದು ಇದೆ. ಆ ಬಗ್ಗೆ ವಿನಯಕುಮಾರ್‌ರವರು ಕೂಡ ಹೇಳಿದರು. ಎಂ.ಜಿ.ಡಿ. ಸ್ಕೀಂನಲ್ಲಿ ೭೫೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಅದರಲ್ಲಿ ೫೯ ಕೋಟಿ ರೂಪಾಯಿ ಕೂಡ ಖರ್ಚಾಗಿಲ್ಲ. ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಹರಿಜನ ಗಿರಿಜನರಿಗೆ ಕರ್ನಾಟಕ ನೀರು ಸರಬರಾಜು ಮಂಡಲಿಯಿಂದ ನೀರು ಕೊಡುವುದರ ಸಲುವಾಗಿ ೧೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಅದರಲ್ಲಿ ೨ ಲಕ್ಷ ರೂಪಾಯಿಗಳನ್ನು ಕೂಡ ಆ ಬಾಬಿಗಾಗಿ ಖರ್ಚು ಮಾಡಿಲ್ಲ. ವಾಟರ್ ಬೋರ್ಡಿನವರು ಮಾಡತಕ್ಕ ಕೆಲಸದ ವೈಖರಿ ಇದು. ಕೇಂದ್ರದ ಹಣವನ್ನು ಕೂಡ ಖರ್ಚು ಮಾಡಿಲ್ಲ, ಸೋಷಿಯಲ್ ಜಸ್ಟೀಸ್ ಕಮಿಟಿ ಸ್ಟ್ಯಾಂಡಿಂಗ್ ಕಮಿಟಿ, ಹೀಗೆ ಬೇರೆ ಬೇರೆ ತರಹದ ಕಮಿಟಿಗಳನ್ನು ಹರಿಜನಗಿರಿಜನರ ಕಲ್ಯಾಣದ ಸಲುವಾಗಿ ಮಾಡಲು ನಮ್ಮ ಕಾಲದಲ್ಲಿ ತಿದ್ದುಪಡಿ ಆಯಿತು, ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಒಟ್ಟು ಬಡ್ಜೆಟ್‌ನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಗಿರಿಜನರ ಕಲ್ಯಾಣದ ಕಾರ್ಯಕ್ರಮದ ಸಲುವಾಗಿ ಖರ್ಚು ಮಾಡಬೇಕೆಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡು ಕಳುಹಿಸಿದೆವು. ಇವತ್ತು ಬೆಂಗಳೂರು ಡಿವಿಜನ್‌ನಲ್ಲಿ ಒಂದು ಕೋಟಿ ೧೬ ಲಕ್ಷದಲ್ಲಿ ಖರ್ಚಾಗಿರತಕ್ಕದ್ದು ೧೮ ೩೯ ಲಕ್ಷ ರೂಪಾಯಿ ಮಾತ್ರ, ಉಳಿದಿರತಕ್ಕದ್ದು ೯೭.೮೩ ಲಕ್ಷ ಲಕ್ಷ ರೂಪಾಯಿಗಳು ಮೈಸೂರು ಡಿವಿಜನ್‌ನಲ್ಲಿ ೮೭.೯೯ ಲಕ್ಷ ರೂಪಾಯಿಗಳಲ್ಲ ಖರ್ಚು ಮಾಡಿರತಕ್ಕದ್ದು ೧೨.೬೭ ಲಕ್ಷ ರೂಪಾಯಿಗಳು, ಉಳಿದಿರತಕ್ಕದ್ದು ೭೫.೩೨ ಲಕ್ಷ ರೂಪಾಯಿಗಳು. ಬೆಳಗಾಂನಲ್ಲಿ ಒಂದು ಕೋಟಿ ೪೦ ಲಕ್ಷ ರೂಪಾಯಿಗಳಲ್ಲಿ ಖರ್ಚು ಮಾಡಿರತಕ್ಕದ್ದು ೨೦ ೩೩ ಲಕ್ಷ ರೂಪಾಯಿಗಳಾದರೆ ಉಳಿದಿರತಕ್ಕದ್ದು ಒಂದು ಕೋಟಿ ೧೯ ಲಕ್ಷ ೭೩ ಸಾವಿರ ರೂಪಾಯಿಗಳು. ಗುಲ್ಬರ್ಗದಲ್ಲಿ ೮೩.೧೬ ರೂಪಾಯಿಗಳನ್ನು ಇಟ್ಟಿದ್ದರೆ ೧೪.೯೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಬಾಕಿ ೬೭.೧೭ ಲಕ್ಷ ರೂಪಾಯಿ ಇದೆ. ೧೪ ಪರ್ಸೆಂಟ್ ಅಂದರೆ ಒಟ್ಟು ೪೨೭.೯೨ ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿತ್ತು. ಅದರಲ್ಲಿ ೬೬.೩೭ ಕೋಟಿ ರೂಪಾಯಿ ಮಾತ್ರ ಖರ್ಚಾಗಿ ೩೬೧ ಕೋಟಿ ರೂಪಾಯಿ ಲ್ಯಾಪ್ಸ್ ಆಗಿದೆ. ಮಂತ್ರಿಗಳಿಗೆ ಹೇಳುತ್ತಿದ್ದೇನೆ ನೀವೇನು ಕ್ಯಾರಿ ಓವರ್ ಮಾಡುತ್ತಿದ್ದೀರಿ ಅದು ಸ್ಪೆಷಲ್ ಆಗಿ ರೆಕ್ರೂಟ್‌ಮೆಂಟ್ ಮಾಡತಕ್ಕ ರೀತಿಯಲ್ಲಿ ಹಾಗೆಯೇ ಉಳಿಯಬೇಕು. ಇದನ್ನು ಕೂಡಿಸಿ ೧೮ ಪರ್ಸೆಂಟ್‌ನವರಿಗೆ ಉಪಯೋಗ ಮಾಡಬಹುದು. ಹರಿಜನ ಗಿರಿಜನರ ಬಗ್ಗೆ ಕಾರ್ಪೊರೇಷನ್‌ನಲ್ಲಿ ಮತ್ತು ಮುನಿಸಿಪಾಲಿಟಿಗಳಲ್ಲಿ ಟೋಟಲ್ ಬಡ್ಜೆಟ್‌ನಲ್ಲಿ ೧೮ ಪರ್ಸೆಂಟ್ ಅಮೌಂಟ್ ಎಂದು ಏನು ಮಾಡಿದ್ದೀರಿ ಅದರಲ್ಲಿ ೧೫ ಪರ್ಸೆಂಟ್ ಅನ್ನು ಕೂಡ ಖರ್ಚು ಮಾಡಿಲ್ಲ. ಇದರಿಂದ ಸರ್ಕಾರದ ಧೋರಣೆ ನೀತಿ ಏನಿದೆ, ಆಸಕ್ತಿ ಎಷ್ಟಿದೆ ಎಂದು ಪದೇ ಪದೇ ಏನು ಹೇಳುತ್ತೇವೆ, ಅದು ಇದರಿಂದಲೇ ವ್ಯಕ್ತವಾಗುತ್ತದೆ. ಕೊನೆಯದಾಗಿ ಒಂದು ಡಿಮ್ಯಾಂಡ್ ಇದೆ, ಅದು ಕಲೆಕ್ಷನ್ ಮತ್ತು ಬ್ಯಾಲೆನ್ಸ್. ಬೆಂಗಳೂರಿನಲ್ಲಿ ಎಲ್ಲಾ ಕಡೆಗೆ ಸಿಬ್ಬಂದಿ ಇದೆ. ಈಗ ನೀವು ಮುನಿಸಿಪಲ್ ಡೈರೆಕ್ಟರೇಟನ್ನು ಕ್ರಿಯೇಟ್ ಮಾಡಿದ್ದೀರಿ. ಅವರ ಕೆಲಸ ಏನು ? ಅಲ್ಲಿರತಕ್ಕ ಸಿಬ್ಬಂದಿ ಏನು ಮಾಡುತ್ತವೆ ? ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡಿದ್ದಾರೆಯೋ ? ಅವರು ಕಡೆ ಗಮನ ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಡಿಮಾಂಡ್ ಇದ್ದದ್ದು ೮೬ ಕೋಟಿ. ಇದು ನಿಮ್ಮ ಡಿಮಾಂಡ್. ಟೋಟಲ್ ಆಗಿ ಬೆಂಗಳೂರಾಗಲಿ, ಮೈಸೂರಾಗಲಿ, ಗುಲ್ಬರ್ಗವಾಗಲಿ, ಬೆಳಗಾಂ ಆಗಲಿ ಎಲ್ಲಾ ಕಡೆಗೆ ಇವತ್ತು ೨೨ ಕೋಟಿ ೨೫ ಲಕ್ಷ ೯೫ ಸಾವಿರ ರೂಪಾಯಿ ವಸೂಲಾಗಬೇಕಾಗಿತ್ತು. ಆದರೆ ೧೨,೮೭,೦೦೦ ವಸೂಲಾಗಿದೆ. ಬ್ಯಾಲೆನ್ಸ್ ೭ ಕೋಟಿ ೫೧ ಲಕ್ಷ ಇವತ್ತು ವಸೂಲ್ಮಾಡಬೇಕಾಗಿದೆ. ಒಂದು ಕಡೆ ಆಕ್ಟ್ರಾಯಿ ತೆಗೆದ ಮೇಲೆ ಆಕ್ಟ್ರಾಯಿ ಕಾಂಪೆನ್‌ಸೇಷನ್ ಕೊಡುತ್ತಾ ಇಲ್ಲ ನಾವು ಗುಲ್ಹಾಟಿ ಕಮೀಷನ್ ಮಾಡಿದ್ದೆವು ನೀವು ಬಂದ ಮೇಲೆ ಫೈನಾನ್ಸ್ ಬಗ್ಗೆ ಜೇಕಬ್ ಕಮಿಟಿ ಬಂತು. ಇವು ರದ್ದಾದವು. ಮತ್ತೆ ಲಕ್ಷ್ಮಣರಾವ್ ಕಮಿಟಿ ಮಾಡಿದಿರಿ ಅವರು ರಿಪೋರ್ಟ್ ಕೊಟ್ಟಿದ್ದಾರೆ, ಇದರ ಬಗ್ಗೆ ಇನ್ನೂ ಇಂಪ್ಲಿಮೆಂಟ್ ಆಗುತ್ತಾ ಇಲ್ಲ. ಒಂದು ವೇಳೆ ಇಂಪ್ಲಿಮೆಂಟ್ ಆಗಿದ್ದರೆ, ತಾವು ಇದರಲ್ಲಿ ನೋಡಬೇಕಾಗಿತ್ತು. ಒಂದುಕಡೆ ಆಕ್ಟ್ರಾಯಿ ಕಾಂಪೆನ್‌ಸೇಷನ್ ಕೂಡ ಬರುತ್ತಾ ಇಲ್ಲ. ಇವತ್ತು

ಮುನಿಸಿಪಲ್ ರಿಸೋರ್ಸ್ ಬಗ್ಗೆ ತಾವು ಏನನ್ನು ಹೇಳುತ್ತಾ ಇಲ್ಲ. ಇನ್ನು ಟ್ಯಾಕ್ಸ್‌ನ್ನು ನೇರವಾಗಿ ಸಿಬ್ಬಂದಿ ವರ್ಗದವರು ವಸೂಲ್ಮಾಡುತ್ತಾ ಇಲ್ಲ ಇದಕ್ಕೆ ಮುನಿಸಿಪಲ್ ಡೈರೆಕ್ಟೊರೇಟ್ ಏನು ಮಾಡುತ್ತಾ ಇದೆ ಎಂಬ ಶಂಕೆ ಬರುತ್ತಾ ಇದೆ. ಇದರ ಬಗ್ಗೆ ನೇರವಾಗಿ ಮೆಂಥೋಡಿಕಲ್ ಆಗಿ ರಿವ್ಯೂ ಮಾಡಬೇಕಾಗುತ್ತದೆ. ಇವತ್ತು ೧೮ ಪರ್ಸೆಂಟ್ ಹಣವಾಗಲೀ, ಯಾವುದೇ ಹಣವಾಗಲೀ ತಾವು ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ, ಸ್ಲಮ್ಸ್ ಕ್ಲಿಯರೆನ್ಸ್ ಬಗ್ಗೆ ಹೇಳಬೇಕಾಗಿದೆ. ನಾನು ಸಂಪೂರ್ಣವಾಗಿ ವಿಸ್ತರಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಅಧ್ಯಕ್ಷರೇ, ಈ ಕ್ಲಿಯರೆನ್ಸ್‌ನಲ್ಲಿ ಒಂದು ಪ್ಯಾರಾಗ್ರಾಫ್‌ನಲ್ಲಿ ಈ ರೀತಿ ಹೇಳಿದ್ದಾರೆ.

"During the year 1987-88 the Board has drawn up a massive programme under the Slum Improvement Scheme to cover a population of 66 lakhs in 95 slums with a budget provision of Rs. 1,65 crores."

ಅಂದರೆ ೧೯೮೬-೮೭ರಲ್ಲಿ ಏನು ಹೇಳಿದ್ದಾರೆ, ಅದನ್ನೇ ೧೯೮೭-೮೮ರಲ್ಲಿಯೂ ಹೇಳಿದ್ದಾರೆ.

During the year 1986-87 the Board has drawn up a massive programme under the Slum Improvement Scheme to cover a population of 66 lakhs with a provision......"
They have repeated it here......

೧೯೮೭-೮೮ರಲ್ಲಿ ತಮ್ಮ ಪ್ರಕಾರ, ೯೫ ಸ್ಲಮ್ಸ್‌ನಲ್ಲಿ ೬೬ ಲಕ್ಷ ಜನ ಇರುತ್ತಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಲಿಲ್ಲ. ಇನ್ನು ಹುಡ್ಕೋ ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ. ಮನೆಗಳನ್ನು ಬುಲ್ಡೋಜರ್ ಮೂಲಕ ಒಡೆದು, ಶ್ರೀಮಂತರಿಗೆ ಸಹಾಯ ಮಾಡಿದ್ದೀರಿ, ದೊಡ್ಡ ದೊಡ್ಡ ಜನರಿಗೆ ಸಹಾಯ ಮಾಡಿದ್ದೀರಿ. ಸ್ಲಮ್‌ನಲ್ಲಿರತಕ್ಕ ಬಡ ಜನರಿಗೆ, ಹರಿಜನ ಗಿರಿಜನರಿಗೆ ತಾವು ಏನೂ ಮಾಡಿಲ್ಲವೆಂಬ ಆಪಾದನೆ ಮಾಡುತ್ತಾ ನಾನು ಈ ವಿಚಾರದಲ್ಲಿ ಕೆಲವೊಂದು ಪಾಯಿಂಟ್‌ಔಟ್ ಏನು ಮಾಡಿದ್ದೇನೆ. ಇದನ್ನು ತಮ್ಮ ಪುಸ್ತಕದಲ್ಲಿರುವಂಥ ಅಂಕಿ ಅಂಶಗಳ ಮುಖಾಂತರವೇ ವಾಸ್ತವಾಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆಯೋ ಹೊರತು ಬೇರೆ ಏನೂ ನಾನು ಹೇಳಿಲ್ಲ. ಇವತ್ತು ಜನರು ಏನು ನಿರೀಕ್ಷಣೆ ಮಾಡುತ್ತಾರೆ, ಅದಕ್ಕನುಗುಣವಾಗಿ ಕೆಲಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಹೋಗಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.—ಮಾನ್ಯ ಗಂಗಣ್ಣನವರೇ ತಾವು ಮಾತನಾಡಿ.

† ಶ್ರೀ ಬಿ ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷರೇ, ಈಗ ಮಂಡಿಸಿರತಕ್ಕಂಥ ನಗರಾಭಿವೃದ್ಧಿ, ಕಟ್ಟಡಗಳು ಮತ್ತು ರಸ್ತೆಗಳು ಹಾಗೂ ಸೇತುವೆಗಳ ಬಗ್ಗೆ ಮಂಡಿಸಿರುವ ಅನುದಾನ ಬೇಡಿಕೆಯನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ, ಜಿಲ್ಲಾಪರಿಷತ್ತು ಹಾಗೂ ಮಂಡಲಗಳು ರಚನೆಯಾದ ಮೇಲೆ ರಸ್ತೆಗಳ ವ್ಯವಸ್ಥೆ ತುಂಬಾ ಹದಗೆಟ್ಟಿದೆ. ಈ ರಸ್ತೆಗಳ ವಿಂಗಡಣೆ ಸರಿಯಾಗಿ ಆಗದೇ, ಈ ರಸ್ತೆ ಯಾರಿಗೆ ಸೇರುತ್ತದೆ, ಈ ರಸ್ತೆ ಯಾರಿಗೆ ಸೇರುತ್ತದೆ. ಎಂಬ ಭಿನ್ನಾಭಿಪ್ರಾಯ ಇನ್ನೂ ಬಗೆಹರಿದಿಲ್ಲ. ವ್ಯವಸ್ಥಿತವಾಗಿ, ಸರಿಯಾದ ರೀತಿಯಲ್ಲಿ ರಸ್ತೆಗಳನ್ನು ವಿಂಗಡಿಸಿ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಯಾವ ಯಾವ ರಸ್ತೆಗಳು ಸೇರುತ್ತವೆ, ಜಿಲ್ಲಾಪರಿಷತ್ತಿಗೆ ಯಾವ ಯಾವ ರಸ್ತೆಗಳು ಸೇರುತ್ತವೆ ಎಂಬ ಅಂಕಿಅಂಶ ಸರಿಯಾಗಿ ಸಿಗದೇ ಇರುವುದರಿಂದ ನಾವು ಯಾರನ್ನು ಕೇಳಬೇಕೆಂಬ ಸಂದಿಗ್ಧ ಪರಿಸ್ಥಿತಿ ಉಂಟಾಗಿರುತ್ತದೆ. ಇದನ್ನು ಆದಷ್ಟು ಜಾಗ್ರತೆ ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೪-೩೦ ಪಿ.ಎಂ.

ಮತ್ತೆ ನಿವೇಶನಗಳನ್ನು ರೂಪಿಸಬೇಕಾದರೆ ಸ್ಥಳೀಯವಾಗಿ ಸರಕಾರಿ ಭೂಮಿ ಇದ್ದರೆ ಅದನ್ನು ತೆಗೆದುಕೊಂಡು ನಿವೇಶನಗಳನ್ನಾಗಿ ಪರಿವರ್ತಿಸಿ, ಅಥವಾ ರೈತರ ಹತ್ತಿರ ನಿರುಪಯುಕ್ತ ಭೂಮಿ ಇದ್ದರೆ ಅದನ್ನು ಸ್ವಾಧೀನ ಪಡಿಸಿಕೊಂಡು ಆ ಗ್ರಾಮವನ್ನು ಬಡಾವಣೆ ಮಾಡತಕ್ಕ ವ್ಯವಸ್ಥೆ ಮಾಡಿದರೆ ಈ

ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳುತ್ತೇನೆ. ನಿವೇಶನಗಳನ್ನು ದೊರಕಿಸುವುದರಲ್ಲಿ ಆಗಿರತಕ್ಕ ವಿಳಂಬ ಇದರಿಂದ ತಪ್ಪುತ್ತದೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಮನೆಗಳ ಕೊರತೆಯನ್ನು ನೀಗಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ ಎಂಬುದನ್ನು ನಾನು ಈ ಮೂಲಕ ಸರಕಾರದ ಪರವಾಗಿ ವಿರೋಧ ಪಕ್ಷದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಗರಾಭಿವೃದ್ಧಿ ಯೋಜನೆಗೆ ನಮ್ಮ ಕ್ಷೇತ್ರದ ಸ್ವಲ್ಪ ಭಾಗ ಮಾತ್ರ ಒಳಪಡುತ್ತದೆ. ತಾಲ್ಲೂಕು ಕೇಂದ್ರಗಳಾದ ಸಿರಾ ಮತ್ತು ಚಿಕ್ಕನಾಯಕನಹಳ್ಳಿ ಇಂತಹ ಪಟ್ಟಣಗಳ ಬಡಾವಣೆಯನ್ನು ಮಾಡುವಲ್ಲಿ ನಿರ್ದಿಷ್ಟವಾದ ಯಾವ ಯೋಜನೆಯೂ ಇಲ್ಲ. ಇದರಿಂದ ಅಲ್ಲಿ ಪಟ್ಟಣಗಳು ಬೆಳೆಯುತಕ್ಕಂಥ ಸ್ವರೂಪಕ್ಕೆ ಧಕ್ಕೆಯಾಗಿದೆ. ಅಲ್ಲಿ ನೀರಿನ ಸೌಕರ್ಯ ಮೊಟ್ಟಮೊದಲು ಇಲ್ಲ. ನ್ಯಾಷನಲ್ ಹೈವೇಯಲ್ಲಿ ಬರತಕ್ಕಂಥ ಸಿರಾ ಪಟ್ಟಣಕ್ಕೆ ಅನೇಕ ವರ್ಷಗಳಿಂದ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ್ಯೂ ಕೂಡಾ ಅಲ್ಲಿನ ನೀರಿನ ಕೊರತೆಯನ್ನು ಹೋಗಲಾಡಿಸುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ತುಮಕೂರು ಪಟ್ಟಣ ಎರಡನೇ ಬೆಂಗಳೂರಿನಂತೆ ಬೆಳೆಯುತ್ತಿದೆ, ಅಲ್ಲಿನ ಬಡಾವಣೆಗಳು ತೀವ್ರಗತಿಯಿಂದ ಬೆಳೆಯುತ್ತಿವೆ. ಅನೇಕ ಕೈಗಾರಿಕೆಗಳು ಅಲ್ಲಿ ಪ್ರಾರಂಭವಾಗುತ್ತಿವೆ. ಆದರೂ ಸಹ ಆ ಪಟ್ಟಣದಲ್ಲಿ ನೈರ್ಮಲ್ಯ ಮತ್ತು ಕುಡಿಯುವ ನೀರಿನ ಸರಬರಾಜು ತುಂಬಾ ಅವ್ಯವಸ್ಥಿತವಾಗಿದೆ. ಇವುಗಳ ಕಡೆಗೆ ಸರಕಾರ ಗಮನಹರಿಸಿ ಆದಷ್ಟು ಜಾಗ್ರತೆ ಸಾರ್ವಜನಿಕರಿಗೆ ಅನುಕೂಲ ಆಗತಕ್ಕಂಥ ಒಂದು ವ್ಯವಸ್ಥೆಯನ್ನು ಅಲ್ಲಿ ರೂಪಿಸಬೇಕು. ನಗರಾಭಿವೃದ್ಧಿ ಯೋಜನೆಯಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸುವ ಬಗ್ಗೆ ನಾನು ಕಳೆದ ಸಾರಿಯೂ ಕೂಡಾ ಸರಕಾರದ ಗಮನಕ್ಕೆ ಒಂದು ವಿಚಾರವನ್ನು ತಂದಿದ್ದೆ. ೫–೧೦ ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಹೋಬಳಿ ಕೇಂದ್ರಗಳಲ್ಲೂ ಕೂಡಾ ಕೊಳಚೆ ಪ್ರದೇಶಗಳನ್ನು ಗುರುತಿಸಿ ಅಲ್ಲಿನ ನಿವಾಸಿಗಳಿಗೆ ಕೂಡಾ ವಸತಿ ಸೌಕರ್ಯವನ್ನು ಉತ್ತಮರೀತಿಯಲ್ಲಿ ಒದಗಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಪ್ರಾರ್ಥಿಸುತ್ತೇನೆ. ಕಾಮಗಾರಿ ಇಲಾಖೆಯಲ್ಲಿ ಅನೇಕ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇರುವಾಗ ಅದು ಸ್ವಲ್ಪ ಮಂದಗತಿಯಲ್ಲಿ ಸಾಗುತ್ತಿದೆ ಎನಿಸುತ್ತದೆ. ಇದಕ್ಕೆ ಮೂಲ ಕಾರಣ ಏನೆಂದು ಯಾವಾಗ ಕೇಳಿದರೂ ಕೂಡಾ ಕಳೆದ ಐದು ವರ್ಷಗಳಿಂದ ಕ್ಷಾಮದ ಹೊಡೆತಕ್ಕೆ ಸಿಕ್ಕಿರುವುದೇ ಕಾರಣ ಎಂದು ಹೇಳುತ್ತಾರೆ. ಇದು ನಿಜವಾದ ಕಾರಣ ಎಂದು ನಾವೂ ಭಾವಿಸಿದ್ದೇವೆ, ಇದು ಅನಿವಾರ್ಯವಾಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದರೂ ಅತ್ಯಗತ್ಯವಾಗಿ ಆಗಬೇಕಾಗಿರತಕ್ಕಂಥ ರಸ್ತೆಗಳು, ಕಟ್ಟಡಗಳು, ಸೇತುವೆಗಳು ಮುಂತಾದ ಕಾಮಗಾರಿಗಳ ಬಗ್ಗೆ ಮಾನ್ಯ ಮಂತ್ರಿಗಳು ನಮ್ಮನ್ನು ಕರೆಸಿಕೊಂಡು ಅವುಗಳ ಬಗ್ಗೆ ತಿಳಿದುಕೊಂಡು ನಾವು ಹೇಳುವುದನ್ನಾದರೂ ಕೂಡಾ ಆದ್ಯತೆಯ ಮೇಲೆ ತೀವ್ರವಾಗಿ ಪೂರೈಸುವುದಕ್ಕೆ ಗಮನಹರಿಸಬೇಕೆಂದು ಕೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಲೋಕೋಪಯೋಗಿ ಮತ್ತು ನಗರಾಭಿವೃದ್ಧಿ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟಂತೆ. ಕೆಲವೊಂದು ಸೂಚನೆಗಳನ್ನು ಕೊಡುತ್ತೇನೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾಧಾರಣವಾಗಿ ಈ ಸರ್ಕಾರ ತನ್ನ ಜವಾಬ್ದಾರಿಯನ್ನು ಜಿಲ್ಲಾ ಪರಿಷತ್ತುಗಳ ಮೇಲೆ ಹಾಕಿದೆ. ಅವರ ಮೇಲೆ ಹಾಕಿದ ಮೇಲೆ ಜಿಲ್ಲಾ ಪರಿಷತ್ತುಗಳ ಮುಖಾಂತರ ಅಭಿವೃದ್ಧಿ ಕೆಲಸಗಳಾಗುತ್ತವೆದು, ಜಿಲ್ಲಾ ಪರಿಷತ್ತುಗಳು ಜನರ ಸಮಸ್ಯೆಗಳಿಗೆ ಹೊಂದಾಣಿಕೆಯಾಗುತ್ತವೆನ್ನುವ ಉದ್ದೇಶದಿಂದ ಬಹುತೇಕವಾಗಿ ಈ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಸುಗಮವಾಗಿ ಆಗುತ್ತವೆಂದು ಜನ ತಿಳಿದುಕೊಂಡಿದ್ದರು. ಆದರೆ ಜಿಲ್ಲಾ ಪರಿಷತ್ತುಗಳು ಅಧಿಕಾರಕ್ಕೆ ಬಂದ ಮೇಲೆ ಜನರಿಗೆ ಅನುಕೂಲಕ್ಕಿಂತ ತೊಂದರೆಗಳೇ ಜಾಸ್ತಿಯಾದವು, ಜಿಲ್ಲಾ ಪರಿಷತ್ತುಗಳು ಅಧಿಕಾರಕ್ಕೆ ಬಂದ ಮೇಲೆ ಸಾಧಾರಣವಾಗಿ ಅವುಗಳ ಹತ್ತಿರ ಹಣ ಇಲ್ಲ. ಪ್ರತಿಯೊಂದು ಭಾಗದಲ್ಲೂ ರಸ್ತೆಗಳು ಆಗಬೇಕಾಗಿದ್ದು ಆ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಹಣವಿಲ್ಲದೆ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ಜಿಲ್ಲಾ ಪರಿಷತ್ತು ಸದಸ್ಯರನ್ನು ಕೇಳಿದರೆ ಏನು ಮಾಡುವುದು ಸರ್ಕಾರದಿಂದ ನಮಗೆ ಹಣ ಬಂದಿಲ್ಲ ಅದಕ್ಕಾಗಿ ಯಾವ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಆ ಜನ ಹೇಳುತ್ತಿದ್ದಾರೆ. ಈ ಮಾತು ಪ್ರತಿಯೊಂದು ಜಿಲ್ಲಾ ಪರಿಷತ್ತಿನಲ್ಲೂ ಕೇಳಿಬರುತ್ತಿದೆ. ಇನ್ನು ಲೋಕೋಪಯೋಗಿ ಇಲಾಖೆ ಮೇಲೆ ಮಾತನಾಡುವುದಾದರೆ ಭಾರಿ ಮತ್ತು ಮಧ್ಯಮ ಯೋಜನೆಗಳಲ್ಲಿ

ಸುಮಾರು ೨೨ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಈ ೨೨ ಯೋಜನೆಗಳಲ್ಲಿ ಕೇವಲ ಒಂದೇ ಒಂದು ಕೆಲಸ ಮಾತ್ರ ಪೂರ್ಣವಾಗಿದೆ. ಅದು ತುಂಗಭದ್ರಾ ಬಲದಂಡೆ ಯೋಜನೆ. ಅದು ಬಿಟ್ಟರೆ ಉಳಿದ ಎಲ್ಲಾ ಕೆಲಸಕಾರ್ಯಗಳು ಇನ್ ಕಂಪ್ಲೀಟ್ ಆಗಿವೆ. ಆಮೇಲೆ ಮಧ್ಯಮ ಯೋಜನೆಯಲ್ಲಿ ಸುಮಾರು ೨೧ ಯೋಜನೆಗಳನ್ನು ಹಾಕಿಕೊಂಡಿದ್ದು ಅದರಲ್ಲಿ ಇಲ್ಲಿಯುವರೆವಿಗೂ ಸುಮಾರು ೩ ಯೋಜನೆಗಳನ್ನು ಮಾತ್ರ ಪೂರ್ಣಗೊಳಿಸಿ ಇನ್ನು ಉಳಿದವುಗಳೆಲ್ಲಾ ಇನ್ ಕಂಪ್ಲೀಟ್ ಆಗಿವೆ. ಈ ಯೋಜನೆಗಳನ್ನು ತೆಗೆದುಕೊಂಡು ಇಷ್ಟು ವರ್ಷಗಳಾದ ಮೇಲೂ ಪೂರ್ಣಗೊಳಿಸದೆ ಹೋದರೆ ಆ ಯೋಜನೆಗಳ ಎಸ್ಟಿಮೇಟ್ ರಿವೈಜ್ ಆಗುತ್ತದೆ. ಈಗ ಹಾಕಿಕೊಂಡಿರತಕ್ಕಂಥ ಹಳೆಯ ಯೋಜನೆಗಳನ್ನೇ ಪೂರ್ಣಗೊಳಿಸದೆ ಹೊಸ ಯೋಜನೆಗಳನ್ನು ರೂಪಿಸಿಕೊಂಡರೆ ಹೇಗೆ ? ಹೊಸ ಹೊಸ ವರ್ಷ ಬಂದಂತೆ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುತಾ ಹೋದರೆ ಯಾವ ಯೋಜನೆಗಳನ್ನು ಸಹ ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಕಿಕೊಂಡಂತಹ ಯೋಜನೆಗಳನ್ನು ಪೂರ್ಣಗೊಳಿಸಿದ ಮೇಲೆ ಹೊರ ಹೊಸ ಯೋಜನೆಗಳನ್ನು ಹಾಕಿಕೊಂಡರೆ ಆಗ ಮಾತ್ರ ಈ ರಾಜ್ಯದ ಜನತೆಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆ. ಈ ವರ್ಷವೂ ಸಹ ಸರ್ಕಾರದವರು ಕೆಲವು ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಸುಮಾರು ೧೧–೧೮ ಮಧ್ಯಮ ಮತ್ತು ಭಾರಿ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಹಳೆಯ ಯೋಜನೆಗಳನ್ನೇ ಪೂರ್ಣಗೊಳಿಸದೆ ಹೊಸ ಯೋಜನೆಗಳನ್ನು ಹಾಕಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇದರಿಂದ ಅಭಿವೃದ್ಧಿ ಕೆಲಸಕಾರ್ಯಗಳು ಆಗುವುದಿಲ್ಲ. ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗುವಂತಹ ಮತ್ತು ಅವರಿಗೆ ಸೌಲತ್ತುಗಳನ್ನು ಒದಗಿಸಿಕೊಡುವ ಸಲುವಾಗಿ ಹಣವನ್ನು ಖರ್ಚು ಮಾಡುತ್ತಾರೆ, ನಾವು ಪ್ರತಿ ವರ್ಷವೂ ಸಹ ನಮ್ಮ ಬಡ್ಜೆಟ್‌ನಲ್ಲಿ ಈ ಯೋಜನೆಗೆ ಹಣವನ್ನು ಇಟ್ಟಿರುತ್ತೇವೆ. ಈ ಹಣದಿಂದ ಹರಿಜನ ಮತ್ತು ಗಿರಿಜನರಿಗೆ ಕೆಲಸ ಕೊಡಬೇಕೆಂದು ನಿಯಮ ಇದೆ. ಆದರೆ ನಿಜವಾಗಿಯೂ ಈ ಯೋಜನೆಯಿಂದ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗಿಲ್ಲ. ಬಡ್ಜೆಟ್‌ನಲ್ಲಿ ಎಲ್ಲಾ ತಾಲ್ಲೂಕುಗಳಿಗೆ ಈ ಯೋಜನೆಯಡಿಯಲ್ಲಿ ಹಣವನ್ನು ಒದಗಿಸಿದ್ದು, ನಿಜವಾಗಿ ಹರಿಜನ ಮತ್ತು ಗಿರಿಜನರಿಗೆ ಇದರಿಂದ ಅನುಕೂಲವಾಗಿಲ್ಲ. ೧೯೮೭-೮೮ನೇ ಸಾಲಿನ ವರದಿಯಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಹಣವನ್ನು ಬಿಡುಗಡೆ ಮಾಡಿರುವುದನ್ನು ತಾವು ಇಲ್ಲಿ ಹೇಳಿದ್ದೀರಿ. ಆದರೆ ಈ ಯೋಜನೆಯಡಿಯಲ್ಲಿ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗಿಂತ ದುರುಪಯೋಗವೇ ಜಾಸ್ತಿಯಾಗಿದೆ. ಹರಿಜನರಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೆಸರಿಗೆ ಮಾತ್ರ ಹೇಳಿಕೊಳ್ಳಬೇಕಷ್ಟೇ ಆದರೆ ನಿಜವಾಗಿ ಯಾರಿಗೂ ಇದರಿಂದ ಅನುಕೂಲವಾಗಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ಸ್ವಲ್ಪ ಪಿಜಿಕಲಿಯಾಗಿ ನೋಡಿ ನಿಜವಾಗಿ ಈ ಯೋಜನೆಯಿಂದ ಯಾರಿಗೆ ಅನುಕೂಲ ಆಗಬೇಕೋ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಯೋಜನೆಯಿಂದ ಹರಿಜನರಿಗೆ ಉಪಯೋಗವಾಗಬೇಕೆನ್ನುವ ದೃಷ್ಟಿಯಿಂದ, ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡಿದರೆ ಮಾತ್ರ ಇದು ಸಾರ್ಥಕವಾದ ಯೋಜನೆಯಾಗುತ್ತದೆ.

ಇಲ್ಲದಿದ್ದರೆ ಸಾರ್ಥಕವಾಗುವುದಿಲ್ಲ, ಬರೀ ಹರಿಜನರಿಗೆ ಹೇಳುವುದಕ್ಕೋಸ್ಕರ ಈ ಸ್ಕೀಮುಗಳನ್ನು ಹಾಕಿದರೆ ಪ್ರಯೋಜನವಾಗುವುದಿಲ್ಲ. ಹರಿಜನರಿಗೆ ಅಷ್ಟು ಖರ್ಚು ಮಾಡುತ್ತಿದ್ದೇವೆ ಇಷ್ಟು ಖರ್ಚು ಮಾಡುತ್ತಿದ್ದೇವೆ ಎಂದು ಹೇಳುವುದು ಅಷ್ಟು ಸರಿಯಾದುದಲ್ಲ. ಬಜೆಟ್‌ನಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ಗೆ ಹೆಚ್ಚು ಮಹತ್ವವನ್ನು ಕೊಟ್ಟು ಹರಿಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಈಗ ನಗರಾಭಿವೃದ್ಧಿ ಕೆಲಸಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಪ್ರತಿ ಬೇಸಿಗೆ ಕಾಲದಲ್ಲೂ ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಿನ ತೊಂದರೆ ಬಹಳಷ್ಟು ಕಾಣುತ್ತದೆ. ನೀರಿನ ತೊಂದರೆ ಆದಾಗಲೆಲ್ಲಾ ಜನರು ಭೀತರಾಗಿ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಾ ನೀರಿನ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತಲೇ ಇದ್ದಾರೆ. ಈ ನೀರಿನ ತೊಂದರೆ ನಿವಾರಣೆ ಮಾಡಬೇಕೆಂದು ಜನರು ಎಲ್ಲಾ ಕಛೇರಿಗಳಿಗೂ ಸುತ್ತಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಗುಲ್ಬರ್ಗಾ ನಗರಕ್ಕೆ ಮೊದಲಿನಿಂದಲೂ ಬೋಸಾಗ ಕೆರೆಯಿಂದ ಕುಡಿಯುವ ನೀರು ಸರಬರಾಜು ಆಗುತ್ತಿತ್ತು. ಬೋಸಾಗ ಕೆರೆಯಿಂದ ಪೂರ್ಣ ಮಟ್ಟದಲ್ಲಿ ನೀರು ಸರಬರಾಜು ಆಗುವುದಿಲ್ಲವೆಂದು

ಗೊತ್ತಾದ ಮೇಲೆ ಬೆಣ್ಣೆತೊರಾ ನದಿಗೆ ಅಣೆಕಟ್ಟು ಕಟ್ಟಿ ಗುಲ್ಬರ್ಗಾಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಆಮೇಲೆ ಮಾನ್ಯ ಕುಸುಮಾಕರ್ ದೇಸಾಯಿ ಯವರು ಭೀಮಾ ನದಿಯಿಂದ ಗುಲ್ಬರ್ಗಾಕ್ಕೆ ನೀರು ತಂದರೆ ಬಹಳ ಅನುಕೂಲವಾಗುತ್ತದೆಂದು ಹೇಳಿ ಭೀಮಾ ನದಿಯಿಂದ ನೀರು ತರುವ ಬಗ್ಗೆ ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳಿದರು. ಮುಖ್ಯ ಮಂತ್ರಿಯವರೂ ಸಹ ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತ ದೆಂದು ಭರವಸೆ ಕೊಟ್ಟಿದ್ದರು. ಆದ್ದರಿಂದ ಕುಡಿಯುವ ನೀರನ್ನು ಸರ್ಕಾರದವರು ಬೆಣ್ಣೆತಪ್ಪದಿಂದಾ ದರೂ ತರಲಿ, ಭೀಮಾ ನದಿಯಿಂದಲಾದರೂ ತರಲಿ, ಎಲ್ಲಿಂದಲಾದರೂ ತರಲಿ, ಒಟ್ಟಿನಲ್ಲಿ ಗುಲ್ಬರ್ಗಾ ನಗರಕ್ಕೆ ಇರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಿ ಎಂದು ಜನತಾ ಸರ್ಕಾರದ ಮೇಲೆ ವಿಶ್ವಾಸ ಇಟ್ಟು ಆಡಳಿತ ಮಾಡಲಿಕ್ಕೆ ನಿಮ್ಮನ್ನು ಆಯ್ಕೆ ಮಾಡಿ ಜನರು ಕಳುಹಿಸಿಕೊಟ್ಟಿದ್ದಾರೆ. ಆದರೆ, ಇದುವರೆಗೆ ಜನತಾ ಸರ್ಕಾರದವರು ಭೀಮಾ ನದಿಯಿಂದ ಗುಲ್ಬರ್ಗಾಕ್ಕೆ ನೀರು ಸರಬರಾಜು ಮಾಡುವ ಕೆಲಸವನ್ನು ಮಾಡಲಿಲ್ಲ. ಸರ್ಕಾರದ ಅಧಿಕಾರಿಗಳೂ ಸಹ ಈ ಕೆಲಸದ ಬಗ್ಗೆ ಅಷ್ಟು ಗಮನ ಹರಿಸಿಲ್ಲ. ಇಡೀ ಗುಲ್ಬರ್ಗಾಕ್ಕೆ ಬೋಸಗಾ ಕೆರೆಯಿಂದಲೇ ನೀರು ಸರಬರಾಜು ಮಾಡುವುದಕ್ಕೆ ಸಾಧ್ಯವಿಲ್ಲ. ಗುಲ್ಬರ್ಗಾ ಜಿಲ್ಲೆಯ ಜನರು ಸರ್ಕಾರವನ್ನು ಈ ಬಗ್ಗೆ ಬಹಳ ಸಾರಿ ಕೇಳಿಕೊಂಡರೂ ಸಹ ಅಲ್ಲಿಯ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಗುಲ್ಬರ್ಗಾ ಜಿಲ್ಲೆಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಈ ಸದನದಲ್ಲಿ ಕೇಳಿಕೊಂಡಾಗಲೆಲ್ಲಾ ಸರ್ಕಾರ ದವರು ಬರೀ ಆಶ್ವಾಸನೆಗಳನ್ನು ಮಾತ್ರ ಕೊಡುತ್ತಲೇ ಇದ್ದಾರೆಯೇ ಹೊರತು ಗುಲ್ಬರ್ಗಾ ಜಿಲ್ಲೆಯ ಜನರಿಗೆ ನೀರನ್ನು ಕೊಡಲೇ ಇಲ್ಲ. ಭೀಮ ಯೋಜನೆ ಪೂರ್ತಿಯಾಗಬೇಕಾದರೆ ಇನ್ನೆಷ್ಟು ವರ್ಷಗಳು ಬೇಕಾಗುತ್ತದೆಯೋ ಗೊತ್ತಿಲ್ಲ. ಬೆಣ್ಣೆತೊರಾ ಯೋಜನೆಯನ್ನೂ ಸಹ ಇವರು ಮಾಡಲಿಲ್ಲ. ಬೋಸಗಾ ಕೆರೆಯಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಇದ್ದಿದ್ದರೆ ಗುಲ್ಬರ್ಗಾ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಇಷ್ಟೊಂದು ಪ್ರಮಾಣದಲ್ಲಿ ಆಗುತ್ತಿರಲಿಲ್ಲ.

ಅಧ್ಯಕ್ಷರು.— ಬೇಗ ಮುಗಿಸಿ, ಆಗಲೇ ನೋಡಿದಿರಾ ಗಂಗಣ್ಣನವರು ಎಷ್ಟು ಚೆನ್ನಾಗಿ ಮಾತ ಮಾಡಿದರು.

ಶ್ರೀ ಜಿ. ರಾಮಕೃಷ್ಣ.— ಭೀಮಾ ನದಿಯಿಂದ ಗುಲ್ಬರ್ಗಾಕ್ಕೆ ಕುಡಿಯುವ ನೀರು ಒದಗಿಸು ವುದಕ್ಕೆ ೧೨ ಕೋಟಿ ೭೬ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಇದರಲ್ಲಿ ಇದುವರೆಗೆ ಕೇವಲ ೧೪ ಲಕ್ಷ ರೂಪಾಯಿಗಳನ್ನು ಮಾತ್ರ ಈ ಕೆಲಸ ಮಾಡುವುದಕ್ಕಾಗಿ ಖರ್ಚು ಮಾಡಲಾಗಿದೆ. ಈ ಕೆಲಸವನ್ನು ತೀವ್ರಗತಿಯಲ್ಲಿ ತೆಗೆದುಕೊಂಡರೆ ಮಾತ್ರ ಗುಲ್ಬರ್ಗಾ ಜನರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಗೆ ಇಟ್ಟಿರುವ ಹಣ ಸಾಲದೇ ಬಂದರೆ ಈ ವರ್ಷದ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ನಿಗದಿ ಮಾಡಿ ಬೇಗ ಈ ಯೋಜನೆಯನ್ನು ಪೂರ್ತಿ ಮಾಡಬೇಕು. ಆಮೇಲೆ, ಗುಲ್ಬರ್ಗಾ ನಗರಕ್ಕೆ ನೀರು ಸರಬರಾಜು ಮಾಡುವ ಕೆಲಸವನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನವರು ನೋಡಿಕೊಳ್ಳುತ್ತಿದ್ದಾರೆ. ಈ ಬೋರ್ಡ್ ನವರಿಗೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಗ್ರ್ಯಾಂಟ್ಸ್ ಕೊಡುತ್ತಿಲ್ಲ. ಗ್ರ್ಯಾಂಟ್ಸ್ ಸರಿಯಾಗಿ ಕೊಡದೇ ಇದ್ದರೆ ಬೋರ್ಡ್‌ನವರು ಯಾವ ರೀತಿಯಾಗಿ ಕೆಲಸ ಮಾಡಬೇಕು ?

ಅಧ್ಯಕ್ಷರು.— ಬೇಗ ಮುಕ್ತಾಯ ಮಾಡಿ.

ಶ್ರೀ ಜಿ. ರಾಮಕೃಷ್ಣ.— ನಗರ ಕಾರ್ಪೊರೇಷನ್‌ನವರು ವಸೂಲು ಮಾಡತಕ್ಕ ಆಕ್ಟ್ರಾಯ್‌ನ್ನು ಸಹ ಸರ್ಕಾರದವರು ರದ್ದು ಮಾಡಿದ್ದಾರೆ. ಕಾರ್ಪೊರೇಷನ್‌ಗೆ ಸರ್ಕಾರದವರು ಕೊಡಬೇಕಾದ ಗ್ರ್ಯಾಂಟ್‌ನ್ನು ಸಹ ಸರಿಯಾಗಿ ಕೊಡುತ್ತಿಲ್ಲ. ಬರೀ ಟ್ಯಾಕ್ಸ್ ಕಲೆಕ್ಟ್ ಮಾಡಿಕೊಂಡು ಅದರ ಮೇಲೆ ಕಾರ್ಪೊರೇಷನ್‌ನ್ನು ನಡೆಸಬೇಕಾದ ಪರಿಸ್ಥಿತಿ ಇದೆ. ಆಮೇಲೆ ಈ ಸಂದರ್ಭದಲ್ಲಿ ಇನ್ನೊಂದು ವಿಷಯ ವನ್ನು ಹೇಳುತ್ತೇನೆ.

ಅಧ್ಯಕ್ಷರು.— ದಯವಿಟ್ಟು ಕೂಡ್ರಿ ಹೇಳುತ್ತೇನೆ.

ಶ್ರೀ ಜಿ. ರಾಮಕೃಷ್ಣ.— ಎರಡು ನಿಮಿಷ ಅವಕಾಶ ಕೊಡಿ. ಕೊಳಚೆ ಪ್ರದೇಶದ ಬಗ್ಗೆ ಮಾತ ನಾಡಬೇಕಾಗಿದೆ. ನಮ್ಮಲ್ಲಿ ಸುಮಾರು ಕೊಳಚೆ ಪ್ರದೇಶಗಳಿವೆ. ರಾಜ್ಯದಲ್ಲಿ ಬಹಳಷ್ಟು ಕೊಳಚೆಪ್ರದೇಶ ಗಳಿವೆ. ಅದಕ್ಕೆ ಯಾವರೀತಿ ವ್ಯವಸ್ಥೆ ಆಗಬೇಕೋ ಅದನ್ನು ಮಾಡಲಿಕ್ಕೆ......

ಅಧ್ಯಕ್ಷರು — ತಾವು ಮುಗಿಸುತ್ತೀರೋ ಅಥವಾ ಬೇರೆಯವರನ್ನು ಕರೆದು ನಿಮ್ಮದು ರೆಕಾರ್ಡ್ ಮಾಡಬೇಡಿ ಎಂದು ಹೇಳಲೋ ?

(ಕೆಲವು ಕಾಂಗ್ರೆಸ್ ಸದಸ್ಯರು ಅವಕಾಶ ಕೊಡಿ ಎಂದು ಹೇಳಿದರು.)

ಅಧ್ಯಕ್ಷರು. — ನಿಮಗೆ ಅವಕಾಶ ಬೇಕೋ ಬೇಡವೊ ? ಎಲ್ಲರಿಗೂ ಅವಕಾಶ ಮಾಡಿಕೊಡಬೇಕು ಎಂದು ೫೦ ದಿವಸ ಅಧಿವೇಶನ ಇಟ್ಟಿದ್ದೇವೆ. ಇಷ್ಟೆಲ್ಲಾ ಆದರೂ ಸಮಾಧಾನ ಇಲ್ಲ ಎಂದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಗುಲ್ಬರ್ಗ ಕಾರ್ಪೊರೇಟರ್ ಕೂಡ ಆಗಿರುವುದರಿಂದ ಹೇಳುತ್ತಿದ್ದಾರೆ.

ಅಧ್ಯಕ್ಷರು.— ಧರ್ಮಸಿಂಗ್ ಅವರು ಹೈ ಕ್ಲಾಸ್ ಆಗಿ ಮಾತನಾಡಿದ್ದಾರೆ. ನೀವು ಮುಕ್ತಾಯ ಮಾಡಿ.

ಶ್ರೀ ಜಿ. ರಾಮಕೃಷ್ಣ.— ಮುಕ್ತಾಯ ಮಾಡುತ್ತೇನೆ ಸ್ವಾಮಿ, ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಿದ್ದೇವೆ ಎಂದು ಬರೀ ಹೇಳಿಕೆಗಳನ್ನು ಕೊಡುತ್ತಾರೆ, ಆದರೆ ಎಲ್ಲ ಭಾಗದಲ್ಲೂ ಹಾಗೇ ಇದೆ. ಒಂದೂ ಕೆಲಸ ಆಗಿಲ್ಲ. ಕೊಳಚೆ ಪ್ರದೇಶಗಳನ್ನು ಬುಲ್ಡೋಜರ್ ಹಚ್ಚಿ ಕಿತ್ತುಹಾಕಿದರು. ಕೊಳಚೆ ನಿರ್ಮೂಲನ ಅಂದರೆ ಮನೆ ಕಟ್ಟಿಸಿ ಅನುಕೂಲ ಮಾಡಿಕೊಡುವುದು ಎಂದು ಜನರು ತಿಳಿದುಕೊಂಡಿದ್ದಾರೆ. ಆದರೆ ಈ ಸರ್ಕಾರದಲ್ಲಿ ಬುಲ್ಡೋಜರ್‌ನಿಂದ ಇದ್ದ ಜೋಪಡಿಗಳನ್ನು ಕಿತ್ತುಹಾಕಿದರೆ ಕೊಳಚೆ ನಿರ್ಮೂಲನ ಎಂಬ ಭಾವನೆ ಬೆಳೆದಿದೆ. ಕೊಳಚೆ ಪ್ರದೇಶದಲ್ಲಿರುವ ಬಡಜನರಿಗೆ ರಕ್ಷಣೆ ಕೊಟ್ಟು ನಿರ್ಮೂಲನಾ ಮಾಡಿದರೆ ಕೊಳಚೆ ನಿರ್ಮೂಲನಾ ಮಾಡಿದ್ದೇವೆ ಎಂದು ಹೇಳಿದ್ದಕ್ಕೆ ಸಾರ್ಥಕವಾಗುತ್ತದೆ ಎಂದು ಹೇಳುತ್ತೇನೆ. ಆಮೇಲೆ...

ಅಧ್ಯಕ್ಷರು.— ಕೊನೆಯದಾಗಿ ಹೇಳಿಬಿಡಿ. ಇದು ಪದ್ಧತಿ ಅಲ್ಲ. ನಾನು ಅಲೋ ಮಾಡುವುದಿಲ್ಲ. ಇನ್ನೂ ಬಹಳ ಜನ ಸದಸ್ಯರಿದ್ದಾರೆ. ಎಲ್ಲರಿಗೂ ನಾನು ಅವಕಾಶ ಕೊಡಬೇಕು.

ಶ್ರೀ ಜಿ. ರಾಮಕೃಷ್ಣ.—ನೀವು ನಡುವೆ ಡಿಸ್ಟರ್ಬ್ ಮಾಡಿದರೆ ನಾನು ಮಾತನಾಡುವುದಕ್ಕಾಗುವುದಿಲ್ಲ. ಸರ್ಕಾರ ಬಹಳಷ್ಟು ಹೇಳಿಕೆಗಳನ್ನು ಕೊಡುತ್ತಿದೆ. ಸೈಟ್ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಧರ್ಮಸಿಂಗ್ ಅವರು ಅಂಕಿ ಅಂಶಗಳನ್ನು ಆ ಬಗ್ಗೆ ಕೊಟ್ಟರು. ಈ ಸರ್ಕಾರ ಬಂದಮೇಲೆ ಕೊಟ್ಟಿದ್ದೇನು ? ಈ ಹಿಂದಿನ ಸರ್ಕಾರ ಕೊಟ್ಟಿದ್ದೇನು ಎಂಬ ಅಂಕಿಅಂಶಗಳನ್ನು ಅವರು ಸಭೆಯ ಗಮನಕ್ಕೆ ತಂದರು. ಈ ಸರ್ಕಾರ ಹಿಂದಿನದು, ಮುಂದಿನದು ಎಲ್ಲಾ ಸೇರಿಸಿ ನಾವೇ ಎಲ್ಲಾ ಮಾಡಿದ್ದೇವೆ ಎಂದು ಹೇಳುತ್ತಾರೆ. ನಾವು ಮಾಡಿದ್ದನ್ನೆಲ್ಲಾ ಅವರು ಮಾಡಿದ್ದು ಎಂದು ಹೇಳಿದಂತೆ ಕಾಣುತ್ತದೆ. ಬಡವರ ಬಗ್ಗೆ ಕಾಳಜಿ, ಕಳಕಳಿಇದ್ದರೆ ಹಾಗೂ ಪುನಃ ಪೂರ್ವಕವಾಗಿ ಕೆಲಸ ಮಾಡಬೇಕೆಂಬ ಹಂಬಲ ಇದ್ದರೆ ದಯಮಾಡಿ ಬಡವರಿಗೆ ಅದು ಸಲ್ಲತಕ್ಕ ದೃಷ್ಟಿಯಿಂದ ಕೆಲಸ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಸರ್ಕಾರ ಬಡವರ ಮೇಲೆ ವಿಶ್ವಾಸ ಇಟ್ಟಿದೆ ಎಂದು ಹೇಳಬಹುದು. ಸರ್ಕಾರ ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡಬೇಕು. ನಮ್ಮ ಭಾಗದಲ್ಲಿರತಕ್ಕ ರಸ್ತೆಗಳು ತುಂಬಾ ಹಾಳಾಗಿವೆ. ಮುಖ್ಯಮಂತ್ರಿಗಳು ಹಾಗೂ ಬೇರೆ ಮಂತ್ರಿಗಳು ನಮ್ಮ ಕಡೆ ರಸ್ತೆಗಳಲ್ಲಿ ಓಡಾಡುವಾಗ ಬಾಯಲ್ಲಿ ಹೇಳದಿದ್ದರೂ ಮನಸ್ಸಿನಲ್ಲಾದರೂ ಎಂಥ ರಸ್ತೆಗಳಿವು ಎಂದು ಅಂದುಕೊಳ್ಳುತ್ತಾರೆ. ನಮ್ಮ ಡಿಸ್ಟ್ರಿಕ್‌ನಲ್ಲಿ ಬಹಳ ವರ್ಸ್ಟ್ ಆಗಿರುವ ರೋಡ್‌ಗಳಿವೆ. ನಮ್ಮ ಜಿಲ್ಲೆ ಎಲ್ಲ ರೀತಿಯಲ್ಲಿ ನೆಗ್ಲೆಕ್ಟ್ ಮಾಡಿದಂಥ ಜಿಲ್ಲೆ. ಸ್ಪೆಷಲ್ಲಾಗಿ ಇದಕ್ಕೆ ವ್ಯವಸ್ಥೆ ಏನಾದರೂ ಮಾಡಲಿಲ್ಲ ಎಂದರೆ ಗುಲ್ಬರ್ಗ ಜಿಲ್ಲೆಯ ಎಲ್ಲ ಶಾಸಕರೂ ಸತ್ಯಾಗ್ರಹ ಹೂಡಬೇಕಾಗುತ್ತದೆ. ಇಲ್ಲದಿದ್ದರೆ ಅಜಿಟೇಷನ್ ಮಾಡಬೇಕಾಗುತ್ತದೆ. ಗುಲ್ಬರ್ಗ ಜಿಲ್ಲೆ ಎಲ್ಲ ರೀತಿಯಲ್ಲೂ ಹಿಂದುಳಿದ ಜಿಲ್ಲೆ. ಗುಲ್ಬರ್ಗ ಜಿಲ್ಲೆಯ ಶಾಸಕರು ಎಲ್ಲ ಹಂತಗಳಲ್ಲಿ ಎಲ್ಲಾ ಕಾರ್ಯಕ್ರಮಗಳಲ್ಲಿ ಈ ಮಾತನ್ನು ಹೇಳುತ್ತಿದ್ದಾರೆ. ಆದರೆ ಕೆಲಸ ಏನೂ ಆಗಿಲ್ಲ. ಬಹಳಷ್ಟು ಕಾಳಜಿ ವಹಿಸಿ ಅಲ್ಲಿ ಏನಾದರೂ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಬಿ. ಶಾಣಪ್ಪ ಹಾಜರಿಲ್ಲ. ಶ್ರೀ ಲೈಕುದ್ದೀನ ಹಾಜರಿಲ್ಲ. ಶ್ರೀ ಯು. ಭೂಪತಿ ಮಾತನಾಡಿ.

†ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಲೋಕೋಪಯೋಗಿ ಇಲಾಖೆ ನಗರಾಭಿವೃದ್ಧಿ, ವಸತಿ ಇಲಾಖೆಗಳ ಮೇಲಿನ ಬೇಡಿಕೆಗಳನ್ನು ಈ ಮನೆಯ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಪ್ರಾರಂಭದಲ್ಲಿ ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲೋಕೋಪಯೋಗಿ ಇಲಾಖೆಯನ್ನು ಪಿ. ಡಬ್ಲ್ಯು. ಡಿ. ಎಂದು ಕರೆಯುತ್ತೇವೆ ಮತ್ತು ಪೊಲಿಟಿಷಿಯನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಇನ್ನೊಂದು ಹೆಸರು ಅದಕ್ಕೆ ಇದೆ. ಹಾಗೂ ರಾಜಕಾರಣಿಗಳನ್ನು ಸಾಕತಕ್ಕಂತಹ ಇಲಾಖೆ ಇದು ಎಂಬ ಹೆಸರು ಸಹ ಇದೆ. ಮಾನ್ಯ ಬಸವಲಿಂಗಪ್ಪನವರು ಮೊನ್ನೆ ಮಾತನಾಡಿದರು ಅವರ ವಾದವೇ ಬೇರೆ. ಇಂಜಿನಿಯರ್ಸ್‌ಗಳು ಆಸ್ತಿ ಮಾಡಿದ್ದಾರೆ ಆಸ್ತಿ ಮಾಡುತ್ತಿದ್ದಾರೆ ಎಂದು ಹೇಳಿದರು. ಇಂಜಿನಿಯರ್ಸ್‌ಗಳು ಆಸ್ತಿ ಮಾಡಿದ್ದಾರೆನ್ನುವುದರ ಬಗ್ಗೆ ನನ್ನದೇನೂ ಡಿಸ್‌ಪ್ಯೂಟ್ ಇಲ್ಲ. ರಾಜಕಾರಣಿಗಳೂ ಕೂಡ ಅದರಲ್ಲಿ ಸ್ವಲ್ಪ ಭಾಗವನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ. ಸಾರಾಸಗಟಾಗಿ ಎಲ್ಲರನ್ನೂ ಸೇರಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಲೋಕಾ ರೂಢಿಯ ಮಾತನ್ನು ನಾನು ಹೇಳಿದೆ. ಇಂತಹ ಹೆಸರು ಮೊದಲಿನಿಂದ ಈ ಇಲಾಖೆಗೆ ಇದೆ. ನನ್ನ ೩ ವರ್ಷದ ಅನುಭವದಲ್ಲಿ ಈ ಇಲಾಖೆಯಲ್ಲಿ ನಾನು ಕಂಡದ್ದು ಏನು ಎಂಬುದನ್ನು ಹೇಳಲಿಚ್ಛಿಸುತ್ತೇನೆ ನಾವು ನೋಡಿದ ಹಾಗೇ ಲೋಕೋಪಯೋಗಿ ಮಂತ್ರಿಗಳಾಗಿದ್ದ ದೇವೇಗೌಡರು ಮೊದಲು ತಾರತಮ್ಯ ಮಾಡುತ್ತಾರೆಂದು ಅನ್ನಿಸುತ್ತಿರಲಿಲ್ಲ ಆದರೆ ಕೊನೆ ಕೊನೆಗೆ ಅವರು ಸಹ ತಾರತಮ್ಯವನ್ನು ತೋರಿಸಿದರು. ಇದಕ್ಕೆ ಉದಾಹರಣೆಯಾಗಿ ಆಳುವ ಪಕ್ಷದ ಶಾಸಕರ ಕ್ಷೇತ್ರಗಳ ಕೆಲಸಗಳನ್ನು ನೋಡಿ ಬೇರೆ ಪಕ್ಷಗಳ ಶಾಸಕರ ಕ್ಷೇತ್ರಗಳಲ್ಲಿ ಆಗಿರುವಂತಹ ಕೆಲಸ ಕಾರ್ಯಗಳನ್ನು ತುಲನೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಜನತಾ ಪಕ್ಷದ ಸದಸ್ಯರ ಕ್ಷೇತ್ರದಲ್ಲಿನ ರಸ್ತೆ ಕೆಲಸವಾಗಲೀ ಬ್ರಿಡ್ಜ್ ಕೆಲಸವನ್ನಾಗಲೀ ನೋಡಿದಾಗ ತಾರತಮ್ಯ ಮಾಡುತ್ತಿದ್ದಾರೆಂಬುದು ನನ್ನ ಮನಸ್ಸಿಗೆ ಬಂತು ಇಲಾಖೆಯು ಸಾರಾಸಗಟು ಅಂಕಿ ಅಂಶಗಳನ್ನು ಕೊಟ್ಟಾಗ ನಾವು ಈ ರಾಜ್ಯದಲ್ಲಿ ನೂರು ಕಿಲೋ ಮೀಟರ್ ರಸ್ತೆಗಳನ್ನು ಮಾಡಿದ್ದೇವೆಯೋ ಅಥವಾ ಇಷ್ಟು ಸಾವಿರ ಕಿಲೋ ಮೀಟರ್ ರಸ್ತೆಯನ್ನು ಮಾಡಿದ್ದೇವೆ ಎಂಬುದನ್ನು ತಾಲ್ಲೂಕುವಾರು ನೋಡಿದರೆ ಸರಕಾರದವರು ಪಕ್ಷವಾರು ತಾರತಮ್ಯವನ್ನು ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂದು ಗೊತ್ತಾಗುತ್ತದೆ. ಇದು ನಿಮ್ಮ ಮನಸ್ಸಿಗೇ ತೋಚುತ್ತದೆ. ಈ ರೀತಿ ಆಗಬಾರದು. ಜನತೆಯಿಂದ ಆರಿಸಿ ಬಂದಂತಹವರೆಲ್ಲರಿಗೂ ಕೂಡ ನಮ್ಮ ಕ್ಷೇತ್ರದಲ್ಲಿ ರಸ್ತೆ, ಬ್ರಿಡ್ಜ್ ಮಾಡಿಸಬೇಕೆಂದು ಕಾಳಜಿಯಿರುತ್ತದೆ. ಅಲ್ಲಿ ರಸ್ತೆಗಳಾದರೆ ಸಾರಿಗೆ ಸಂಪರ್ಕ ಹೆಚ್ಚುತ್ತದೆ ಇದರಿಂದಾಗಿ ಜನರ ಸಂಪರ್ಕ, ನಾಗರೀಕತೆ, ಸಂಸ್ಕೃತಿ ಶಿಕ್ಷಣ ಬೆಳೆಯುತ್ತದೆ ಎಂಬ ದೃಷ್ಟಿಯಿಂದ ನಾವು ಒತ್ತಾಯ ಮಾಡುತ್ತೇವೆ. ಈ ರೀತಿ ತಾರತಮ್ಯ ಮಾಡತಕ್ಕಂಥಾದ್ದನ್ನು ಸರಕಾರದವರು ಕೈ ಬಿಡಬೇಕು.

ಒಬ್ಬ ಮಾನ್ಯ ಸದಸ್ಯರು.—ಹಿಂದೆ ಮಾಡಿದ್ದನ್ನು ಈಗ ಬ್ಯಾಲೆನ್ಸ್ ಮಾಡುತ್ತಿದ್ದಾರೆ.

ಶ್ರೀ ಯಂ. ಭೂಪತಿ.—ತಾವು ಬಳ್ಳಾರಿಯಿಂದ ಚಳ್ಳಕೆರೆ, ಹಿರಿಯೂರು ಮೇಲೆ ಬೆಂಗಳೂರಿಗೆ ಬಂದರೆ ಒಂದನ್ನು ಗಮನಿಸಬಹುದು. ಮಧ್ಯ ದಾರಿಯಲ್ಲಿ ೮ ಬೋರ್ಡ್‌ಗಳು ಇವೆ. ಅದು ಏನೆಂದರೆ ಸೇತುವೆಗಳು ದುರಸ್ತಿಯಲ್ಲಿದೆ, ಬ್ರಿಡ್ಜಸ್ ಆರ್ ವೀಕ್ ಗೋ ಸ್ಲೋ ಎಂದು ಇದೆ. ನಾನು ಇದನ್ನು ೩ ವರ್ಷದಿಂದ ನೋಡುತ್ತಿದ್ದೇನೆ. ನಾನು ಅಲ್ಲಿ ಯಾರನ್ನೋ ಕೇಳಿದಾಗ ಅವರು ಹೇಳಿದರು. ಇದು ೫-೬ ವರ್ಷಗಳಿಂದ ಇದೆ ಎಂದು. ಈ ರೀತಿಯಾದರೆ ಪ್ರತಿ ವರ್ಷ ಬ್ರಿಡ್ಜ್‌ಗಳು ವೀಕ್ ಆಗುತ್ತಿರುತ್ತವೆ, ಇದರ ಜೊತೆಗೆ ನಮ್ಮ ಸೊಂಟ ಕೂಡ ವೀಕ್ ಆಗುತ್ತದೆ. ಇದರ ಬಗ್ಗೆ ಸರಕಾರವೇಕೆ ಗಮನಹರಿಸುವುದಿಲ್ಲ ? ಈ ಎರಡು ವರ್ಷಗಳಲ್ಲಿ ಎಷ್ಟು ಕೆಟ್ಟದಾಗಿದೆ ಎಂಬುದನ್ನು ಹೇಳಲಿಕ್ಕೇ ಸಾಧ್ಯವಿಲ್ಲ ಆರೀತಿಯಾಗಿದೆ. ಇದಕ್ಕಿಂತ ಹಿಂದಿನದನ್ನು ನಾನು ಟೀಕೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರೋಡ್ ಮೇಲೆ ಪ್ರಯಾಣ ಮಾಡುವುದನ್ನೇ ಬಿಟ್ಟು ಹೆಲಿಕ್ಯಾಪ್ಟರ್‌ನಲ್ಲಿ ಅಡ್ಡಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ರಸ್ತೆಗಳಲ್ಲಿ ಅವರು ಅಡ್ಡಾಡಿದರೆ ನಿಜವಾಗಲೂ ಅವರ ಸೊಂಟ ಉಳಿಯುವುದಿಲ್ಲ, ಆದ್ದರಿಂದ ಅದು ರಿಪೇರಿಯಾಗುವವರೆಗೂ ಕೂಡ ನೀವು ಆ ರಸ್ತೆಯ ಮೇಲೆ ಓಡಾಡಬೇಡಿ. ನಿಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಆದರೆ ರಸ್ತೆ ರಿಪೇರಿ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ಲೋಕೋಪಯೋಗೀ ಇಲಾಖೆಯಲ್ಲಿ ರಾಜಕಾರಣದ ಹಸ್ತಕ್ಷೇಪ ಜಾಸ್ತಿಯಿಂದ, ಅಲ್ಲಿ ಕಂಟ್ರಾಕ್ಟರ್ಸ್ ಕೆಲಸಮಾಡುತ್ತಾರೆ. ಅವರ ಹಲವಾರು ಬಿಲ್ಸ್‌ಗಳು ಪೆಂಡಿಂಗ್ ಇದೆ. ಅವರಿಗೆ ಕೊಡಲಿಕ್ಕೆ ಸರಕಾರದಲ್ಲಿ ಹಣವಿಲ್ಲ, ಇದಕ್ಕೆ ಸೀನಿಯಾರಿಟಿ ಎಂದು ಮಾಡಿದ್ದಾರೆ ಈ ಬಿಲ್ಸ್‌ಗಳಿಗೆ ಹಣ ಸಿಕ್ಕಬೇಕಾದರೆ

ಮಂತ್ರಿಗಳ ಮಟ್ಟದವರೆಗೂ ಶಿಫಾರಸ್ಸು ಆಗಬೇಕು. ಇಲ್ಲವಿದ್ದರೆ ಹಣ ಸಿಗುವುದಿಲ್ಲ. ಇದು ತಮಗೂ ಗೊತ್ತಿರಬಹುದು. ತಮ್ಮ ಕ್ಷೇತ್ರದ ಜನರು ಬಂದು ತಮಗೆ ಹೇಳಿರಬಹುದು. ನಮ್ಮ ಹತ್ತಿರ ಯಾರೂ ಬರುವುದಿಲ್ಲ. ಅವರು ಮಂತ್ರಿಗಳ ಹತ್ತಿರ ಹೋಗಿ ಮಾಡಿಸಿಕೊಳ್ಳುತ್ತಾರೆ ಇಲ್ಲಿ ಹಸ್ತಕ್ಷೇಪ ವಾಗತಕ್ಕಂಥಾದ್ದು ನಿಲ್ಲಬೇಕು, ಯಾರು ಕೆಲಸ ಮಾಡಿದ್ದಾರ ಅವರಿಗೆ ಸರಕಾರ ಸರಿಯಾದ ಸಮಯದಲ್ಲಿ ಹಣ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕು. ಇನ್ನು ಬ್ಯಾನ್ ಆರ್ಡರ್ ಪ್ರಾರಂಭವಾಗಿದೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದ ತಾಲ್ಲೂಕಾದ ತೋರಣಗಲ್‌ನಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಕಟ್ಟಡಕ್ಕೆ ೯ ಲಕ್ಷ ರೂಪಾಯಿಯನ್ನು ಬಡ್ಜೆಟ್‌ನಲ್ಲಿಟ್ಟಿದ್ದಾರೆ.

ಇದರಲ್ಲಿ ೩/೧ ಭಾಗದ ಗ್ರಾಂಟನ್ನು ಕೊಡುವುದಕ್ಕೆ ಮೂರು ವರ್ಷ ಫೈಟ್ ಮಾಡಬೇಕಾಯಿತು. ೩/೧ ಭಾಗದ ಗ್ರಾಂಟ್ ಕೊಟ್ಟ ಮೇಲೆ ಇನ್ನೇನು ಟೆಂಡರ್ ಕರೆದಿದ್ದಾಯಿತು, ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಶುರುಮಾಡಬೇಕು ಎನ್ನುವಷ್ಟರಲ್ಲಿ ಬ್ಯಾನ್ ಆರ್ಡರ್ ಬಂತು. It will not be implemented ಇದರಿಂದ ಕನ್‌ಸ್ಟ್ರಕ್ಷನ್ ಶುರು ಮಾಡುವ ಹಾಗೆಯೇ ಇಲ್ಲ. ಏತಕ್ಕೆ ಈ ರೀತಿ ಎಂದು ಕೇಳಿದರೆ ಗೌರ್ನಮೆಂಟ್‌ದು ಬ್ಯಾನ್ ಆರ್ಡರ್ ಸ್ವಾಮಿ ಎಂದು ಹೇಳುತ್ತಾರೆ. ಬಜೆಟ್‌ನಲ್ಲಿ ಅಲೂಕೇಷನ್ ಎಂದು ಮೂರು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ, ಬ್ಯಾನ್ ಆರ್ಡರ್ ಎಂದು ಹೇಳಿ ಇವತ್ತಿನವರೆಗೂ ಅಲ್ಲಿ ಶುರುಮಾಡಿಲ್ಲ. This is the condition. ಇದು ಬೇರೆ ಕಡೆ ಹಾಗೂ ಬಹಳಷ್ಟು ಕಡೆ ಈ ರೀತಿ ಇರಬಹುದು ಎಂದು ನಾನು ಅಂದುಕೊಂಡಿದ್ದೇನೆ. ಇದು ಏನು ಅರ್ಥ? ಒಂದು ಸಲ ಬಜೆಟ್‌ನಲ್ಲಿ ಅಲೋಕೇಷನ್ ಮಾಡಿದ ಮೇಲೆ ಕಟ್ಟಡಗಳ ನಿರ್ಮಾಣಗಳನ್ನು ಮಾಡಬೇಡಿ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಯಾವ ಅಧಿಕಾರ ಇದೆ. ಯಾವ ಆಧಾರದ ಮೇಲೆ ಈ ರೀತಿ ಮಾಡುತ್ತೀರಿ? ಒಂದು ವೇಳೆ ಹಾಗೆ ಮಾಡುವುದಿದ್ದರೆ ಒಂದು ವಾರವೋ ಎರಡು ವಾರವೋ ಮೂರು ವಾರವೋ ಹೋಗಲಿ ಒಂದು ತಿಂಗಳು ತೆಗೆದುಕೊಳ್ಳಿ, ತೊಂದರೆ ನಿಜವಾಗಲೂ ಇದ್ದರೆ ಒಪ್ಪಿಕೊಳ್ಳೋಣ ತೊಂದರೆ ಇದ್ದರೆ ಅಡ್‌ಜಸ್ಟ್ ಮಾಡಿಕೊಳ್ಳಬೇಕು. ಆದರೆ ಆರು ತಿಂಗಳು ಎಂಟು ತಿಂಗಳು ಆದರೂ ಒಂದು ವರ್ಷ ಆದರೂ ಕೂಡಾ ಕನ್‌ಸ್ಟ್ರಕ್ಷನ್ ಕೆಲಸ ಇದ್ದಲ್ಲಿಯೇ ಇರುತ್ತದೆ. ಬಜೆಟ್‌ನಲ್ಲಿ ಮಾತ್ರ ಅಲೋಕೇಷನ್ ಹಣ ಕಾಣುತ್ತಿರುತ್ತದೆ. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ಬಗ್ಗೆ ಇಲ್ಲಿ ಹೇಳದೇ ಇದ್ದರೂ ಕೂಡಾ ಕಾರ್ಮಿಕರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ, ಇವತ್ತು ಬೆಂಗಳೂರಿಗೆ ಹತ್ತು ಸಾವಿರ ಕಾರ್ಮಿಕರು ಬಂದಿದ್ದಾರೆ. ಇವತ್ತು ಅವರು ಮೆರವಣಿಗೆಯನ್ನೂ ಕೂಡಾ ಮಾಡಿದ್ದಾರೆ. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಸುಮಾರು ವರ್ಷಗಳಿಂದ ದಿನಗೂಲಿ ಕೆಲಸ ಮಾಡತಕ್ಕಂಥವರು ಸಾವಿರಾರು ಜನ ಕಾರ್ಮಿಕರು ಇದ್ದಾರೆ. ಅದರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ೧೧.೬೬೦ ಜನ ಕಾರ್ಮಿಕರು ಇದ್ದಾರೆ ಎಂದು ಇಲಾಖೆಯ ಅಂಕಿಅಂಶಗಳೇ ಹೇಳುತ್ತವೆ. ಅವರ ಬಗ್ಗೆ ಅಂದರೆ ದಿನಗೂಲಿಗಳ ಬಗ್ಗೆ ೧೯೮೫ನೇ ಇಸವಿಯಿಂದ ಇಲ್ಲಿಯವರೆಗೂ ಸುಪ್ರೀಂ ಕೋರ್ಟಿನಲ್ಲಿ ಸುಮಾರು ೩೦ ಜಡ್ಜ್‌ಮೆಂಟ್‌ಗಳು ಆಗಿ ತೀರ್ಪುಗಳು ಬಂದಿವೆ. ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಬೇಕು ಎಂದು ಹೇಳಿ ತೀರ್ಪುಗಳು ಆಗಿವೆ. ನಮ್ಮ ಕರ್ನಾಟಕ ರಾಜ್ಯದ ಸುಪ್ರೀಂ ಕೋರ್ಟ್‌ನಿಂದಲೇ ೨೪೦ಕ್ಕೂ ಹೆಚ್ಚು ದಿವಸ ಯಾರು ಕೆಲಸ ಮಾಡುತ್ತಾರೆ, ಅವರನ್ನು ಖಾಯಂ ಮಾಡಬೇಕು, ಅವರನ್ನು ರೆಗ್ಯುಲರೈಸ್ ಮಾಡಬೇಕು ಎಂದು ಹೇಳಿ ಬೆಳಗಾಂ ಜಿಲ್ಲಾ ಪಿಡಬ್ಲ್ಯುಡಿ ಯವರು ರಿಟ್ ಪಿಟಿಷನ್ ಹಾಕಿರುವ ಬಗ್ಗೆ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಇನ್ನು ನಮ್ಮ ಕರ್ನಾಟಕದ ರಾಜ್ಯದ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯೂನಲ್ ಅವರೂ ಕೂಡಾ ಈ ಬಗ್ಗೆ ತೀರ್ಪನ್ನು ಕೊಟ್ಟಿದ್ದಾರೆ. ಅವರನ್ನು ರೆಗ್ಯುಲರೈಸ್ ಮಾಡಬೇಕು ಎಂದು, ಅವರಿಗೆ ಸ್ಕೇಲನ್ನು ಫಿಕ್ಸ್ ಮಾಡಬೇಕು ಎಂದು ಹೇಳಿ ತೀರ್ಪನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರಕ್ಕೆ ಇವತ್ತಿನ ವರೆಗೂ ಒಂದು ಆಜ್ಞೆಯನ್ನೂ ಕೂಡಾ ಇಂಪ್ಲಿಮೆಂಟ್ ಮಾಡುವುದಕ್ಕಾಗಿಲ್ಲ. ಡೈಲಿ ವೇಜಸ್ ಎಂದು ಕರೆಯಿರಿ ದಿನಗೂಲಿ, ಕಂಟ್ರಾಕ್ಟ್ ಬೇಸಿಸ್ ಎಂದು ಕರೆಯಿರಿ, ಏನು ಹೆಸರು ಇಟ್ಟು ಬೇಕಾದರೂ ಕರೆಯಿರಿ, ಆದರೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು ಎನ್ನತಕ್ಕಂಥ ಕಾನ್‌ಸೆಪ್ಟನ್ನು ಸುಪ್ರೀಂಕೋರ್ಟ್ ಹೇಳಿದ ಮೇಲೂ ಅದನ್ನು ಕನ್‌ಸಿಡರ್ ಮಾಡಬೇಕು ಎನ್ನುವ ಯೋಚನೆ ಸರ್ಕಾರಕ್ಕೆ ಈವರೆಗಾದರೂ ಬರಬೇಕಾಗಿತ್ತು. ಆದರೆ ಇಲ್ಲಿಯವರೆಗೂ ಬಂದಿಲ್ಲ. ಜನವರಿ ೮೮ರಲ್ಲಿ ನಡೆದಂಥ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದು ತೀರ್ಮಾನವಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ದಿನಗೂಲಿಗಳನ್ನು ಪೂರ್ತಿಯಾಗಿ ಖಾಯಂ ಮಾಡುತ್ತೇವೆ ಎಂದು ಹೇಳಿ ಮೂಗಿಗೆ ತುಪ್ಪ ಹಚ್ಚುತ್ತಾರೆ,

ಬರೀ ವಾಸನೆ ಮಾತ್ರ ನೋಡಿಕೊಂಡಿರಬೇಕು. ತುಪ್ಪ ಮಾತ್ರ ಕೈಗೆ ಕೊಡುವುದಿಲ್ಲ, ಈ ಕೆಲಸ ದಯವಿಟ್ಟು ಬೇಡ. ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಮಾಡಿದ್ದೀ ಆದರೆ ಯಾವಾಗ ಅದನ್ನು ಕಾರ್ಯರೂಪಕ್ಕೆ ತರುತ್ತೀರಿ? ಎಂದು ಈ ಮನೆಗೆ ಹೇಳಿ. ಸರ್ಕಾರದವರು ಇದರ ಬಗ್ಗೆ ಏನು ಆಜ್ಞೆಯನ್ನು ಮಾಡಿದ್ದಾರೆ, ಆ ಆಜ್ಞೆಯ ಪ್ರತಿಯೊಂದನ್ನು ದಯವಿಟ್ಟು ಈ ಮನೆಯಲ್ಲಿ ಇಡಿ. ಇಲ್ಲದೆ ಹೋದರೆ ಏನಾಗುತ್ತದೆ ಎಂದರೆ ಅವರದು ಅನಿಶ್ಚಿತ ಬದುಕು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೆಲವು ದಿನಗಳ ಹಿಂದೆ ರೂಪಾಯಿ ಬೆಲೆಯ ಬಗ್ಗೆ ಒಂದು ಮಾತನ್ನು ಹೇಳಿದ್ದರು. ಅದು ನನಗೆ ಚೆನ್ನಾಗಿ ನೆನಪಿದೆ. ಇನ್ನು ಹತ್ತು ವರ್ಷ ಹೋದರೆ ಈ ದೇಶದಲ್ಲಿ ಒಂದು ರೂಪಾಯಿ ಬೆಲೆ ಜೀರೋ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಇವತ್ತು ನಮ್ಮ ಸರ್ಕಾರ ಈ ಒಂದು ಪಿ.ಡಬ್ಲ್ಯು.ಡಿಯಲ್ಲಿ ರಸ್ತೆ ಮೇಲಾಗಲಿ ಅಥವಾ ಕಟ್ಟಡಗಳ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಒಂದು ತಿಂಗಳಿಗೆ ಕೊಡತಕ್ಕಂಥದ್ದು ಕೇವಲ ೩೦೦ ರೂಪಾಯಿಗಳು ಇವತ್ತು ದಿನಗೂಲಿ ಎಂದು ಕೊಟ್ಟರೆ ಮೂರು ನೂರು ರೂಪಾಯಿಗಳಿಗಿಂತಲೂ ಜಾಸ್ತಿ ಸಂಬಳವನ್ನು ಅವರು ಪಡೆಯುತ್ತಾರೆ. ಕನ್‌ಸಾಲಿಡೇಟೆಡ್ ಎಂದು ಕೊಟ್ಟು ಅವರನ್ನು ಖಾಯಂ ಎಂದು ಮಾಡಿ ಅವನಿಗೆ ಮೂರು ನೂರು ರೂಪಾಯಿ ಸಂಬಳ ಕೊಟ್ಟು ಈ ರೀತಿ ಮಾಡುತ್ತಿದ್ದೀರಿ. ಅವರಿಗೆ ರೆಗ್ಯುಲರೈಸ್ ಮಾಡಿ ಸ್ಕೇಲನ್ನು ಫಿಕ್ಸ್ ಮಾಡಿ ಅವರಿಗೆ ಬೇಕಾದರೆ ಕ್ಲಾಸ್ -೪ ಸ್ಕೇಲನ್ನು ಕೊಡಿ. ಬೇರೆ ಇಲಾಖೆಯಲ್ಲಿ ಸಮಾನವಾದಂಥ ಕೆಲಸಕ್ಕೆ ಸಮಾನವಾದಂಥ ವೇತನವನ್ನು ಕೊಡುತ್ತಿದ್ದೀರಿ ಅದೇ ವೇತನವನ್ನು ಇವರಿಗೆ ಜಾರಿ ಮಾಡುತ್ತಿಲ್ಲ. ಇದಕ್ಕೆ ಕಾರಣ ಏನು ಇರಬಹುದು ಎಂದರೆ ಕಾರ್ಮಿಕರು ಸಂಘಟನೆ ಮಾಡಿಕೊಂಡು ಬಲವಾದಂಥ ಹೋರಾಟಗಳನ್ನು ಮಾಡಿದ್ದರೆ ಆಗ ಸರ್ಕಾರ ಮಣಿಯುತ್ತಿತ್ತು. ಕಾರ್ಮಿಕರ ಸಂಘಟನೆಯಲ್ಲಿ ಒಡಕು ಉಂಟಾಗಿರುವುದರಿಂದ ಅಂಥ ಸಾಧ್ಯತೆಗಳು ಆಗಿಲ್ಲ. ಇನ್ನು ಮುಂದೆ ಅಂಥ ಸಾಧ್ಯತೆಗಳು ಆಗುತ್ತದೆ. ಕಾರ್ಮಿಕರು ಸಂಘಟನೆ ಮಾಡಿಕೊಂಡು ಹೋರಾಟ ಮಾಡುವುದಿಲ್ಲ ಎಂದು ನೀವು ತಿಳಿದುಕೊಂಡರೆ ಅದು ತಪ್ಪಾಗುತ್ತದೆ. ಇವತ್ತು ಕಾರ್ಮಿಕರು ಹೋರಾಟವನ್ನು ಶುರುಮಾಡುವುದಕ್ಕೆ ತಯಾರಾಗಿದ್ದಾರೆ, ಹಿಂದೆಯೂ ಇದೇ ರೀತಿಯ ಹೋರಾಟವನ್ನು ಮಾಡಿದ್ದಾರೆ. ಆದ್ದರಿಂದ ಈ ಒಂದು ರೆಗ್ಯುಲರೈಸ್ ಬಗ್ಗೆ ಹೆಚ್ಚು ಗಂಭೀರವಾಗಿ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಹೌಸಿಂಗ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ೧೯೮೬-೮೭ ಮತ್ತು ೧೯೮೭ ೮೮ ಈ ಎರಡು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಮನೆಗಳ ಬಗ್ಗೆ ಸರ್ಕಾರಿ ಸಾಧನೆಯನ್ನು ಏನು ತೋರಿಸಿದೆ, ಅದು ಏನೇನು ಅಲ್ಲ. It is absolutely Nil. ೮೭--೮೮ರಲ್ಲಿ ಏನೂ ಕೆಲಸವೇ ಆಗಿಲ್ಲ, ಅಲ್ಲಿ ಜೀರೋ ಇದೆ. ಏನೂ ಕೂಡಾ ಕೆಲಸ ಮಾಡಿಲ್ಲ, ಹೌಸಿಂಗ್ ಮಂತ್ರಿಗಳಾದ ಮಾನ್ಯ ಮೊಹೀನುದ್ದೀನ್‌ರವರು ಕೆಲವು ದಿನಗಳ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟರು. ಜನತಾ ಮನೆಗಳ ಸಾಲವನ್ನು ಕಂಪಲ್‌ಸರಿಯಾಗಿ ವಸೂಲಿ ಮಾಡಿಯೇ ಮಾಡುತ್ತೇವೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಜನತಾ ಮನೆ ಎಂದು ಹತ್ತು ವರ್ಷಗಳ ಕೆಳಗೆ ಅವರಿಗೆ ಒಂದು ಮನೆಯನ್ನು ಕೊಟ್ಟು ಈಗ ಒಂದು ಸಾವಿರ ರೂಪಾಯಿಯೋ ಅಥವಾ ಒಂದೂವರೆ ಸಾವಿರ ಅಥವಾ ಎರಡು ಸಾವಿರ ರೂಪಾಯಿ ನೀವು ಕೊಡಬೇಕು ಎಂದು ನೀವೇನಾದರೂ ಅವರಿಗೆ ನೋಟೀಸ್ ಕೊಟ್ಟರೆ ಅವರು ಎದೆ ಒಡೆದು ಸತ್ತು ಹೋಗುತ್ತಾರೆ.

೫-೦೦ ಪಿ. ಎಂ.

ಆದಕಾರಣ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಮನೆಗಳ ಸಾಲವೆಂದು ಏನು ಪರಿಗಣನೆಗೆ ತೆಗೆದುಕೊಂಡಿದ್ದೀರಿ, ಒಂದು ಸಾವಿರ. ೮೦೦ ಒಂದೂವರೆ ಸಾವಿರ ರೂಪಾಯಿಗಳ ನೆರವನ್ನು ಸಾಲವೆಂದು ದಯವಿಟ್ಟು ಪರಿಗಣನೆ ಮಾಡಬೇಡಿ ಅದನ್ನು ಮನ್ನಾ ಮಾಡಿ, ಸರ್ಕಾರಕ್ಕೆ ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗುವುದಿಲ್ಲ ಮತ್ತೆ ಹೌಸಿಂಗ್ ಬೋರ್ಡ್ ಮನೆಗಳ ಬಗ್ಗೆ ಹೇಳುವುದಾದರೆ ಈಗ ಹೊಸದಾಗಿ ಕಳೆದ ವರ್ಷ ಒಂದು ಕಾನೂನನ್ನು ಜಾರಿಗೆ ತಂದಿದ್ದಾರೆ. ಎಂ ಐ ಜಿ. ಮನೆಗಳಿಗೆ ಯಾರು ಅರ್ಜಿಯನ್ನು ಹಾಕಿರುತ್ತಾರೆ ಸಾಮಾನ್ಯವಾಗಿ ಎಂ.ಐ.ಜಿ. ಮನೆಗಳಿಗೆ ಮಿಡಲ್ ಕ್ಲಾಸ್‌ನವರು ಪ್ರಯತ್ನ ಮಾಡುವುದು ಅಥವಾ ೧೦ ಸಾವಿರ ೫ ಸಾವಿರ ಡಿಪಾಸಿಟ್ ಕಟ್ಟಿ ಮನೆ ಅಲಾಟ್ ಆದ ಮೇಲೆ ೪ ತಿಂಗಳಿನಲ್ಲಿ ೬೦ ಸಾವಿರ ರೂಪಾಯಿಗಳನ್ನು ೪ ಕಂತುಗಳಲ್ಲಿ ಕಟ್ಟಬೇಕು, ಅಂದರೆ ಒಂದು ತಿಂಗಳಿಗೆ ೧೫ ಸಾವಿರ ರೂಪಾಯಿಗಳ ಪ್ರಕಾರ ನಾಲ್ಕು ತಿಂಗಳುಗಳಲ್ಲಿ ೬೦ ಸಾವಿರ ರೂಪಾಯಿ ಕಟ್ಟಬೇಕು. ಇದು ಯಾವ ಒಬ್ಬ ಮಧ್ಯಮ ವರ್ಗದವರಿಗೂ ಸಾಧ್ಯವಿಲ್ಲದ ಮಾತು. ಆದ್ದರಿಂದ ದಯವಿಟ್ಟು ನೀವು ೨೫ ಪರ್ಸೆಂಟ್ ಟೋಟಲ್‌ನಲ್ಲಿ

ಹಣವನ್ನು ಕಟ್ಟಿದರೆ ಅವರಿಗೆ ಮನೆ ಪೊಸೆಷನ್ ಕೊಟ್ಟರೆ ಅವರು ಬ್ಯಾಂಕ್ ಮುಖಾಂತರವೋ ಅಥವಾ ಬೇರೆ ಯಾವುದೋ ಸಂಸ್ಥೆಯಲ್ಲಿ ಪೊಸೆಷನ್ ಸರ್ಟಿಫಿಕೇಟ್ ಕೊಟ್ಟು ಸಾಲವಾಗಿ ಹಣವನ್ನು ತೆಗೆದುಕೊಂಡು ಬಂದು ಹೌಸಿಂಗ್ ಬೋರ್ಡಿಗೆ ಕಟ್ಟಿ ಮನೆಯನ್ನು ಸ್ವಂತ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಯಾವ ಮಧ್ಯಮ ವರ್ಗದವರಿಗೂ ಕೂಡ ಎಂ.ಐ.ಜಿ. ಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟು ಹೇಳಿ ಈ ಇಲಾಖೆಯ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು —ಶ್ರೀ ಸಿ. ಪಿ. ಮೂಡಲಗಿರಿಯಪ್ಪನವರು, ೫ ನಿಮಿಷದಲ್ಲಿ ಮುಗಿಸಬೇಕು, ಇನ್ನು ಐದು ಮಂದಿ ಇದ್ದಾರೆ, ಎಲ್ಲರಿಗೂ ಐದೈದು ಮಿನಟ್ ಕೊಡೋಣ ನೀವು ಮಾತನಾಡಿ.

† ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ),—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಇಲಾಖಾ ಬೇಡಿಕೆಗಳನ್ನು ವಿರೋಧಿಸುತ್ತೇನೆ ನಾನು ಇದರ ಬಗ್ಗೆ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಮೂಲಭೂತವಾಗಿ ನಾವು ಕೆಲವು ತಪ್ಪುಗಳನ್ನು ಮಾಡುತ್ತಿದ್ದೇವೆ, ಯಾಕೆಂದರೆ ಸಾರ್ವಜನಿಕರ ಜವಾಬ್ದಾರಿಯನ್ನು ಹೊತ್ತುಕೊಂಡ ನಾವುಗಳು ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ. ನಾವು ಈ ಹಿಂದೆ ಈ ಸದನದಲ್ಲಿ ಅನೇಕ ಇಲಾಖೆಗಳ ಬಜೆಟ್ ಬಗ್ಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಮಂಜೂರಾತಿಯನ್ನು ನಾವು ಕೊಡವಂತಹ ಸಂದರ್ಭದಲ್ಲಿ ಆ ಒಂದು ಇಲಾಖೆ ಕೇಳಿತ್ತು ಅದಕ್ಕೆ ಮಂಜೂರಾತಿಯನ್ನು ಕೊಟ್ಟದ್ದೇವೆ ಮಂಜೂರಾತಿಯನ್ನು ಕೊಟ್ಟ ಮೇಲೆ ಅದನ್ನು ತಪ್ಪದೇ ನಡೆಸಿಕೊಂಡು ಹೋಗತಕ್ಕದು ಅನುಷ್ಠಾನಕ್ಕೆ ತರತಕ್ಕದ್ದು ಆ ಇಲಾಖೆಯ ಕರ್ತವ್ಯ. ಯಾಕೆಂದರೆ ಈ ಸದನದಲ್ಲಿ ಮಂಜೂರಾತಿ ನೀಡಿದ ಮೇಲೆ ಅದನ್ನು ಅನುಷ್ಠಾನಕ್ಕೆ ತರದೇ ಹೋದ ಮೇಲೆ ಈ ಸದನದ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ. ಮಂಜೂರಾತಿಯನ್ನು ಕೊಟ್ಟಿರತಕ್ಕಂಥದ್ದು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡದೇ ಇದ್ದರೆ ಮತ್ತು ಒದಗಿಸಿರುವ ಆ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡದೇ ಹೋದರೆ ಈ ಸದನಕ್ಕೆ ಅಗೌರವ ತಂದ ಹಾಗೆ ಆಗುತ್ತದೆ. ಇಂದಿನ ಬಜೆಟ್ ಅನ್ನು ನೋಡಿದರೆ ಕೆಲವು ಇಲಾಖೆಗಳು ಅಲ್ಲ, ಅನೇಕ ಇಲಾಖೆಗಳಿಗೆ ಮಂಜೂರಾತಿಯನ್ನು ಕೊಟ್ಟದ್ದೇವೆ ಅದರಲ್ಲಿ ಎಷ್ಟು ಕೆಲಸಗಳು ನಡೆಯುತ್ತಿದೆ ಎಂಬುದನ್ನು ವಿಮರ್ಶೆ ಮಾಡಿ ನೋಡಿದಾಗ ನಿಜವಾಗಿ ಬಹಳ ದುಃಖವಾಗುತ್ತದೆ. ನಾವು ಮಂಜೂರಾತಿಯನ್ನು ಮಾಡಿರತಕ್ಕದ್ದು ೧೦೦ ರೂಪಾಯಿ ಆದರೆ ಖರ್ಚು ಮಾಡಿರುವುದು ಕೇವಲ ೨೫ ರೂಪಾಯಿ ಮಾತ್ರ. ಇಂತಹ ಒಂದು ಸಂದರ್ಭದಲ್ಲಿ ಈ ಸದನದಲ್ಲಿ ನಾವು ಏನು ಮಂಜೂರಾತಿಯನ್ನು ಮಾಡುತ್ತೇವೆ, ಅದನ್ನು ಚಾಚೂ ತಪ್ಪದೇ ಮುಂದೆ ನಡೆಸಿಕೊಂಡು ಹೋಗುತ್ತಾರೆ ಎನ್ನುವ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಮೂಲಭೂತವಾಗಿ ನಾವು ಮತ್ತೊಂದು ತಪ್ಪನ್ನು ಮಾಡುತ್ತಿದ್ದೇವೆ. ನಾವು ಪ್ರಮುಖವಾಗಿ ಜನಸಂಖ್ಯೆಯ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಜನಸಂಖ್ಯೆ ಸಮಸ್ಯೆ ಕೇವಲ ಒಂದು ಇಲಾಖೆಗೆ ಮಾತ್ರ ಎಫೆಕ್ಟ್ ಆಗುವುದಿಲ್ಲ. ನಮ್ಮ ಕಾರ್ಯಕ್ರಮದ ಬಗ್ಗೆ ಅದು ಹಾಗೂ ನಮ್ಮ ಯೋಜನೆ ಮೇಲೆ ಅದರ ಪರಿಣಾಮ ಸಮಗ್ರವಾಗಿ ಆಗುತ್ತದೆ. ಆದ್ದರಿಂದ ನಾವು ಯಾವುದೇ ಒಂದು ಯೋಜನೆಯನ್ನು ರೂಪಿಸಬೇಕಾದರೂ ಕೂಡ ಅಥವಾ ಒಂದು ನಗರದ ಯೋಜನೆ ಪಟ್ಟಣದ ಯೋಜನೆ ನಿರೂಪಿಸಬೇಕಾದರೂ ಕೂಡ ಅದರ ಸಮಗ್ರ ಬೆಳವಣಿಗೆಯನ್ನು ಆಧಾರವಾಗಿ ಇಟ್ಟುಕೊಂಡು ನಾವು ಯೋಜನೆಗಳನ್ನು ರೂಪಿಸಬೇಕಾಗಿದೆ. ನಾವು ಪಟ್ಟಣಗಳಲ್ಲಿ ಎರಡು ವಿಧವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಒಂದನೆಯದು ಜನಸಂಖ್ಯೆಯ ಹೆಚ್ಚಳ ಎರಡನೆಯದು ಫ್ಲೋಟಿಂಗ್ ಪಾಪ್ಯುಲೇಷನ್ ಅನ್ನು ನಾವು ತಡೆಗಟ್ಟುವಂತಹ ಯೋಚನೆ ಇಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕಾಗುತ್ತದೆ, ಇಲ್ಲದೆ ಇದ್ದರೆ ನಾವು ಯಾವುದೇ ಯೋಜನೆಯನ್ನು ಕೈಗೊಂಡರೂ ಕೂಡ ನಮ್ಮ ಯೋಜನೆ ತಲೆಕೆಳಗಾಗುವಂಥ ಪರಿಸ್ಥಿತಿ ಬರುತ್ತದೆ. ಇದನ್ನು ಮೂಲಭೂತವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಈ ಯೋಜನೆಗಳ ಅನುಸಾರವಾಗಿ ಮತ್ತು ಬರತಕ್ಕಂಥ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ, ನಾನು ಲೋಕೋಪಯೋಗಿ ಇಲಾಖೆ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಏನಿವೆ ಈ ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗಳಲ್ಲಿ ಪ್ರೈವೇಟ್ ಬಸಸ್ ಹಾಗೂ ಗವರ್ನಮೆಂಟ್ ಬಸ್‌ಗಳ ಸಂಚಾರ ಜಾಸ್ತಿಯಾಗಿದೆ. ಮತ್ತು ಇವತ್ತು ಜನಸಂಖ್ಯೆ ಜಾಸ್ತಿಯಾಗಿರುವ

ದರಿಂದ ಈ ಸಂಚಾರ ವ್ಯವಸ್ಥೆಯಲ್ಲೂ ಸಹ ಅಸ್ತವ್ಯಸ್ತವಾಗಿದೆ, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಲೋಕೋಪಯೋಗಿ ಇಲಾಖೆಗೆ ಸೇರಿರತಕ್ಕಂಥಾದ್ದಾಗಿರುವುದರಿಂದ ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ನಲ್ಲಿ ೫೦ ಪರ್ಸೆಂಟ್ ಅಸ್ಫಾಲ್ಟ್ ಆಗಿಲ್ಲ. ಇದು ನಮ್ಮ ಜಿಲ್ಲೆಯಲ್ಲೇ ಅಲ್ಲ. ಅಥವಾ ನನ್ನ ತಾಲ್ಲೂಕಿನಲ್ಲೇ ಅಲ್ಲ, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ನಲ್ಲಿ ೫೦ ಪರ್ಸೆಂಟ್ ಅಸ್ಫಾಲ್ಟ್ ಆಗಿಲ್ಲ. ಹೀಗಾಗಿ ಇವತ್ತು ಜನಗಳು ಬಹಳ ತೊಂದರೆ ಪಡುತ್ತಾ ಇದ್ದಾರೆ. ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ನಲ್ಲಿ ಅಸ್ಫಾಲ್ಟ್ ಮಾಡದೇ ಹಳ್ಳಿಹೆದ್ದಾರಿಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಎಷ್ಟರಮಟ್ಟಿಗೆ ಹಣವನ್ನು ಒದಗಿಸಬಹುದು ಎಂದು ತಾವೇ ಯೋಚನೆ ಮಾಡಬೇಕು. ಆದುದರಿಂದ ಮೇಜರ್ ಡಿಸ್ಟ್ರಿಕ್ಟ್ ರೋಡ್ಸನ್ನು ಬೇಗ ದುರಸ್ತಿ ಮಾಡಲು ಮತ್ತು ಪ್ರಯಾಣಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಅಂದರೆ ಸಿರಾದಿಂದ ಅಮರಾಪುರಕ್ಕೆ ಆಂಧ್ರಕ್ಕೆ ಹೋಗತಕ್ಕಂಥ ಮೇಜರ್ ಡಿಸ್ಟ್ರಿಕ್ಟ್ ರೋಡನ್ನು ರಿಪೇರಿಮಾಡಿ ಅಸ್ಫಾಲ್ಟ್ ಮಾಡುತ್ತೇವೆ ಎಂದು ಹಿಂದಿನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಇವತ್ತಿಗೂ ಕೂಡ ಅದರ ಕೆಲಸ ಪೂರ್ಣವಾಗಿಲ್ಲ, ಅದನ್ನು ಮಾಡುತ್ತಾರೆ ಎಂಬ ನಂಬಿಕೆಯನ್ನು ಇಟ್ಟು ಕೊಂಡಿದ್ದೇನೆ. ಮತ್ತು ಈ ಪಿ.ಡಬ್ಲ್ಯು.ಡಿ. ರೋಡ್ಸ್‌ನಲ್ಲಿ ಕೆಲವು ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯದ ರಸ್ತೆಗಳು ಪಟ್ಟಣದ ಮಧ್ಯದಲ್ಲಿ ಹಾದು ಹೋಗುತ್ತವೆ ಪಟ್ಟಣದ ಮಧ್ಯದಲ್ಲಿ ಹಾದು ಹೋಗತಕ್ಕಂಥ ಈ ರೋಡುಗಳನ್ನು ರಿಪೇರಿ ಮಾಡಲಿಕ್ಕೆ ಇವತ್ತೂ ಕೂಡ ಕಾಳಜಿ ವಹಿಸುತ್ತಿಲ್ಲ. ಕೆಲವು ಕಡೆ ಪಟ್ಟಣಗಳ ಮಧ್ಯದಲ್ಲಿ ಹಾದು ಹೋಗತಕ್ಕಂಥ ರಸ್ತೆಗಳ ಕಡೆ ಗಮನ ಕೊಡುತ್ತಾ ಇಲ್ಲ. ಇದನ್ನು ಮುನಿಸಿಪಾಲಿಟಿಯವರು ಮಾಡುವ ಹಾಗಿಲ್ಲ, ಪಿ.ಡಬ್ಲ್ಯು.ಡಿಯವರು ನಮಗೆ ಬೇರೆ ರೀತಿಯಲ್ಲಿ ಬೈಪಾಸ್ ರೋಡ್ ಕೆಲಸ ಇದೆ, ಇದನ್ನು ರಿಪೇರಿಗೆ ಏಕೆ ತೆಗೆದುಕೊಳ್ಳಬೇಕು ಎಂಬ ತಾತ್ಸಾರ ಮನೋಭಾವ ತೋರಿಸುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ, ಆಕ್ಸಿಡೆಂಟ್‌ಗಳು ಆಗುತ್ತಿವೆ.

ಪ್ರಯಾಣ ಸರಿಯಾದ ರೀತಿಯಲ್ಲಿ ಆಗುತ್ತಾ ಇಲ್ಲ. ನನ್ನ ತಾಲ್ಲೂಕಿನ ಸಿರಾಪಟ್ಟಣದಿಂದ ಮಧುರೆಗೆ ಹೋಗತಕ್ಕಂಥ ರಾಜ್ಯ ಹೆದ್ದಾರಿ ಇವತ್ತಿನವರೆಗೆ ರಿಪೇರಿಯಾಗಿಲ್ಲ. ಇದು ಪಟ್ಟಣದ ಮಧ್ಯದಲ್ಲಿ ಹಾದು ಹೋಗುತ್ತದೆ. ಜನಗಳಿಗೆ ಬಹಳ ತೊಂದರೆಯಾಗಿದೆ. ಇದನ್ನು ದುರಸ್ತಿ ಮಾಡುತ್ತೀರಿ ಎನ್ನುವ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಇವತ್ತು ರಾಷ್ಟ್ರೀಯ ಹೆದ್ದಾರಿಗೆ ಅನೇಕ ಬೈಪಾಸ್ ರಸ್ತೆಗಳನ್ನು ಮಾಡಿದ್ದೀರಿ. ಅನೇಕ ಬೈಪಾಸ್ ರಸ್ತೆಗಳನ್ನು ಮಾಡಿದರೂ ಕೂಡ ಎಲ್ಲ ಬಸ್‌ಗಳು ಬೈಪಾಸ್ ರಸ್ತೆಯಲ್ಲಿ ಹೋಗುತ್ತಾ ಇಲ್ಲ, ಪಟ್ಟಣದ ಪಕ್ಕದಲ್ಲಿ ಹೋಗುತ್ತಾ ಇರುತ್ತವೆ ಅಲ್ಲಿ ಸರಿಯಾದ ರೀತಿಯಲ್ಲಿ ಚರಂಡಿ ವ್ಯವಸ್ಥೆ ಇರುವುದಿಲ್ಲ. ನ್ಯಾಷನಲ್ ಹೈವೇ ಮಾಡಿರತಕ್ಕಂಥ ಕಡೆ ಡ್ರೈನೇಜಸ್ ಇರುವುದಿಲ್ಲ, ನನ್ನ ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ಡ್ರೈನೇಜಸ್ ಇಲ್ಲದೆ ಬಹಳ ತೊಂದರೆಯಾಗುತ್ತಾ ಇದೆ. ಮತ್ತು ವಸತಿ ಸೌಕರ್ಯದ ಬಗ್ಗೆ ಹೇಳುವುದಾದರೆ, ನಮ್ಮ ಸಿರಾ ತಾಲ್ಲೂಕಿನಲ್ಲಿ ಬೀಡಿ ಕಾರ್ಮಿಕರು ಬಹಳ ಜನ ಇದ್ದಾರೆ, ಸುಮಾರು ೫೦ಪರ್ಸೆಂಟ್‌ಗಿಂತ ಜಾಸ್ತಿ ಇದ್ದಾರೆ. ಇವತ್ತು ಅವರಿಗೆ ವಸತಿ ಸೌಕರ್ಯವಾಗಿಲ್ಲ. ಹಿಂದಿನ ಮಂತ್ರಿಗಳಿಗೆ ಕೆಲವು ಪತ್ರಗಳನ್ನೂ ಕೂಡ ಬರೆದಿದ್ದೆ ಇದರ ಬಗ್ಗೆ ಇದುವರೆಗೂ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನವರು ಸ್ಲಂ ಕ್ಲಿಯರ್ ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಕೆಲವರಿಗೆ ನಿವೇಶನ ಹೋಗಿದೆ, ಕೆಲವರಿಗೆಬಿಲ್ಡಿಂಗ್ ಹೋಗಿದೆ.ಸರಿಯಾದ ರೀತಿಯಲ್ಲಿ ರಿಹ್ಯಾಬಿಲಿಟೇಷನ್ ಮಾಡಿಲ್ಲ, ವಿದ್ಯುತ್ ದೀಪಗಳನ್ನುಹಾಕಿಲ್ಲ. ರೋಡುಗಳನ್ನು ಮಾಡಿರುವುದು ಸರಿಯಾದ ರೀತಿಯಾದ ರೀತಿಯಲ್ಲಿಲ್ಲ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಒಂದು ಸರ್ಕಾರೀ ಕಾಲೇಜು ಇದೆ. ಅಲ್ಲಿ ೨ ಸಾವಿರ ಜನ ವಿದ್ಯಾರ್ಥಿಗಳು ಇದ್ದಾರೆ. ಆ ೨ ಸಾವಿರ ವಿದ್ಯಾರ್ಥಿಗಳ ಪೈಕಿ ಸುಮಾರು ೬೦೦ ಜನ ವಿದ್ಯಾರ್ಥಿನಿಯರಿದ್ದಾರೆ, ಅವರಿಗೆ ಪ್ರತ್ಯೇಕವಾದ ಉತ್ತಮ ಕಟ್ಟಡ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು ನನ್ನ ತಾಲ್ಲೂಕಿಗೆ ಬಂದಿದ್ದಾಗ ನಾವು ಅವರಲ್ಲಿ ಮನವಿ ಮಾಡಿಕೊಂಡಿದ್ದೆವು. ಸಾರ್ವಜನಿಕರಿಂದ ವಸೂಲಾದ ೫ ಲಕ್ಷ ರೂಪಾಯಿ ಹಣ ನಮ್ಮಲ್ಲಿದೆ, ಅದರ ಜೊತೆಗೆ ಸರ್ಕಾರದವರೂ ಕೂಡ ಇನ್ನಷ್ಟು ಹಣವನ್ನು ಕೂಡಿಸಿ ಈ ಎಲ್ಲ ಹಣವನ್ನೂ ಉಪಯೋಗ ಮಾಡಿಕೊಂಡು ನಮಗೆ ಉತ್ತಮವಾದ ಕಾಲೇಜು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಂಡಿದ್ದೆವು. ಅದಕ್ಕೆ ಮುಖ್ಯ ಮಂತ್ರಿಗಳೂ ಕೂಡ ಒಂದು ಭರವಸೆಯನ್ನು ಕೊಟ್ಟಿದ್ದರು. ಅವರು ಭರವಸೆಯನ್ನು ಕೊಟ್ಟು ೨ ವರ್ಷವಾಯಿತು. ೨ ವರ್ಷವಾದರೂ

ಅವರ ಭರವಸೆ ಇನ್ನೂ ಭರವಸೆಯಾಗಿಯೇ ಉಳಿದಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಸ್ಥಳಾವಕಾಶವಿಲ್ಲದೆ ಬಹಳ ತೊಂದರೆಯಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ ವಿದ್ಯೆಯ ಗುಣಮಟ್ಟವೂ ಕೂಡ ಕೆಳವ ಟ್ಟಕ್ಕೆ ಹೋಗುತ್ತಿದೆ. ಆದ್ದರಿಂದ ಆದಷ್ಟುಬೇಗ ನಮ್ಮಲ್ಲಿರತಕ್ಕ ಹಣದ ಜೊತೆಗೆ ಸರ್ಕಾರದವರೂ ಇನ್ನಷ್ಟು ಹಣವನ್ನು ಹಾಕಿ ಉತ್ತಮ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಆಕ್ಟ್ರಾಯ್‌ನ ಬಗ್ಗೆ ಕಾಂಪನ್‌ಸೇಷನ್‌ನ್ನು ಕಳೆದ ೬ ತಿಂಗಳುಗಳಿಂದಲೂ ಮುನಿಸಿಪಾಲಿಟಿಗಳವರಿಗೆ ಕೊಟ್ಟಿಲ್ಲ. ನೀವು ಇದನ್ನು ಕೊಟ್ಟಿಲ್ಲ ಎಂದರೆ ಅವರು ತಮ್ಮ ಸಿಬ್ಬಂದಿಗೆ ಹೇಗೆ ಸಂಬಳಸಾರಿಗೆಗಳನ್ನು ಕೊಡಬೇಕು ? ಅಭಿವೃದ್ಧಿ ಕಾರ್ಯಗಳನ್ನು ಅವರು ಯಾವರೀತಿ ಮಾಡಬೇಕು ? ಜನರಿಗೆ ಸೌಲಭ್ಯಗಳನ್ನು ಯಾವರೀತಿ ಒದಗಿಸಬೇಕೆಂಬ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು. ದಯವಿಟ್ಟು ಕಳೆದ ೬ ತಿಂಗಳುಗಳಿಂದ ಆಕ್ಟ್ರಾಯ್ ಕಾಂಪನ್‌ಸೇಷನ್‌ನ್ನು ಏನು ಕೊಡಬೇಕಾಗಿದೆ ಅದನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಚಾರವನ್ನು ಹೇಳುವುದಾದರೆ, ನನ್ನ ತಾಲ್ಲೂಕಿಗೆ ಒಂದು ನೀರಿನ ಸ್ಕೀಂ ಮಂಜೂರಾಗಿದೆ, ಅದು ಮಂಜೂರಾಗಿ ೨ ವರ್ಷವಾಯಿತು. ಆದರೂ ಅದು ಇನ್ನೂ ಮಂದ ಗತಿಯಲ್ಲೇ ಸಾಗುತ್ತಿದೆ. ಇದರ ಬಗ್ಗೆ ತಾವು ತೀವ್ರ ಗತಿಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಇಲ್ಲಿಗೆ ಸಭೆಯನ್ನು ಮುಕ್ತಾಯಮಾಡಿ. ನಾಳೆ ಕಂಟಿನ್ಯೂ ಮಾಡಿ.

ಅಧ್ಯಕ್ಷರು.—ಇನ್ನು ಮಾತನಾಡಬೇಕಾದ ಸದಸ್ಯರು ಕೇವಲ ೪ ಜನರಿದ್ದಾರೆ. ಒಬ್ಬೊಬ್ಬರಿಗೆ ಐದೈದು ಮಿನಿಟ್ ಎಂದರೂ ೨೦ ನಿಮಿಷದಲ್ಲಿ ಮುಗಿದುಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩ ಇಲಾಖೆಗಳ ಬೇಡಿಕೆ ಇದೆ. ನಾವು ನಿಮಗೆ ಸಾಕಷ್ಟು ಸಹಕಾರವನ್ನು ಕೊಡುತ್ತಿದ್ದೇವೆ. ದಯವಿಟ್ಟು ನಮ್ಮ ಮಾತನ್ನು ಕೇಳಿ. ನಮಗೆ ಪಾರ್ಟಿ ಮೀಟಿಂಗ್, ಇನ್ನೂ ಮುಂತಾದ್ದು ಇರುತ್ತದೆ. ಅದಕ್ಕೆ ನಾವು ಹೋಗಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಅಡ್ಜರ್ನ್ ಮಾಡಿ.

ಅಧ್ಯಕ್ಷರು.—ಇದುವರೆಗೆ ೨೫೦ ಮಿನಿಟ್ಸ್ ಮಾತನಾಡಿದ್ದಾರೆ. ಹಿಂದೆ ಯಾರಿಗೂ ಕೂಡ ಇಷ್ಟೊಂದು ಮಾತನಾಡುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಕ್ಕಲ್ಲಿ ಎನ್ನುತಕ್ಕ ಉದ್ದೇಶದಿಂದಲೇ ನಾವು ಜುಲೈ ೨೯ನೇ ತಾರೀಖಿನವರಿಗೂ ಸೆಷನ್ ಇಟ್ಟುಕೊಂಡಿದ್ದೇವೆ. ದಯವಿಟ್ಟು ಸಹಕರಿಸಿ. ೫.೩೦ ಗಂಟೆಯವರೆಗೆ ಸಭೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗುವುದಿಲ್ಲ.

ಅಧ್ಯಕ್ಷರು.—ಲಕ್ಷ್ಮೀಸಾಗರ್‌ರವರೇ, ಇನ್ನೂ ಮಾತನಾಡಬೇಕಾದವರು ೪ ಜನರಿದ್ದಾರೆ. ಆದರೆ ಅವರು ನಾಳೆ ಮಾತನಾಡಲಿ ಎಂದು ಹೇಳುತ್ತಿದ್ದಾರೆ. ಹಾಗಾದರೆ ನಾಳೆ ೧೦-೩೦ಕ್ಕೆ ಸೇರಬೇಕಾಗುತ್ತದೆ,

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ, ಅವರು ಕೇಳುತ್ತಿದ್ದಾರೆ. ಯಾವಾಗಲೂ ಅವರು ಹೇಳಿದಂತೆಯೇ ಆಗಬೇಕಾಗಿದೆ.

ಅಧ್ಯಕ್ಷರು.—ಅವರು ಹೇಳಿದಂತೆ ನಾವು ಕೇಳಬೇಕಾಗುತ್ತದೆ. ಆಗಲಿ. ನಾಳೆ ಬೆಳಿಗ್ಗೆ ೧೧ ಗಂಟೆಗೆ ಸೇರೋಣ.

(ಸದನವು ಸಂಜೆ ೫-೧೫ ಗಂಟೆಗೆ ಮುಕ್ತಾಯವಾಗಿ ಮತ್ತೆ ನಾಳೆ (ಮಂಗಳವಾರ) ತಾ. ೧೭-೫-೧೯೮೮ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ತೀರ್ಮಾನಿಸಿತು).